بِسْمِ اللّٰهِ الرَّحْمٰنِ الرَّحِيْمِ　نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ　وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 41

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14 ಅಕ್ಟೊಬರ್ 2021, 14 ಅಖಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
07 ರಬೀಉಲ್ ಅವ್ವಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

وَكُلُوْا مِمَّا رَزَقَكُمُ اللّٰهُ
حَلٰلًا طَيِّبًا وَّاتَّقُوا اللّٰهَ
الَّذِيْٓ اَنْتُمْ بِهٖ مُؤْمِنُوْنَ

**(ಅಲ್‌ಮಾಇದ: 89)**

**ಅಂದರೆ: ಅಲ್ಲಾಹನು ನಿಮಗೆ ಒದಗಿಸಿ ಕೊಟ್ಟವುಗಳಿಂದ ಧರ್ಮಬದ್ಧವೂ ಪರಿಶುದ್ಧವೂ ಆದ ವಸ್ತುಗಳನ್ನು ನೀವು ಭುಜಿಸಿರಿ. ನೀವು ನಂಬಿಕೊಂಡಿರುವ ಅಲ್ಲಾಹನಿಗೆ ಭಯಭಕ್ತಿಯುಳ್ಳವರಾಗಿರಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಎಲ್ಲಾ ಮುಸಲ್ಮಾನರು ದಾನ ಮಾಡುವುದು ಅನಿವಾರ್ಯವಾಗಿದೆ.

(1442) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ನಬಿ(ಸ) ನುಡಿದರು. ದಾಸರು ಮುಂಜಾನೆ ಏಳುವಾಗ, ಎರಡು ದೇವದೂತರು ಅವತರಿಸದೆ ಯಾವ ದಿನವು ಕಳೆಯುವುದಿಲ್ಲ. ಅವರಲ್ಲಿ ಒಬ್ಬನು ಹೇಳುತ್ತಾನೆ. ಓ ಅಲ್ಲಾಹ್! ಖರ್ಚು ಮಾಡುವವನಿಗೆ ಪ್ರತಿಫಲ ನೀಡು. ಇನ್ನೊಬ್ಬನು ಹೇಳುತ್ತಾನೆ. ಖರ್ಚು ಮಾಡದವನ ಸಂಪತ್ತು ನಿರರ್ಥಕವಾಗುವುದು.

(1445) ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) ವರದಿ ಮಾಡುತ್ತಾರೆ. ನಬಿ(ಸ) ನುಡಿದರು. ಎಲ್ಲಾ ಮುಸಲ್ಮಾನರಿಗೆ ದಾನ ಮಾಡುವುದು ಅನಿವಾರ್ಯವಾಗಿದೆ. ಜನರು ಹೇಳಿದರು. ಓ ಪ್ರವಾದಿವರ್ಯರೇ! ಸಾಮರ್ಥ್ಯವಿಲ್ಲದವನು ಏನು ಮಾಡಬೇಕು. ಅವರು ನುಡಿದರು. ತಮ್ಮ ಕೈಗಳಿಂದ ದುಡಿಯಬೇಕು. ಸ್ವಯಂ ಲಾಭ ಮಾಡಿಕೊಳ್ಳಬೇಕು ಮತ್ತು ದಾನ ಸಹ ಮಾಡಬೇಕು. ಆಗ ಅವರು ಕೇಳಿದರು. ಇದು ಸಹ ಆಗಲಿಲ್ಲವೆಂದರೇ? ಪ್ರವಾದಿ(ಸ) ನುಡಿದರು. ಆಗತ್ಯ ಉಳ್ಳವನು ಆಪತ್ತಿನಲ್ಲಿ ಸಿಲುಕಿದವನಿಗೆ ಸಹಕರಿಸಬೇಕು. ಅವರು ಹೇಳಿದರು. ಅದು ಸಹ ಆಗದಿದ್ದರೆ? ಅವರು ನುಡಿದರು. ಒಳ್ಳೆಯ ಮಾತಿನ ಮೇಲೆ ನಡೆಯಬೇಕು ಮತ್ತು ಕೆಟ್ಟ ಮಾತುಗಳಿಂದ ದೂರವಿರಬೇಕು. ಅದುವೇ ಅವನು ಮಾಡುವ ಸದ್‌ಖಾ (ದಾನ) ಆಗಿದೆ. **(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝ್ಝಕಾತ್, ಮುದ್ರಣ 2008 ಖಾದಿಯಾನದ)**

**ಪ್ರವಾದಿಗಳು ಎಲ್ಲಾ ರೀತಿಯ ಸುಧಾರಣೆಗೋಸ್ಕರ ಆಗಮಿಸಿರುತ್ತಾರೆ. ಅವರು ಪತ್ನಿ ಮಕ್ಕಳು ಹೊಂದದವರಾದರೆ, ಈ ವಿಷಯದಲ್ಲಿ ಹೇಗೆ ಸುಧಾರಣೆ ತರಲು ಸಾಧ್ಯ.**

**ಲೋಕ ಮತ್ತು ಲೌಕಿಕ ವಸ್ತುಗಳು ಪ್ರವಾದಿಗಳ ಮೇಲೆ ಯಾವ ಪರಿಣಾಮವು ಬೀರಲು ಸಾಧ್ಯವಿಲ್ಲ. ಅವರುಗಳು ಈ ನಶ್ವರ ರುಚಿಗಳಲ್ಲಿ ಯಾವ ಲೋಕವು ಹೊಂದಿರುವುದಿಲ್ಲ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಪ್ರವಾದಿಗಳು ಸಹ ಪತ್ನಿ ಮಕ್ಕಳನ್ನು ಹೊಂದಿರಲು ಏನು ಕಾರಣ?

ಕೆಲ ಮೂಢರು ಈ ಸಂಶಯದಲ್ಲಿ ಸಿಲುಕಿರುತ್ತಾರೆ. ಪ್ರವಾದಿಗಳು ಅಲ್ಲಾಹನ ಸಾನಿಧ್ಯದಲ್ಲಿ ತಮ್ಮ ಸರ್ವಸ್ವವನ್ನು ಸಮರ್ಪಿಸಿರುತ್ತಾರೆ. ಲೌಕಿಕ ಆಸಕ್ತಿಯಿಂದ ದೂರವಾಗಿರುತ್ತಾರೆ? ಈ ಜನರು ಅಷ್ಟು ಅರ್ಥೈಸಿಕೊಳ್ಳುವುದಿಲ್ಲ. ವ್ಯಕ್ತಿಯೊಬ್ಬನು ಲೌಕಿಕ ಮೋಹಗಳಿಗೆ ಬಂಧಿಯಾಗಿರುತ್ತಾನೆ. ಮತ್ತು ಲೌಕಿಕ ಮೋಹಗಳಿಗೆ ಬಲಿಯಾಗಿರುತ್ತಾನೆ. ಆದರೆ ಪ್ರವಾದಿಗಳು ಇವೆಲ್ಲಾ ಮಾತುಗಳಿಂದ ಪರಿಶುದ್ಧರಾಗಿರುತ್ತಾರೆ. ಇವೆಲ್ಲ ವಸ್ತುಗಳು ಅವರ ಸೇವಕರ ರೀತಿಯಲ್ಲಿ ಇರುತ್ತವೆ. ಅದಲ್ಲದೇ ಪ್ರವಾದಿಗಳು ಎಲ್ಲಾ ರೀತಿಯ ಮಾರ್ಗದರ್ಶನಕ್ಕಾಗಿ ಬಂದಿರುತ್ತಾರೆ. ಅವರಿಗೆ ಹೆಂಡತಿ ಮಕ್ಕಳಿಲ್ಲದಿದ್ದರೆ, ಆ ವಿಷಯದಲ್ಲಿ ಅವರು ಹೇಗೆ ನಮಗೆ ಮಾರ್ಗದರ್ಶಕರಾಗಬಲ್ಲರು. ಆದ ಕಾರಣವೇ ನಾನು ಹೇಳುವುದು. ಕ್ರೈಸ್ತರು ದಾಂಪತ್ತಿಕ ಜೀವನದಲ್ಲಿ ಮಸೀಹರ ಯಾವ ನಮೂನೆ ಪ್ರಸ್ತುತಪಡಿಸಬಲ್ಲರು? ಏನು ಪ್ರಸ್ತುತಪಡಿಸಲು ಸಾಧ್ಯವಿಲ್ಲ. ಅವರು ಆ ವಿಷಯದಲ್ಲಿ ಅಜ್ಞಾತರಾಗಿರುವಾಗ ಅದರ ಹಂತಗಳೇ ತಿಳಿಯದಿರುವಾಗ ಹೇಗೆ ಮಾರ್ಗದರ್ಶನ ನೀಡಬಲ್ಲರು. ಹಝ್ರತ್ ರಸೂಲುಲ್ಲಾಹ್(ಸ) ರವರ ಶ್ರೇಷ್ಠತೆ ನೋಡಿ ಅವರು ಎಲ್ಲಾ ಹಂತದಲ್ಲೂ ಪರಿಪೂರ್ಣ ಮಾದರಿಯಾಗಿದ್ದಾರೆ. ಪ್ರವಾದಿಗಳ ಮೇಲೆ ಲೋಕ, ಲೌಕಿಕ ವಸ್ತುಗಳು ಯಾವ ಪರಿಣಾಮವು ಬೀರಲು ಸಾಧ್ಯವಿಲ್ಲ. ಏಕೆಂದರೆ ಅವರು ನಶ್ವರವಾದ ವಸ್ತುಗಳನ್ನು ಲೆಕ್ಕಿಸುವುದಿಲ್ಲ. ಬದಲು ಅವರ ಹೃದಯ ಅಲ್ಲಾಹನೆಡೆ ಒಂದು ಹಂತವಾದ ನದಿಯ ರೀತಿಯಲ್ಲಿ ಹರಿದು ಹೋಗುತ್ತದೆ. ಅದರ ರಭಸಕ್ಕೆ ಎಲ್ಲಾ ಕಲ್ಮಶಗಳು ಹರಿದು ಹೋಗುತ್ತದೆ.

ಅಂತೂ ಪ್ರವಾದಿಗಳು ಇವೆಲ್ಲಕ್ಕೂ ಗುಲಾಮರಾಗಿರುವುದಿಲ್ಲ. ಬದಲು ಈ ವಸ್ತುಗಳು ಅವರಿಗೆ ಸೇವಕಿಯರ ರೀತಿಯಲ್ಲಿರುತ್ತವೆ ಅವರ ಉನ್ನತ ಮಟ್ಟದ ನೈತಿಕ ಮಹೋನ್ನತೆ ಅಲ್ಲಾಹನ ಸ್ಮರಣೆ ಮತ್ತು ಅವನ ಸೌಂದರ್ಯಕ್ಕೆ ಸಮರ್ಪಿತವಾಗಿರುತ್ತದೆ. ಆದ್ದರಿಂದ ಯಾವ ಆತಂಕವೂ ಇರುವುದಿಲ್ಲ. ಅವರ ಸಮರ್ಪಣಾ ಭಾವ ಅವರಿಗೆ ಎಲ್ಲರಿಂದ ಪ್ರತ್ಯೇಕವಾಗಿರುತ್ತದೆ. ಏನಾದರೂ ಅವಶ್ಯಕತೆ ಬಂದು ಬಿಟ್ಟರೆ ಅಲ್ಲಾಹನ ಮಾರ್ಗದರ್ಶನ ಅವರಿಗೆ ದೊರೆಯುತ್ತದೆ. ಇದು ಒಪ್ಪಿತ ತತ್ವವಾಗಿದೆ. ಮನಸ್ಸಿದ್ದಲ್ಲಿ ಮಾರ್ಗ, ಅದರಲ್ಲಿ ಎಷ್ಟೊಂದು ಶಕ್ತಿ ಅಡಗಿರುತ್ತದೆ ಎಂದರೆ ಇಹ ಪರರ ಎಲ್ಲಾ ಮಾತುಗಳು ಅದರಲ್ಲಿ ಭಸ್ಮವಾಗಿರುತ್ತದೆ. ಅದು ಅಲ್ಲಾಹನ ಅನುಗ್ರಹ ಮತ್ತು ಕಾರುಣ್ಯದಿಂದ ತನ್ನೆಡೆ ಸೆಳೆಯುತ್ತದೆ. ಅದು ಅದೇ ಸಂಘಟನೆಗೆ ಬಾಕಿ ಎಲ್ಲಾ ಸಂಘಟನೆಗಳ ಮೇಲೆ ವಿಜಯಿಯಾಗಿರುತ್ತದೆ. ಆದರೆ ಅದಕ್ಕಾಗಿ ಜಪತಪದ ಅವಶ್ಯಕತೆಯಿದೆ ಅದರ ಹೊರತು ಈ ಮಾರ್ಗ ತಿಳಿಯುವುದಿಲ್ಲ. ಅಂದ ಹಾಗೆ, **ವಲ್ಲಝೀನ ಜಾಹದೂ ಫೀನಾ ಲನಹ್‌ದಿ ಯನ್ನಹುಮ್ ಸುಬುಲನಾ** (ಅಲ್ ಅನ್‌ಕಬೂತ್-70)

**(ಮಲ್ಫೂಝಾತ್ ಸಂಪುಟ-1, ಪುಟ-328, ಮುದ್ರಣ ಖಾದಿಯಾನ್ 2018)**

**ನಿಜವಾಗಿಯೂ ಪ್ರತಿಯೊಬ್ಬ ಮುಸಲ್ಮಾನ ಪವಿತ್ರ ಖುರ್‌ಆನ್ ಅರ್ಥಸಹಿತ ಪಠಿಸುವುದು ಕರ್ತವ್ಯವಾಗಿದೆ. ಅದನ್ನು ಗಣನೆಗೆ ತೆಗೆದುಕೊಳ್ಳದಿರುವುದು ತುಂಬಾ ವಿನಾಶಕ್ಕೆ ಕಾರಣವಾಗಿದೆ.**
**ಅಲ್ಲಾಹನು ಯಾವ ರೀತಿ ಮುಸಲ್ಮಾನರ ಹೃದಯಗಳಲ್ಲಿ ಪವಿತ್ರ ಖುರ್‌ಆನ್‌ನ ಪ್ರತಿ ಪ್ರೀತಿ ಹಾಕಿದ್ದಾನೆಂದರೆ ಅವರಿಗೆ ಅರ್ಥವಾಗಲಿ ಬಿಡಲಿ ಪಠಿಸುತ್ತಿರುತ್ತಾರೆ. ಯೋಚಿಸಿ ನೋಡಿದರೆ ಅದು ಸಹ ಈ ವಚನದಲ್ಲಿ ನೀಡಲಾದ ವಾಗ್ದನವನ್ನು ದೃಢೀಕರಿಸಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅಲ್ ಹಿಜ್‌ರ್ ವಚನ 10 **ಇನ್ನ ನಹನು ನಝ್ಝಲ್‌ನಝ್ಝಿಕ್ರ ವ ಇನ್ನ ಲಹೂ ಲಹಾಫಿಝೀನ್** ಇದರ ವ್ಯಾಖ್ಯಾನ ಮಾಡುತ್ತಾ ನುಡಿಯುತ್ತಾರೆ:

ಒಬ್ಬ ಬ್ರಿಟಿಷ್ ಖುರ್‌ಅನ್ ಅನುವಾದಕ ಬರೆಯುತ್ತಾನೆ. ಖುರ್‌ಆನ್ ಯಾವ ರೀತಿಯ ಬರಹದಲ್ಲಿದೆ. ಏನೆಂದರೆ ಅದನ್ನು ಕ್ರಮಬದ್ಧವಾಗಿ ಓದದಿರಲು ಸಾಧ್ಯವೇ ಇಲ್ಲ. ಅಂದ ಹಾಗೆ ಪವಿತ್ರ ಖುರ್‌ಆನ್‌ನ ಭಾಷೆ ಅಲ್ಲಾಹನು ಪವಿತ್ರ ಖುರ್‌ಆನ್‌ನ ಸುರಕ್ಷತೆಗೆ ಮಾಡಿದ ಸಾದನೆಗಳಲ್ಲಿ ಒಂದಾಗಿದೆ. ಅದಕ್ಕಾಗಿ ಅಲ್ಲಾಹನು ಪವಿತ್ರ ಖುರ್‌ಆನ್‌ನನ್ನು ಪ್ರಾರಂಭದಿಂದ ಅಂತ್ಯದವರೆಗೆ ಕಂಠಸ್ಥ ಮಾಡುವಂತಹ ಜನರನ್ನು ದಯಪಾಲಿಸಿದ್ದಾನೆ. ಎರಡನೆಯದಾಗಿ ಅದರ ಭಾಷೆ ಸರಳ ಮತ್ತು ಮನದಟ್ಟಾಗುವ ರಿತಿಯಲಿದ್ದು ಅದು ಬೇಗ ಕಂಠಪಾಠ ಮಾಡಲು ಸಾಧ್ಯವಾಗುತ್ತದೆ. ಮೂರನೆಯದಾಗಿ ಅದರ ಪಠಣ

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಅಲ್ಲಾಹನು ತನ್ನ ಆಜ್ಞೆಯನ್ನು ಜಾರಿಗೊಳಿಸುವವನಾಗಿದ್ದಾನೆ. ತನ್ನ ವಾಗ್ದಾನವನ್ನು ಈಡೇರಿಸುವವನಾಗಿದ್ದಾನೆ. ಅವನು ಒಂದು ಸಮುದಾಯದ ನಂತರ ಇನ್ನೊಂದು ಸಮುದಾಯವನ್ನು ತರುವನು. ಅಲ್ಲಾಹನ ಆಜ್ಞೆಗಳನ್ನು ಜಾರಿಗೊಳಿಸಲಿಕ್ಕಾಗಿ ನೀವು ಅಲ್ಲಾಹನೊಡನೆ ಮಾಡಿದ ಪ್ರತಿಜ್ಞೆಗಳನ್ನು ಈಡೇರಿಸುವ ವ್ಯಕ್ತಿಯನ್ನು ಅನುಸರಿಸಿರಿ. ನೀವು ನಿಮ್ಮ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡದಿರಿ. ಇಲ್ಲದಿದ್ದರೆ ಅಲ್ಲಾಹನು ನಿಮ್ಮ ಬದಲಾಗಿ ಬೇರೆಯವರನ್ನು ತರುವನು...... ಶತ್ರುಗಳು ಮುಸ್ಲಿಂ ಸಮುದಾಯವನ್ನು ನಾಶಪಡಿಸುವರು ಎಂಬ ಭಯ ನನಗಿಲ್ಲ. ಬದಲಾಗಿ ನೀವು ಮುಸ್ಲಿಮರಿಂದಲೇ ಮುಸ್ಲಿಂ ಸಮುದಾಯ ನಾಶವಾಗುವುದು ಎಂಬ ಭಯವಿದೆ. (ಹಝ್ರತ್ ಉಮರ್(ರ))

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

ಚೀನ ದೇಶದ ಅರಸ ಮುಸ್ಲಿಮರ ಸ್ಥಿತಿಗತಿಗಳನ್ನು ಮತ್ತು ಘಟನೆಗಳನ್ನು ಕೇಳಿದ ನಂತರ ಯಝ್‌ದಜರ್‌ದಿಗೆ ಹೀಗೆ ಪತ್ರ ಬರೆದರು: ನಿನ್ನ ದೂತನು ಮುಸ್ಲಿಮರ ವೈಶಿಷ್ಟ್ಯಗಳ ಬಗ್ಗೆ ಹೇಳಿದ ಮಾತುಗಳಿಂದ ನನಗೆ ಅನಿಸುವುದೇನೆಂದರೆ, ಅವರು ಪರ್ವತವನ್ನು ಕೂಡ ಡಿಕ್ಕಿ ಹೊಡೆದರೂ ಅದನ್ನು ಅವರು ಪುಡಿಪುಡಿಯನ್ನಾಗಿ ಮಾಡುವರು.

---

ನಾವು ಎಲ್ಲಿಯವರೆಗೆ ಕಳ್ಳತನದಲ್ಲಿ, ದರೋಡೆಯಲ್ಲಿ ಮತ್ತು ದ್ರೋಹ ಮಾಡುವುದಿಲ್ಲವೋ ಅಲ್ಲಿಯ ವರೆಗೆ ನಮ್ಮ ವಿಷಯವು ಯಾವಾಗಲೂ ಉತ್ತುಂಗ ಸ್ಥಾನದಲ್ಲಿಯೇ ಇರುವುದು ಮತ್ತು ನಾವು ಎಲ್ಲಾ ವಿಷಯಗಳಲ್ಲಿಯೂ ರಕ್ಷಣೆಯಲ್ಲಿರುವೆವು. ನಾವು ಕಳ್ಳತನಕ್ಕೆ ದ್ರೋಹ ಮಾಡಲು ಪ್ರಾರಂಭಿಸಿದಾಗ ಮತ್ತು ಈ ಬೇಡದ ವಿಳಯಗಳು ನಮ್ಮೊಳಗೆ ಗೋಚರಿಸಿದಾಗ, ಈ ದುಷ್ಟ ಕಾರ್ಯಗಳು ನಮ್ಮಲ್ಲಿ ಹೆಚ್ಚಿನವರನ್ನು ಆವರಿಸುತ್ತವೆ. (ಹಝ್ರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ))

## ಟರ್ಕಿಶ್ ಇಂಟರ್‌ನೆಟ್ ರೇಡಿಯೋದ ಉದ್ಘಾಟನೆಯ ಘೋಷಣೆ

ನಾಲ್ಕು ದಿವಂಗತರಾದ ಮರಾಕಿಶಿನ ಸನ್ಮಾನ್ಯ ಮುಹಮ್ಮದ್ ಅಲ್‌ಮುಖ್ತಾರ್ ಕಬ್‌ಕಾ ಸಾಹಿಬ್, ಖಾದಿಯಾನಿನ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕಿನ ಮಾಜಿ ಖಾದಿಮ್ ಮಸ್ಜಿದ್ ಆಗಿದ್ದ ಸನ್ಮಾನ್ಯ ಮಹ್ಮೂದ್ ಅಹ್ಮದ್ ಸಾಹಿಬ್, ಕೇರಳದ ಅಬ್ದುರ್ರಹ್ಮಾನ್ ಸಾಹಿಬ್‌ರ ಪತ್ನಿಯಾದ ಸೌದ ಸಾಹಿಬ ಮತ್ತು ಫೈಸಲಾಬಾದಿನ ಶೇಖ್ ಅಬ್ದುಲ್‌ಮಜೀದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಯ್ಯದ ಮಜೀದ್ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–08–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَ اِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಿಸಿದ ಘಟನೆಗಳ ಪ್ರಸ್ತಾಪ ನಡೆಯುತ್ತಿದೆ. ಅವರ ಕಾಲದಲ್ಲಿ "ರೇ" ಎಂಬ ಕರೆಯಲ್ಪಡುವ ಒಂದು ಯುದ್ಧ ನಡೆಯಿತು. ರೇ ಎಂಬುದು ಪರ್ವತಗಳ ಪ್ರದೇಶದ ಒಂದು ಪ್ರಸಿದ್ಧ ಪಟ್ಟಣವಾಗಿದೆ. ಅದು ನೀಶಾಪೂರಿನಿಂದ 480 ಮೈಲುಗಳಷ್ಟು ಮತ್ತು ಕಝ್ವೀನಿನಿಂದ 51 ಮೈಲುಗಳಷ್ಟು ದೂರದಲ್ಲಿದೆ. "ರೇ"ಯ ನಿವಾಸಿಗಳನ್ನು ರಾಝಿ ಎಂದು ಕರೆಯಲಾಗುತ್ತದೆ. ಪ್ರಸಿದ್ಧ ವ್ಯಾಖ್ಯಾನಗಾರ ಹಝ್ರತ್ ಇಮಾಂ ಫಖ್‌ರುದ್ದೀನ್ ರಾಝಿ ರೇ ನಿವಾಸಿಯಾಗಿದ್ದರು. "ರೇ"ಯ ಅಧಿಕಾರಿ ಸಿಯಾಯೋಖಶ್ ಬಿನ್ ಮಹ್‌ರಾನ್ ಬಿನ್ ಬಹ್‌ರಾಂ ಆಗಿದ್ದರು. ದುಂಬಾವಂದ್, ತಿಬರಿಸ್ತಾನ್, ಖೋಮಸ್ ಮತ್ತು ಜರ್ಜಾನಿನವರನ್ನು ತನ್ನ ಸಹಾಯಕ್ಕಾಗಿ ಅವನು ತಯಾರಿ ಮಾಡಿದನು. ಮುಸ್ಲಿಮರು ರೇಯ ರಸ್ತೆಯಲ್ಲಿರುವಾಗಲೇ ಇರಾನಿನ ಸರದಾರ ಅಬುಲ್‌ಫರ್‌ಖಾನ್ ಝೈನಬಿ ಮೈತ್ರಿ ಮಾಡುವ ಉದ್ದೇಶದಿಂದ ಮುಸ್ಲಿಮರನ್ನು ಭೇಟಿ ಮಾಡಿದನು. ನಈಂ ಬಿನ್ ಮಖ್‌ರನ್‌ರೊಡನೆ ಝೈನಬಿ ಹೇಳಿದರು: ನೀವು ನನ್ನೊಂದಿಗೆ ಕೆಲವು ಕುದುರೆಸವಾರರನ್ನು ಕಳುಹಿಸಿರಿ. ನಾನು ರಹಸ್ಯವಾಗಿ ರಸ್ತೆಯಲ್ಲಿ ಒಳಗೆ ಹೋಗುತ್ತೇನೆ. ಹೀಗೆ ರಾತ್ರಿ ವೇಳೆ ನಈಂ ಬಿನ್ ಮುಖರ್ರಿನ್‌ರವರು ತಮ್ಮ ಸೋದರಳಿಯರಾದ ಮುನ್‌ಝಿರ್ ಬಿನ್ ಉಮರ್‌ರವರ ನೇತೃತ್ವದಲ್ಲಿ ಕೆಲವು ಅಶ್ವದಳದ ತುಡುಕಿಯನ್ನು ಝೈನಬಿಯರವರೊಂದಿಗೆ ಕಳುಹಿಸಿದರು ಮತ್ತು ಇಲ್ಲಿ ಅವರು ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಸ್ವತಃ ಪಟ್ಟಣದ ಮೇಲೆ ಹಲ್ಲೆ ನಡೆಸಿದರು. ಯುದ್ಧ ಪ್ರಾರಂಭವಾಯಿತು. ವೈರಿಗಳು ಬಹಳ ಧೈರ್ಯದಿಂದ ಹೋರಾಡುತ್ತಿದ್ದರು ಆದರೆ ಝೈನಬಿಯ ಸಹಾಯದಿಂದ ಮುಸ್ಲಿಮರು ಪಟ್ಟಣದಲ್ಲಿ ರಹಸ್ಯವಾಗಿ ಪ್ರವೇಶಿಸಿ ಹಿಂದಿನಿಂದ ಘೋಷಣೆಗಳನ್ನು ಕೂಗುತ್ತಿರುವುದನ್ನು ಆಲಿಸಿದಾಗ ಅವರು ತಮ್ಮ ಧೈರ್ಯವನ್ನು ಕಳೆದುಕೊಂಡರು ಹೀಗೆ ಈ ಪಟ್ಟಣವನ್ನು ಮುಸ್ಲಿಮರು ವಶಪಡಿಸಿದರು. ಪಟ್ಟಣದ ನಿವಾಸಿಗಳಿಗೆ ಲಿಖಿತವಾಗಿ ಅಭಯವನ್ನು ನೀಡಲಾಯಿತು. ಅಭಯ ನೀಡಲಾದಾಗ ಬರೆದ ಪತ್ರ ಹೀಗಿದೆ: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಇದು ಝೈನಬಿಗೆ ನಈಂ ಮಕ್ರನ್ ಬರೆಯುವ ಲಿಖಿತವಾಗಿದೆ. ನಈಮರು ರೇ ನಿವಾಸಿಗಳಿಗೆ ಮತ್ತು ಅವರೊಂದಿಗೆ ಇರುವ ಹೊರಗಿನ ನಿವಾಸಿಗಳಿಗೆ ಅಭಯವನ್ನು ನೀಡುತ್ತಿದ್ದಾರೆ. ಪ್ರೌಢ ವಯಸ್ಸಿನ ಪ್ರತಿಯೊಬ್ಬರು ತಮ್ಮ ಶಕ್ತಿಯಾನುಸಾರ ಜಿಝಿಯ ಕೊಡಬೇಕು ಮತ್ತು ಒಳಿತು ಮಾಡಬೇಕು ಎಂಬ ಶರತ್ತಿನೊಂದಿಗೆ. ಅವರು ಜನರಿಗೆ ಮಾರ್ಗವನ್ನು ಹೇಳಿಕೊಡಬೇಕು, ಮೋಸವನ್ನು ಮಾಡಬಾರದು, ಒಂದು ದಿನರಾತ್ರಿ ಮುಸ್ಲಿಮರಿಗೆ ಆತಿಥ್ಯ ನೀಡಬೇಕು ಮತ್ತು ಗೌರವಿಸಬೇಕು. ಮುಸ್ಲಿಮರನ್ನು ಬೈಯ್ಯುವವರಿಗೆ ಶಿಕ್ಷೆ ಸಿಗುವುದು. ಅವರ ಮೇಲೆ ಆಕ್ರಮಣ ನಡೆಸುವವರನ್ನು ಕೊಲ್ಲಲಾಗುವುದು. ಹೇಗಿದ್ದರೂ ಹೀಗೆ ಬರೆದು ಸಾಕ್ಷಿಗಳ ಸಹಿ ಹಾಕಲಾಯಿತು. (ಪ್ರಬಂಧ: ತಾರೀಖೆ ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ–170–172) (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–537, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್, ಸಂಪುಟ–1, ಪುಟ–511, ಸಂಪುಟ–3, ಪುಟ–132, ದರುಲ್ ಕುತುಬ್ ಇಲ್‌ಮಿಯ ಬೈರೂತ್)

ಅನಂತರ ಹಿಜರೀ 22ರಲ್ಲಿ ಖೋಮೇಸ್ ಮತ್ತು ಜರ್ಜಾನ್ ಮೇಲೆ ವಿಜಯ ಸಾಧಿಸಲಾಯಿತು. ಹಿಜರೀ 22ರಲ್ಲೇ ಆಝರ್‌ಬಾಇಜಾನ್ ವಿಜಯ ನಡೆಯಿತು. ರೇ ಮೇಲೆ ವಿಜಯದ ಸುವಾರ್ತೆಯೊಂದಿಗೆ ದೂತನು ಹಝ್ರತ್ ಉಮರ್‌ರ ಬಳಿಗೆ ತಲುಪಿದಾಗ, ತನ್ನ ಸಹೋದರ ಸವೇದ್ ಬಿನ್ ಮಕ್‌ರನನ್ನು ಖುಮೇಸಿನ ವಿಜಯಕ್ಕಾಗಿ ಕಳುಹಿಸಲು  ಅವರು ನಈಂ ಬಿನ್ ಮಕ್‌ರಿಗೆ ಪತ್ರ ಬರೆದರು. ಈ ಪಟ್ಟಣ ರೇ ಮತ್ತು ನೀಶಾಪೂರಿನ ನಡುವೆ ತಿಬರಿಸ್ತಾನದ ಪರ್ವತಗಳ ಶೃಂಖಲೆಗಳ ಕೊನೆಯ ಭಾಗದಲ್ಲಿದೆ. ಖುಮೇಸ್‌ನ ನಿವಾಸಿಗಳು ಯಾವುದೇ ಅಡೆತಡೆಗಳನ್ನು ಮಾಡಲಿಲ್ಲ. ಸುವೇದ್ ಅವರಿಗೆ ಅಭಯ ನೀಡಿದರು ಮತ್ತು ಸಂಧಾನದ ಲಿಖಿತವನ್ನು ಬರೆದರು. ತಿಬರಿಸ್ತಾನ್ ಮತ್ತು ಖುರಾಸಾನಿನ ನಡುವೆ ಜರ್ಜಾನ್ ಎಂಬ ಒಂದು ದೊಡ್ಡ ಪಟ್ಟಣವಿದೆ. ತಿಬರಿಸ್ತಾನಿನ ಜನರು ಸಹ ಸುವೇದ್‌ನ ಬಳಿಗೆ ಜನರನ್ನು ಕಳುಹಿಸಿದರು.

ಅವರು ಸಹ ಜಿಝಿಯದ ಶರತ್ತಿನೊಂದಿಗೆ ಸಂಧಾನ ಮಾಡಿದರು. ಪ್ರದೇಶದ ಎಲ್ಲರಿಗೂ ಅಭಯದ ಪತ್ರವನ್ನು ಬರೆದು ಕಳುಹಿಸಿದರು. ಧರ್ಮದ ಯಾವುದೇ ಮಾತು ನಡೆಯಲಿಲ್ಲ. ಸಂಧಾನ ಮಾಡಿದವರೊಡನೆ ಸಂಧಾನದ ಮಾತು ನಡೆಯಿತು. (ಸೀರತ್ ಅಮೀರುಲ್ ಮುಮಿನೀನ್, ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ ಪುಟ-432, ದಾರುಲ್ ಮಾರಿಫ ಬೈರೂತ್ 2007)

ಯಾವುದೇ ಧರ್ಮದ ಬಗ್ಗೆ ಮಾತನಾಡಲಿಲ್ಲ. ಸಂಧಾನ ಮಾಡಿದವರೊಂದಿಗೆ ಸಮನ್ವಯ ಸಾಧಿಸಲಾಯಿತು. ನಂತರ ಅಜರ್ಬೈಜಾನ್ ನ ವಿಜಯವಿದೆ. ಇದು ಕೂಡ 22 ಹಿಜರಿಯಲ್ಲಿ ನಡೆಯಿತು. ಅಜರ್ಬೈಜಾನಿ ದಂಡಯಾತ್ರೆಯ ಧ್ವಜವನ್ನು ಹಝ್ರತ್ ಉಮರ್(ರ) ಅವರು ಈ ಹಿಂದೆ ಹೇಳಿದಂತೆ ಉತ್ಬಾ ಬಿನ್ ಫರ್ಕಾದ್ ಮತ್ತು ಬುಕೈರ್ ಬಿನ್ ಅಬ್ದುಲ್ಲಾ ಅವರಿಗೆ ನೀಡಿದರು. ಮತ್ತು ಹಝ್ರತ್ ಉಮರ್(ರ)ರವರು ಅವರಿಬ್ಬರೂ ಬೇರೆ ಬೇರೆ ಕಡೆಯಿಂದ ದಾಳಿ ಮಾಡಬೇಕೆಂದು ಸೂಚನೆ ನೀಡಿದ್ದರು. ಬುಕೈರ್ ಬಿನ್ ಅಬ್ದುಲ್ಲಾ ಸೈನ್ಯದೊಂದಿಗೆ ಹೊರಟರು ಮತ್ತು ಜರ್ಮಿಝಾನ್ ಬಳಿ ರುಸ್ತಮ್‌ನ ಸಹೋದರನಾದ ಇಸ್ಫಂದ್ ಯಾಝ್ ಬಿನ್ ಫರ್ರುಖ್ ಝಾಝ್ ಆತನು ವಾಜ್ರೂಝ್‌ನ ಯುದ್ಧದಲ್ಲಿ ಸೋತ ಓಡಿಹೋಗಿದ್ದನು ಅವನು ಯುದ್ಧಕ್ಕಾಗಿ ಎದುರಾದನು. ಇದು ಅಜರ್ಬೈಜಾನ್‌ನಲ್ಲಿ ಬುಕೈರ್‌ನ ಮೊದಲ ಯುದ್ಧವಾಗಿತ್ತು. ಯುದ್ಧ ನಡೆಯಿತು. ಶತ್ರುವನ್ನು ಸೋಲಿಸಲಾಯಿತು ಮತ್ತು ಇಸ್ಫಾಂಡ್ ಯಾಜ್ ಅನ್ನು ಸೆರೆಹಿಡಿಯಲಾಯಿತು. ಇಸ್ಫಂದ್ ಯಾಝ್ ಅವನು ಇಸ್ಲಾಮಿನ ಸೇನಾಧಿಪತಿಯಾದ ಬುಕೈರ್ ಅವರನ್ನು ಕೇಳಿದನು, "ನೀವು ಸಂಧನವನ್ನು ಇಷ್ಟಪಡುತ್ತೀರೋ ಅಥವಾ ಯುದ್ಧವನ್ನು ಇಷ್ಟಪಡುತ್ತೀರಾ?" ಬುಕೈರ್ ಸಂಧಾನ ಎಂದು ಉತ್ತರಿಸಿದರು. ಅವನು, "ಹಾಗಾದರೆ ನನ್ನನ್ನು ನಿಮ್ಮ ಜೊತೆಯಲ್ಲಿ ಇರಿಸಿರಿ" ಎಂದು ಹೇಳಿದನು. ನಾನು ಅವರ ಪರವಾಗಿ ನಿಮ್ಮೊಂದಿಗೆ ಸಂಧಾವನ್ನುನ್ನು ಮಾಡಿಕೊಳ್ಳದ ಹೊರತು ಈ ಜನರು ಎಂದಿಗೂ ಸಂಧಾನ ಮಾಡಿಕೊಳ್ಳುವುದಿಲ್ಲ. ಅವರು ಯುದ್ಧ ಮಾಡುತ್ತಲೇ ಇರುತ್ತಾರೆ ಸುತ್ತಮುತ್ತಲಿನ ಪರ್ವತಗಳಲ್ಲಿ ಚದುರಿಹೋಗುತ್ತಾರೆ ಅಥವಾ ಅವರು ಕೋಟೆಗಳಲ್ಲಿ ಬಚ್ಚಿಕೊಳ್ಳುತ್ತಾರೆ. ಬುಕೈರ್ ಇಸ್ಫಾಂದಿಯಾಝ್ ಅನ್ನು ತನ್ನ ಬಳಿ ಇರಿಸಿಕೊಂಡಿದ್ದರು. ಕ್ರಮೇಣ ಹೆಚ್ಚಿನ ಪ್ರದೇಶಗಳು ಅವರ ನಿಯಂತ್ರಣಕ್ಕೆ ಬಂದವು. ಉತ್ಬಾ ಇಬ್ನ್ ಫರ್ಕಾದ್ ಇನ್ನೊಂದು ಬದಿಯಿಂದ ದಾಳಿ ಮಾಡಿದರು. ಅಸ್ಫಾಂದ್‌ಯಾಜ್ ಅವರ ಸಹೋದರ ಬಹ್ರಾಮ್ ಅವರ ದಾರಿಯಲ್ಲಿ ನಿಂತನು ಆದರೆ ಯುದ್ಧದ ನಂತರ ಸೋತು ಅಲ್ಲಿಂದ ಪಲಾಯನ ಮಾಡಿದನು. ಅಸ್ಫಾಂದ್ ಯಾಜ್ ಈ ಸುದ್ದಿಯನ್ನು ಕೇಳಿದಾಗ, ಅವನು ಹೇಳಿದನು: ಈಗ ಯುದ್ಧದ ಬೆಂಕಿ ನಂದಿಸಲಾಗಿದೆ ಮತ್ತು ಇದು ಸಂಧಾನದ ಸಮಯ ವಾಗಿದೆ. ಹೀಗೆ ಆತನು ಸಂಧಾನವನ್ನು ಮಾಡಿಕೊಂಡನು ಮತ್ತು ಅಜೆರ್ಬೈಜಾನ್‌ನ ಜನರು ಅವನ ಪರವಾಗಿ ನಿಂತರು ಮತ್ತು ಈ ಒಪ್ಪಂದವನ್ನು ಬರೆಯಲಾಯಿತು. ಆ ಒಪ್ಪಂದದ ಪದಗಳು ಹೀಗಿವೆ: "ಬಿಸ್ಮಿಲ್ಲಹಿರ್ರಹ್ಮಾನ್ನಿರ್ರಹೀಮ್" ಅಮೀರ್ ಅಲ್-ಮುಮಿನೀನ್ ಉಮರ್ ಬಿನ್ ಅಲ್-ಖತ್ತಾಬ್(ರ)ರವರ ಪ್ರತಿನಿಧಿಯಾದ ಉತ್ಬಾ ಇಬ್ನ್ ಫರ್ಕಾದ್ ಅಜೆರ್ಬೈಜಾನ್ ಜನರಿಗೆ ನೀಡುವ ಬರಹ ಇದು. ಇದು ಅಜರ್ಬೈಜಾನ್ ನ ಬಯಲು ಮತ್ತು ಪರ್ವತಗಳಲ್ಲಿ ವಾಸಿಸುವವರಿಗೆ ಮತ್ತು ಗಡಿ ಮತ್ತು ಕರಾವಳಿ ಪ್ರದೇಶಗಳಲ್ಲಿ ಮತ್ತು ಎಲ್ಲಾ ಧರ್ಮದ ಜನರಿಗೆ. ಅವರೆಲ್ಲರೂ ತಮ್ಮ ಜನಸಂಖ್ಯೆಗೆ, ತಮ್ಮ ಆಸ್ತಿಗೆ, ತಮ್ಮ ಧರ್ಮಗಳಿಗೆ, ತಮ್ಮ ಶರಿಯಾಗಳಿಗೆ ತಮ್ಮ ಶಕ್ತಿಯ ಪ್ರಕಾರ ಜಿಝಿಯಾವನ್ನು ಪಾವತಿಸಬೇಕೆಂಬ ಶರತ್ತಿನ ಮೇಲೆ ಸುರಕ್ಷಿತವಾಗಿರುತ್ತಾರೆ. ಅವರು ಹೊಂದಿರುವ ಯಾವುದೇ ಶಕ್ತಿಯ ಪ್ರಕಾರ ಜಿಝ್ಯಾವನ್ನು ಪಾವತಿಸಿರಿ. ಆದರೆ ಜಿಝಿಯ ಮಗುವಿನ ಮೇಲೆ ಆಗುವುದಿಲ್ಲ, ಮಹಿಳೆಯ ಮೇಲೆ ಅಥವಾ ದೀರ್ಘಕಾಲದ ಅನಾರೋಗ್ಯದ ಮೇಲೆ, ಶಾಶ್ವತವಾಗಿ ಅನಾರೋಗ್ಯದಿಂದಿರುವ, ಸಂಪತ್ತು ಇಲ್ಲದ, ಅಥವಾ ಏಕಾಂಗಿ ಮೇಲೆ, ಯಾವುದೇ ಸಂಪತ್ತು ಇಲ್ಲದವನ ಮೇಲೆ, ಮತ್ತು ಇದು ಇಲ್ಲಿನ ಜನರಿಗೆ ಮತ್ತು ಹೊರಗಿನಿಂದ ಬಂದು ಅವರೊಂದಿಗೆ ನೆಲೆಸುವವರಿಗೆ ಕೂಡ. ಅದು ಅಲ್ಲಿ ಬಂದು ನೆಲೆಸುವವರಿಗಾಗಿ ಕೂಡ. ಇಸ್ಲಾಮಿನ ಸೈನ್ಯದ ಆತಿಥ್ಯಕ್ಕೆ ಒಂದು ದಿವಸ ಮತ್ತು ಆತನಿಗೆ ದಾರಿ ತೋರಿಸುವ ಜವಾಬ್ದಾರಿ ಅವರ ಮೇಲಿದೆ. ಯಾವುದೇ ಮಿಲಿಟರಿ ಸೇವೆಯನ್ನು ಯಾರಿಂದಲಾದರೂ ತೆಗೆದುಕೊಂಡರೆ, ಜಿಝ್‌ಯವನ್ನು ಅದರಿಂದ ಕಡಿತಗೊಳಿಸಲಾಗುತ್ತದೆ. ಯಾರು ಇಲ್ಲಿ ಉಳಿಯುತ್ತಾರೆ ಅವರಿಗೆ ಈ ಶರತ್ತು ಇರುವುದು ಮತ್ತು ಯಾರು ಇಲ್ಲಿಂದ ಹೊರಹೋಗಲು ಬಯಸುತ್ತಾರೋ ಅವರು ತಮ್ಮ ಶಾಂತಿಯ ಸ್ಥಳಕ್ಕೆ ಹೋದರೂ ಶಾಂತಿಯಿಂದ ಇರುತ್ತಾರೆ. ಈ ಬರಹವನ್ನು ಜುಂದುಬ್ ಬರೆದಿದ್ದಾರೆ ಮತ್ತು ಅದರ ಸಾಕ್ಷಿಗಳು ಬುಕೈರ್ ಬಿನ್ ಅಬ್ದುಲ್ಲಾ ಮತ್ತು ಸಿಮಾಕ್ ಬಿನ್ ಖರ್ಶಾ ಆಗಿದ್ದಾರೆ. (ಪ್ರಬಂಧ: ತಾರೀಖ್ ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸೈಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟಗಳು 176 ರಿಂದ 179) (ತರೀಖ್ ಅತ್ತಿಬರಿ, ಸಂಪುಟ-2, ಪುಟಗಳು-539-540, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಅರ್ಮೇನಿಯದ ಸಾಮರಸ್ಯದ ಬಗ್ಗೆ ಬರೆಯಲಾಗಿದೆ, ಅಜರ್ಬೈಜಾನ್ ವಿಜಯದ ನಂತರ, ಬುಕೇರ್ ಬಿನ್ ಅಬ್ದುಲ್ಲಾ ಅರ್ಮೇನಿಯಾದತ್ತ ತೆರಳಿದರು. ಅವರ ನೆರವಿಗಾಗಿ ಹಝ್ರತ್ ಉಮರ್(ರ) ಸುರಖಾ ಬಿನ್ ಮಾಲಿಕ್ ಇಬ್ನ್ ಅಮರ್(ರ) ನೇತೃತ್ವದಲ್ಲಿ ಸೇನೆಯನ್ನು ಕಳುಹಿಸಿದರು. ಹಝ್ರತ್ ಉಮರ್(ರ) ಸುರಾಖ ಬಿನ್ ಮಾಲಿಕ್‌ರನ್ನು ಸಂಪೂರ್ಣ ಸೈನ್ಯದ ಸೇನಾಧಿಪತಿಯನ್ನಾಗಿಯೂ ನಿಶ್ಚಯಿಸಿದರು. ಮತ್ತು ಪ್ರತಿಯೊಂದು ಸೈಸ್ಯದ ತುಕಡಿಯ ನೇತೃತ್ವವನ್ನು ಅಬ್ದುರ್ರಹ್ಮಾನ್ ಬಿನ್ ರಬೀಅರವರನ್ನು ವಹಿಸಿದರು. ಅದೇ ರೀತಿ ಅವರು ಹುಧೈಫಾ ಬಿನ್ ಉಸೈದ್ ಗಫಾರಿಯನ್ನು ಒಂದು ತೋಳಿನ ಅಧಿಕಾರಿಯಾಗಿ ನೇಮಿಸಿದರು ಮತ್ತು ಈ ಸೈನ್ಯವು ಅರ್ಮೇನಿಯಾಕ್ಕೆ ಹೋಗುತ್ತಿದ್ದ ಬುಕೈರ್ ಬಿನ್ ಅಬ್ದುಲ್ಲಾರವರ ಸೈನ್ಯವನ್ನು ಭೇಟಿಯಾದಾಗ, ಇನ್ನೊಂದು ತೋಳಿನ ನೇತೃತ್ವವನ್ನು ಬುಕೇರ್ ಬಿನ್ ಅಬ್ದುಲ್ಲಾಗೆ ಒಪ್ಪಿಸಬೇಕು ಎಂದು ಆದೇಶಿಸಿದರು. ಈ ಸೇನೆಯು ಹೊರಟಿತು ಮತ್ತು ಅಬ್ದುರ್ರಹ್ಮನ್ ಬಿನ್ ರಬೀಅ ಮುಂಚೂಣಿಯ ಅಧಿಕಾರಿ, ಬುಕೇರ್ ಇಬ್ನ್ ಅಬ್ದುಲ್ಲಾ ಸೈನ್ಯವನ್ನು ದಾಟಿ ವೇಗವಾಗಿ ತೆರಳಿ 'ಬಾಬ್' ಎಂಬ ಸ್ಥಳಕ್ಕೆ ತಲುಪಿದರು, ಅಲ್ಲಿ ಅರ್ಮೇನಿಯಾದ ಆಡಳಿತಗಾರ ಶಹ್‌ರಬರಅ ಎಂಬವನು ನೆಲಿಸಿದ್ದನು. ಈ ವ್ಯಕ್ತಿ ಇರಾನಿನವನು. ಅವನು ಪತ್ರ ಬರೆದು ಅಬ್ದುಲ್ ರೆಹಮಾನ್ ಅವರಿಂದ ಸಂಧಾನ ಮಾಡಿಕೊಂಡನು. ಮತ್ತು ಅಬ್ದುಲ್ ರೆಹಮಾನ್ ಅವರ ಸೇವೆಗೆ ಹಾಜರಾದನು. ಅವನು ಇರಾನಿಯನ್ ಮತ್ತು ಅರ್ಮೇನಿಯನ್ನರನ್ನು ದ್ವೇಷಿಸುತ್ತಿದ್ದನು. ಅವನು ಅಬ್ದುಲ್ ರೆಹಮಾನ್‌ಗೆ ಸಂಧಾನ ಮಾಡಿಕೊಳ್ಳಲು ಕೇಳಿಕೊಂಡನು ಮತ್ತು ನನ್ನಿಂದ ಜಿಝಿಯವನ್ನು ತೆಗೆದುಕೊಳ್ಳಬಾರದು ಎಂದು ಹೇಳಿದನು. ಅದಬ ಬದಲು ಅಗತ್ಯವಿರುವಂತೆ ನಾನು ಮಿಲಿಟರಿ ನೆರವು ನೀಡುತ್ತೇನೆ ಎಂದು ಹೇಳಿದನು. ಇದು ಇನ್ನೊಂದು ರೀತಿಯ ಒಪ್ಪಂದವಾಗಿದೆ. ಸ್ವತಃ ತಾನಾಗಿಯೇ ಬಂದಿರುವನು. ತದನಂತರ ಓಪ್ಪಂದ ಮಾಡಿಕೊಂಡಗ ಜಿಝಿಯಾವನ್ನು ತೆಗೆದುಕೊಳ್ಳಬಾರದು. ನನು ಸಹಾಯ ಮಾಡುವೆನು, ಸೈನ್ಯದೊಂದಿಗೆ ಸಹಾಯ ಮಾಡುವೆನು. ಸುರಾಖಾ ರವರು ಈ ಪ್ರಸ್ತಾಪವನ್ನು ಒಪ್ಪಿಕೊಂಡರು. ಹೀಗೆ ಆರ್ಮೇನಿಯದ ಮೇಲೆ ಯುದ್ಧ ನಡೆಯದೇ ವಿಜಯ ಸಾಧಿಸಲಾಯಿತು. ಹಝ್ರತ್ ಉಮರ್(ರ) ಈ ಸಂಧಾನದ ಬಗ್ಗೆ ಸಂತೋಷ ಮತ್ತು ಖುಶಿಯನ್ನು ವ್ಯಕ್ತಪಡಿಸಿದರು. ಹಝ್ರತ್ ಸುರಾಖ ಬರೆದ ಸಂಧಾನದ ಪತ್ರ ಹೀಗಿದೆ: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಇದು ಅಬ್‌ರಾಝ್, ಆರ್ಮೇನಿಯ ಮತ್ತು ಅರ್ಮನಿನ ನಿವಾಸಿಗಳಿಗೆ ಅಮೀರುಲ್ ಮೂಮಿನೀನ್ ಉಮರ್ ಬಿನ ಖತ್ತಾಬ್‌ರ ಗವರ್ನರ್ ಸುರಾಖ ಬಿನ್ ಅಮ್ರ್ ಅಭಯ ನೀಡುತ್ತೇವೆ. ಅವರ ಜೀವಗಳಿಗೆ, ಅವರ ಸಂಪತ್ತುಗಳಿಗೆ, ಅವರ ಧರ್ಮಕ್ಕೆ ಯಾವುದೇ ಹಾನಿಯನ್ನು ಉಂಟುಮಾಡಲಾರೆವು. ಶತ್ರುಗಳ ಆಕ್ರಮಣದ ವೇಳೆ ಅವರು ಸೈನ್ಯದ ಸೇವೆ ನೀಡಬೇಕು. ಪ್ರತಿಯೊಂದು ಮುಖ್ಯ ಕೆಲಸಗಳಲ್ಲಿ, ಅಧಿಕಾರಿ ಬಯಸುವಾಗ ಸಹಾಯ ಮಾಡಬೇಕು. ಅವರ ಮೇಲೆ ಜಿಝಿಯ ಹಾಕಲಾಗುವುದಿಲ್ಲ. ಬದಲಾಗಿ ಸೈನಿಕ ನೆರವು ನೀಡಬೇಕು. ಆದರೆ ಸೈನಿಕ ಸೇವೆ ನೀಡದವರು ಆಝುರ್‌ಬಾಯಿಜಾನಿನ ನಿವಾಸಿಗಳ ಹಾಗೆ ಜಿಝಿಯ ಕೊಡಬೇಕು. ಜನರಿಗೆ ರಸ್ತೆ ತೋರಿಸಿಕೊಡಬೇಕು. ಒಂದು ದಿನದ ಆತಿಥ್ಯ ಕೊಡಬೇಕು. ಅನಂತರ ಅದಕ್ಕೆ ಅಬ್ದುರ್ರಹ್ಮಾನ್ ಬಿನ್ ರಬೀಅ, ಸುಲೈಮಾನ್ ಬಿನ್ ರಬೀಅ ಮತ್ತು ಬುಕೇರ್ ಬಿನ್ ಅಬ್ದುಲ್ಲಾಹ್ ಸಾಕ್ಷ್ಯವಹಿಸಿದರು. ಈ ಲಿಖಿತವನ್ನು ಮರ್ಝಿ ಬಿನ್ ಮಕ್‌ರನ್ ಬರೆದಿದ್ದರು. ಅವರು ಸಹ ಸಾಕ್ಷಿಯಾಗಿದ್ದರು.

ಇದರ ನಂತರ ಆರ್ಮೇನಿಯದ ಸುತ್ತಮುತ್ತ ಇರುವ ಪರ್ವತಗಳ ಕಡೆಗೆ ಸುರಾಖ ಬಿನ್ ಮಾಲಿಕ್ ಸೈನ್ಯಗಳನ್ನು ಕಳುಹಿಸಿದರು. ಹೀಗೆ ಬುಕೇರ್ ಬಿನ್ ಅಬ್ದುಲ್ಲಾಹ್, ಹಬೀಬುಲ್ಲಾಹ್ ಬಿನ್ ಮಸ್‌ಲಮ, ಹುಧೈಫ ಬಿನ್ ಅಸೀದ್ ಮತ್ತು ಸಲ್ಮಾನ್ ಬಿನ್ ರಬೀಅರ ನೇತೃತ್ವದಲ್ಲಿ ಆ ಪರ್ವತಗಳ ಕಡೆಗೆ ಸೈನ್ಯಗಳು ರವಾನೆಯಾದವು. ಬುಕೇರ್ ಬಿನ್ ಅಬ್ದುಲ್ಲಾಹ್‌ರನ್ನು ಮೂಕಾನಿಗೆ ಕಳುಹಿಸಲಾಯಿತು. ಹಬೀಬರನ್ನು ತಫ್‌ಲೀಸಿನ ಕಡೆಗೆ ಕಳುಹಿಸಲಾಯಿತು. ಹುಧೈಫ ಬಿನ್ ಅಸೀದ್‌ರನ್ನು ಲಾನಿನ ಪರ್ವತಗಳಲ್ಲಿ ನೆಲೆಸಿರುವವರನ್ನು ಎದುರಿಸಲು ಕಳುಹಿಸಲಾಯಿತು. ಸುರಾಖದ ಈ ಸೈನ್ಯಗಳಲ್ಲಿ ಬಕೇರ್ ಬಿನ್ ಅಬ್ದುಲ್ಲಾಹ್‌ರಿಗೆ ಉತ್ತಮ ವಿಜಯ ಉಂಟಾಯಿತು. ಅವರನ್ನು ಮೋಕಾನಿಗೆ ಕಳುಹಿಸಲಾಗಿತ್ತು. ಅವರು ಮೋಕಾನಿನ ನಿವಾಸಿಗಳಿಗೆ ಅಭಯದ ಪತ್ರವನ್ನು ಕೊಟ್ಟರು. ಅದು ಹೀಗಿದೆ: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಬುಕೇರ್ ಬಿನ್ ಅಬ್ದುಲ್ಲಾಹ್ ಖುಬದ ಪರ್ವತಗಳಲ್ಲಿ ಮೋಕಾನಿನ ನಿವಾಸಿಗಳಿಗೆ ಕೊಡುವ ಲಿಖಿತವಾಗಿದೆ. ಅವರಿಗೆ ಅವರ ಜೀವದ ಮೇಲೆ, ಅವರ ಸಂಪತ್ತಿನ ಮೇಲೆ, ಅವರ ಧರ್ಮದ ಮೇಲೆ, ಅವರ ಶರೀಅತಿನ ಮೇಲೆ ಜಿಝಿಯ ಕೊಡುವುದೆಂಬ ಶರತ್ತಿನೊಂದಿಗೆ ಅಭಯ ನೀಡಲಾಗುವುದು. ಪ್ರತಿಯೊಬ್ಬ ಪ್ರೌಢನು ಒಂದು ದೀನಾರ್ ಜಿಝಿಯ ಆಗಿ ಕೊಡಬೇಕು. ನೋಡಿರಿ, ಎಲ್ಲೆಡೆ ಒಪ್ಪಂದಗಳು ನಡೆಯುತ್ತಿದ್ದುವು. ಅಲ್ಲಿ ಧರ್ಮ ಸ್ವಾತಂತ್ರ್ಯ, ಶರೀಅತಿನ ಸ್ವಾತಂತ್ರ್ಯ ನೀಡಲಾಗುತ್ತಿದೆ. ಇಸ್ಲಾಂ ಖಡ್ಗಬಲದಿಂದ ಧರ್ಮವನ್ನು ಹರಡಿದೆ ಎಂದು ಆರೋಪಿಸಲಾಗುತ್ತದೆ. ಆದರೆ ಇಲ್ಲಿ ಯಾರೊಡನೆಯೂ

ಒತ್ತಾಯಪೂರ್ವಕವಾಗಿ ಇಸ್ಲಾಂ ಸ್ವೀಕರಿಸಲು ಹೇಳಲಾಗುತ್ತಿಲ್ಲ. ಬದಲಾಗಿ ಒಳಿತು ಮಾಡಲು, ರಸ್ತೆ ಹೇಳಿಕೊಡಲು, ಒಂದು ದಿನದ ಸತ್ಕಾರ ಮಾಡಲು ಹೇಳಲಾಗುತ್ತಿದೆ. ಈ ಒಪ್ಪಂದವನ್ನು ಪಾಲಿಸುವ ತನಕ ಮತ್ತು ಒಳಿತುಗಳನ್ನು ಮಾಡುವ ತನಕ ಅವರಿಗೆ ಅಭಯ ನೀಡಲಾಗುತ್ತಿತ್ತು. ಆದರೆ ಒಪ್ಪಂದವನ್ನು ಮುರಿದರೆ ಅಥವಾ ಯಾವುದಾದರೂ ಮೋಸಗಾರಿಕೆ ಅವರಿಂದ ಆದರೆ ಅಭಯ ನೀಡಲಾಗುತ್ತಿರಲಿಲ್ಲ. ಈ ಒಪ್ಪಂದಕ್ಕೂ ನಾಲ್ಕೈದು ಸಾಕ್ಷಿಗಳಿದ್ದರು. (ಪ್ರಬಂಧ: ತಾರೀಖೆ ಇಸ್ಲಾಮ್ ಬಿಅಹದಿ ಹಝ್ರತ್ ಉಮರ್(ರ), ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ–180–184)

ಹಿಜರೀ 22ರಲ್ಲಿ ಖುರಾಸಾನ್ ವಿಜಯ ನಡೆಯಿತು. ಅದರ ವಿವರಣೇ ಹೀಗಿದೆ: ಜಲೂಲ ಯುದ್ಧದ ನಂತರ ಯಝ್ದಜರ್ದ್ ರೇನಲ್ಲಿ, ಅನಂತರ ಕಿರ್ಮಾನ್, ಖುರಾಸಾನ್ ಮತ್ತು ಮರೂನಲ್ಲಿ ನೆಲೆಸಿದನು. ಇಲ್ಲಿ ಅವನು ಸುತ್ತಮುತ್ತಲಿನ ಅರೇಬಿಯೇತರ ನಿವಾಸಿಗಳೊಡನೆ ಮತ್ತು ಪೇರ್ಶಿಯ ಹಾಗೂ ಹರ್ಮುಝಾನಿನ ನಿವಾಸಿಗಳೊಡನೆ ಸಂಬಂಧ ವರ್ಧಿಸಿಕೊಂಡು ಮುಸ್ಲಿಮರ ವಿರುದ್ಧ ಉದ್ರೇಕಿಸಿದನು ಮತ್ತು ಕೊನೆಗೆ ಮುಸ್ಲಿಮರು ಜಯಿಸಿದ ಪ್ರದೇಶಗಳಲ್ಲಿ ದಂಗೆಯೆಬ್ಬಿಸಿದನು. ಈ ಸ್ಥಿತಿಗತಿಗಳ ತೀವ್ರತೆಯ ಕಾರಣದಿಂದ ಇರಾನಿನ ಪ್ರದೇಶಗಳಿಗೆ ಹೋಗಲು ಹಝ್ರತ್ ಉಮರ್(ರ) ಮುಸ್ಲಿಮರಿಗೆ ಅನುಮತಿ ಕೊಟ್ಟರು. ಅವರ ಆದೇಶದ ಮೇರೆಗೆ ಬಸ್ರ ಮತ್ತು ಕೂಫದ ನಿವಾಸಿಗಳು ಪ್ರಚಂಡವಾದ ದಾಳಿ ನಡೆಸಿದರು. ಅಹ್ನಫ್ ಬಿನ್ ಖೈಸ್ ಫರಾಖ್‌ಸಾನಿನ ಕಡೆಗೆ ರವಾನೆಯಾದರು. ಮಾರ್ಗದಲ್ಲಿ ಅವರು ಮೆಹರ್‌ಜಾನ್ ಖುಝುಕನ್ನು ವಶಪಡಿಸಿಕೊಂಡರು. ಮೆಹರ್‌ಜಾನ್ ಖುಝುಕ್ ಹಲ್ವಾನಿನಿಂದ ಹಮ್ಝಾನಿನ ತನಕ ಪರ್ವತಗಳ ನಡುವೆ ಒಂದು ವಿಶಾಲ ಪ್ರದೇಶವಾಗಿದೆ. ಅದು ಅನೇಕ ಪಟ್ಟಣಗಳನ್ನು ಮತ್ತು ಗ್ರಾಮಗಳನ್ನು ಒಳಗೊಂಡಿವೆ. ಇನ್ನೂ ಮುಂದಕ್ಕೆ ಹೋಗುತ್ತಾ ಅಸ್‌ಫಾನಿನ ಕಡೆಗೆ ರವಾನೆಯಾದರು. ಆ ವೇಳೆ ಕೂಫದವರು ಜೇಯನ್ನು ಮುತ್ತಿಗೆ ಮಾಡಿದ್ದರು. ಜೇ ಎಂಬುದು ಸಹ ಅಸ್‌ಫಾನಿನ ಸುತ್ತಮುತ್ತ ಇರುವ ಒಂದು ಹಳೆಯ ಪಟ್ಟಣದ ಹೆಸರಾಗಿದೆ. ಅದು ಈಗ ಬಹುತೇಕ ಜನವಸತಿಯಿಲ್ಲದ ಸ್ಥಳವಾಗಿದೆ. ಅರೇಬಿಯೇತರು ಅದನ್ನು ಆಬ್‌ಶಾರಿಸ್ತಾನ್ ಎಂದು ಹೇಳುತ್ತಾರೆ. ಆದ್ದರಿಂದ ಅವರು ತಿಬಿಸ್ತಾನದ ಮಾರ್ಗದಲ್ಲಿ ಖುರಾಸಾನಿಗೆ ತಲುಪಿದರು ಮತ್ತು ಹರಾಸಾನನ್ನು ಯುದ್ಧ ಮಾಡಿ ವಶಪಡಿಸಿದರು. ತಿಬಿಸ್ತಾನ್ ಒಂದು ತೀರ ಪ್ರದೇಶವಾಗಿದೆ. ಅದು ನೀಶಾಪೂರ್ ಮತ್ತು ಅಸ್ಫಾನಿನ ನಡುವೆ ಇದೆ. ಹರಾತ್ ಎಂಬುದು ಪ್ರಸಿದ್ಧ ಪಟ್ಟಣಗಳಲ್ಲಿ ಒಂದು ದೊಡ್ಡ ಮತ್ತು ಪ್ರಸಿದ್ಧ ಪಟ್ಟಣವಾಗಿದೆ. ಅವರು ಅಲ್ಲಿ ಸಹಾರ್ ಬಿನ್ ಫಲಾ ಅಬ್ದಿಯನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಇನ್ನೂ ಮುಂದಕ್ಕೆ ಹೋಗುತ್ತಾ ಮರೂ ಶಾಹ್ ಜಹಾನಿನ ಕಡೆಗೆ ರವಾನೆಯಾದರು. ಮರೂ ಶಾಹ್‌ಜಹಾನ್ ಖುರಾಸಾನಿನ ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿ ಅತ್ಯಂತ ಪ್ರಸಿದ್ಧವಾದುದಾಗಿದೆ. ಇದು ನಿಶಾಪೂರಿನಿಂದ 210 ಮೈಲುಗಳ ದೂರದಲ್ಲಿದೆ. ಈ ನಡುವೆ ಯಾರೊಂದಿಗೂ ಯಾವುದೇ ಯುದ್ಧ ನಡೆಯಲಿಲ್ಲ. ಆದ್ದರಿಂದ ನೀಶಾಪೂರಿನ ಕಡೆಗೆ ಮತ್‌ರಫ್ ಬಿನ್ ಅಬ್ದುಲ್ಲಾಹ್ ಬಿನ್ ಶಖ್ಖೀರನ್ನು ಕಳುಹಿಸಲಾಯಿತು ಹಾಗೂ ಸರ್‌ಖಸಿನ ಕಡೆಗೆ ಹಾರಿಸ್ ಬಿನ್ ಹಸ್ಸಾನ್‌ರನ್ನು ಕಳುಹಿಸಲಾಯಿತು. ಸರ್‌ಖಸ್ ಸಹ ಖುರಾಸಾನಿನ ಸುತ್ತಮುತ್ತ ಒಂದು ಹಳೆಯ ಮತ್ತು ದೊಡ್ಡ ಪಟ್ಟಣವಾಗಿದೆ. ಅದು ನೀಶಾಪೂರ್ ಮತ್ತು ಮರೂವಿನ ನಡುವೆ ಇದೆ. ಹೇಗಿದ್ದರೂ ಅಹ್‌ನಫ್ ಬಿನ್ ಖೈಸ್ ಮರೂ ಶಾಹ್‌ಜಹಾನನ ಬಳಿಗೆ ತಲುಪಿದಾಗ ಯಝ್‌ದಜರ್ದ್ ಮರೋರೋಝಿಗೆ ಹೋದರು. ಅಲ್ಲಿ ನೆಲೆಸಿದರು. ಮರೂರೋಝ್ ಎಂದು ಕರೆಯಲ್ಪಡುವ ಕಾರಣವೇನೆಂದರೆ, ಮರೂ ಎಂದು ಬೆಂಕಿ ಹೊತ್ತಿಸಲಾಗುವ ಬಿಳಿ ಕಲ್ಲಿಗೆ ಹೇಳಲಾಗುತ್ತದೆ. ಅದು ಕಪ್ಪು ಅಥವಾ ಕೆಂಪಾಗುತ್ತಿರಲಿಲ್ಲ. ರೋಝ್ ಎಂದರೆ ಫಾರಿಸಿಯಲ್ಲಿ ನದಿಗೆ ಹೇಳಲಾಗುತ್ತದೆ. ಎಂದರೆ ನದಿಯ ಬೆಂಕಿ ಹೊತ್ತಿಸುವ ಬಿಳಿ ಕಲ್ಲು. ಮರೂ ಶಾಹ್‌ಜಹಾನಿನಿಂದ ಐದು ದಿನದ ಯಾತ್ರೆಯ ದೂರದಲ್ಲಿ ಒಂದು ದೊಡ್ಡ ನದಿಯಿದೆ. ಅಹ್‌ನಫ್ ಬಿನ್ ಖೈಸ್ ಮರೂಶಾಹ್‌ಜಹಾನನಲ್ಲಿ ತಂಗಿದರು. ಯಝ್‌ದಜರ್ದ್ ಮರೂರೋಝ್ ತಲುಪಿದ ನಂತರ ಬೇರೆ ಬೇರೆ ಅಧಿಕಾರಿಗಳಿಗೆ ಬಳಿಗೆ ಸಹಾಯಕ್ಕಾಗಿ ವಿನಂತಿಸಿದರು. ಅವನು ಖಾಕಾನಿನಿಂದ ಸಹಾಯದ ವಿನಂತಿ ಮಾಡಿದನು, ಸಗದಿನ ಅರಸನಿಗೂ ಪತ್ರ ಬರೆದನು, ಸೈನ್ಯ ಮೂಲಕ ಸಹಾಯ ಮಾಡಲು ಹೇಳಿದನು. ಸಗದ್ ಎಂಬುದು ಸಮರ್‌ಖಂದ್ ಮತ್ತು ಬುಖಾರ ಇರುವ ಪ್ರದೇಶವಾಗಿದೆ. ಅದಲ್ಲದೆ ಚೈನದ ಅರಸನಿಂದಲೂ ಸಹಾಯಕ್ಕಾಗಿ ವಿನಂತಿಸಿದರು. ಅಹ್‌ನಫ್ ಬಿನ್ ಖೈಸ್, ಮರೂಶಾಹ್‌ಜಹಾನಿನ ಮೇಲೆ ಹಾರಿಸ ಬಿನ್ ನೂಮಾನ್ ಬಾಲಿಯನ್ನು ತನ್ನ ಪ್ರತಿನಿಧಿಯನ್ನಾಗಿ ನಿಶ್ಚಯಿಸಿದರು. ಈ ವೇಳೆ ಕೂಫದ ಸೈನ್ಯಗಳು ಅವರ ನಾಲ್ವರು ಸರದಾರರ ನೇತೃತ್ವದಲ್ಲಿ ಅಹ್ನಫ್ ಬಿನ್ ಖೈಸಿನ ಬಳಿಗೆ ತಲುಪಿದರು. ಎಲ್ಲ ಸೈನ್ಯಗಳು ಮರೂಶಾಹ್‌ಜಹಾನಿಗೆ ತಲುಪಿದಾಗ ಅಹ್ನಫ್ ಬಿನ್ ಖೈಸ್ ಮರೂಶಾಹ್‌ಜಹಾನಿನಿಂದ ಮರೂರೋಝಿನ ಕಡೆಗೆ ಸೈನಿಕ ದಾಳಿ ನಡೆಸಿದರು. ಯಝ್‌ದಜರ್‌ದಿಗೆ ಈ ಸುದ್ದಿ ತಲುಪಿದಾಗ ಅವನು ಬಲಖಿನ ಕಡೆಗೆ ರವಾನೆಯಾದನು. ಬಲಖ್ ಎಂಬುದು ಜೈಹೂನ್ ನದಿಯ ಸಮೀಪ ಖುರಾಸಾನಿನ ಒಂದು ಸುಂದರ ನಗರವಾಗಿದೆ. ಹೀಗೆ ಅಹ್ನಫ್ ಬಿನ್ ಖೈಸ್ ಮರೂರೋಝಿನಲ್ಲಿ ತಂಗಿದರು. ಕೂಫದ ಸೈನ್ಯಗಳು ನೇರವಾಗಿ ಬಲಖಿಗೆ ರವಾನೆಯಾದಾಗ ಅಹ್ನಫ್ ಬಿನ್ ಖೈಸ್ ಸಹ ಅವರ ಹಿಂದೆ ರವಾನೆಯಾದರು. ಕೊನೆಗೆ ಕೂಫದ ಸೈನ್ಯಗಳು ಮತ್ತು ಯಝ್‌ದರ್‌ದಿನ ಸೈನ್ಯಗಳ ನಡುವೆ ಮುಖಾಮುಖಿಯಾಯಿತು. ಉಭಯ ಪಕ್ಷಗಳ ನಡುವೆ ಯುದ್ಧ ನಡೆಯಿತು. ಅದರ ಪರಿಣಾಮವಾಗಿ ಅಲ್ಲಾಹನು ಯಜ್‌ದರ್‌ದನ್ನು ಪರಾಜಯಗೊಳಿಸಿದನು. ಅವನು ಇರಾನಿಯರ ಜೊತೆಗೆ ನದಿಯ ಕಡೆಗೆ ರವಾನೆಯಾದನು. ನದಿಯನ್ನು ದಾಟಿ ಪರಾರಿಯಾದನು. ಅಷ್ಟರಲ್ಲಿ ಅಹ್ನಫ್ ಬಿನ್ ಖೈಸ್ ಸಹ ಕೂಫದ ಸೈನ್ಯದೊಂದಿಗೆ ಬಂದುಸೇರಿದರು. ಆಗ ಅಲ್ಲಾಹನು ಅವರ ಕೈಗಳಿಂದ ಬಲಖಿನ ಮೇಲೆ ವಿಜಯ ನೀಡಿದನು. ಆದ್ದರಿಂದ ಬಲಖ್ ಮೇಲಿನ ವಿಜಯ ಕೂಫದ ವಿಜಯಗಳಲ್ಲಿ ಸೇರುತ್ತದೆ. ಅನಂತರ ಕೋಟೆಯಲ್ಲಿ ಬಂಧಿಯಾಗಿದ್ದ ಖುರಾಸಾನಿನ ನಿವಾಸಿಗಳು ಪರಾರಿಯಾಗಿದ್ದರು. ನೀಶಾಪೂರಿನಿಂದ ಹಿಡಿದು ತಖಾರಿಸ್ತಾನದ ನಿವಾಸಿಗಳು ಎಲ್ಲರೂ ಸಂಧಾನಕ್ಕಾಗಿ ಬರಲು ಶುರುವಾದರು. ತಖಾರಿಸ್ತಾನ ಹಲವು ಪಟ್ಟಣಗಳನ್ನು ಒಳಗೊಂಡ ಪ್ರದೇಶವಾಗಿದೆ. ಇದು ಖುರಾಸಾನಿನ ಸುತ್ತಮುತ್ತ ಇದೆ. ಇದರ ಅತಿ ದೊಡ್ಡ ಪಟ್ಟಣ ತಾಲ್‌ಕಾನ್ ಆಗಿದೆ. ಅನಂತರ ಅಹ್ನಫ್ ಬಿನ್ ಖೈಸ್ ಮರಳಿ ಮರೂರೋಝಿಗೆ ಹೋದರು. ಅಲ್ಲಿ ತಂಗಿದರು. ಆದರೆ ಅರೇಬಿಯದ ಗಣ್ಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ರಬೀ ಬಿನ್ ಆಮಿರನ್ನು ತಖಾರಿಸ್ತಾನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಅಹ್‌ನಫ್ ಬಿನ್ ಖೈಸ್ ಹಝ್ರತ್ ಉಮರ್‌ರಿಗೆ(ರ) ಖುರಾಸಾನಿನ ವಿಜಯದ ಬಗ್ಗೆ ಬರೆದು ಕಳುಹಿಸಿದರು. ಖುರಾಸಾನಿನ ವಿಜಯದ ಬಗ್ಗೆ ಕೇಳಿದಾಗ ಹಝ್ರತ್ ಉಮರ್(ರ) ಹೇಳಿದರು: "ಅವರ ವಿರುದ್ಧ ಯಾವುದೇ ಸೈನ್ಯವನ್ನು ಕಳುಹಿಸದಿರಲು ನಾನು ಬಯಸಿದ್ದೆ. ಅವರ ಮತ್ತು ನಮ್ಮ ನಡುವೆ ಬೆಂಕಿಯ ಸಮುದ್ರ ತಡೆಯಾಗಿ ನಿಲ್ಲಲಿ ಎಂದು ನಾನು ಬಯಸಿದ್ದೆ." ನೋಡಿರಿ ಆಕ್ಷೇಪಕರು ಹೇಳುತ್ತಾರೆ: ಮುಸ್ಲಿಮರು ಪ್ರದೇಶಗಳನ್ನು ವಶಪಡಿಸಲು ಬಯಸುತ್ತಿದ್ದರು, ರಾಜ್ಯಗಳನ್ನು ವಶಪಡಿಸಲು ಇಚ್ಛಿಸುತ್ತಿದ್ದರು ಎಂದು. ಆದರೆ ಇಲ್ಲಿ ಸೈನ್ಯವನ್ನು ಕಳುಹಿಸಲು ಬಯಸುತ್ತಿರಲಿಲ್ಲವೆಂದು ಹಝ್ರತ್ ಉಮರ್(ರ) ಹೇಳುತ್ತಾರೆ. ಹಝ್ರತ್ ಉಮರರ ಈ ಮಾತನ್ನು ಕೇಳಿ ಹಝ್ರತ್ ಅಲಿ ಹೇಳಿದರು: ಯಾ ಅಮೀರಲ್ ಮೂಮಿನೀನ್, ನೀವು ಹೀಗೆ ಏಕೆ ಹೇಳುತ್ತಿದ್ದೀರಿ? ಆಗ ಹಝ್ರತ್ ಉಮರ್ ಹೇಳಿದರು: ಅದರ ಕಾರಣವೇನೆಂದರೆ, ಅಲ್ಲಿಯ ನಿವಾಸಿಗಳು ಮೂರು ಬಾರಿ ಪ್ರತಿಜ್ಞೆಯನ್ನು ಉಲ್ಲಂಘಿಸುವರು, ಒಪ್ಪಂದವನ್ನು ಮುರಿಯುವರು ಮತ್ತು ಮೂರನೇ ಬಾರಿ ಅವರನ್ನು ಸೋಲಿಸಬೇಕಾಗುವುದು. ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಲಿ ಬಿನ್ ಅಬೀ ತಾಲಿಬ್ ಹೇಳುತ್ತಾರೆ: ಹಝ್ರತ್ ಉಮರರ ಬಳಿಗೆ ಖುರಾಸಾನಿನ ವಿಜಯದ ವಾರ್ತೆ ತಲುಪಿದಾಗ ಹಝ್ರತ್ ಉಮರ್(ರ) ಹೇಳಿದರು: ಅವರ ಮತ್ತು ನಮ್ಮ ನಡುವೆ ಬೆಂಕಿಯ ಸಮುದ್ರ ತಡೆಯಾಗಿ ನಿಲ್ಲಲಿ ಎಂದು ನಾನು ಬಯಸಿದ್ದೆ." ಆಗ ಹಝ್ರತ್ ಅಲಿ(ರ) ಕೇಳಿದರು: ಯಾ ಅಮೀರಲ್ ಮೂಮಿನೀನ್, ಇದು ಸಂತೋಷದ ಸಮಯವಾಗಿದೆ. ನೀವೇಕೆ ಚಿಂತಿತರಾಗಿದ್ದೀರಿ? ವಿಜಯ ಉಂಟಾಗಿದೆ. ಆದರೆ ಅಡಚಣೆ ಇರಬೇಕಾಗಿತ್ತು ಎಂದು ಹೇಳುತ್ತಿದ್ದೀರಿ. ಹಝ್ರತ್ ಉಮರ್(ರ) ಹೇಳಿದರು: ಹೌದು ಇದು ಸಂತೋಷದ ಸಂಗತಿಯಾಗಿದೆ. ಆದರೆ ಚಿಂತೆಯ ವಿಷಯವೇನೆಂದರೆ, ಈ ಜನರು ಮೂರು ಬಾರಿ ಪ್ರತಿಜ್ಞೆಯನ್ನು ಉಲ್ಲಂಘಿಸುವರು. ಒಂದು ವರದಿಯಲ್ಲಿ ಹೀಗಿದೆ: ಅಹ್ನಫ್ ಬಿನ್ ಖೈಸ್ ಮರೂವಿನ ಎರಡೂ ಪಟ್ಟಣಗಳನ್ನು ವಶಪಡಿಸಿಕೊಂಡರು ಮತ್ತು ಬಲಖ್ ಮೇಲೆ ಸಹ ವಿಜಯ ಸಾಧಿಸಿದರು ಎಂದು ಹಝ್ರತ್ ಉಮರ್‌ರಿಗೆ ಮಾಹಿತಿ ಲಭಿಸಿದಾಗ ಹಝ್ರತ್ ಉಮರ್(ರ) ಹೇಳಿದರು: ಅಹ್ನಫ್ ಬಿನ್ ಖೈಸ್ ಪಶ್ಚಿಮ ನಿವಾಸಿಗಳ ಸರದಾರರಾಗಿರುವರು. ಅನಂತರ ಅಹ್ನಫ್ ಬಿನ್ ಖೈಸ್‌ರಿಗೆ ಹೀಗೆ ಪತ್ರ ಬರೆದರು: ನೀನು ನದಿಯನ್ನು ದಾಟಬೇಡ ಅದಕ್ಕಿಂತ ಮುಂಚಿನ ಪ್ರದೇಶದಲ್ಲಿ ಇರುವಾಗ. ಯಾವ ವಿಶೇಷತೆಯೊಂದಿಗೆ ನೀನು ಖುರಾಸಾನಿಗೆ ಪ್ರವೇಶಿಸಿದೆಯೋ ಅವುಗಳನ್ನು ಮುಂದೆಯಲ್ಲಾ ಅಭ್ಯಾಸಗಳನ್ನು ಜಾರಿಯಲ್ಲಿರಿಸು. ಹೀಗಾದರೆ ವಿಜಯ ನಿನ್ನ ಪಾದಗಳನ್ನು ಸದಾ ಚುಂಬಿಸುವುದು. ಆದರೆ ನದಿಯನ್ನು ದಾಟುವುದರಿಂದ ಬಿಟ್ಟುನಿಲ್ಲು. ಇಲ್ಲದಿದ್ದರೆ ನಷ್ಟವುಂಟಾಗುವುದು.

(ತಾರೀಖ್ ಅತ್ತಿಬರಿ ಅನುವಾದ, ಸಂಪುಟ–3, ಭಾಗ–1, ಪುಟ–183–185, ದಾರುಲ್ ಇಶಾಅತ್ ಕರಾಚಿ 2003) (ತಾರೀಖ್ಖ ಅತ್ತಿಬರಿ, ಸಂಪುಟ–2, ಪುಟ–546–547, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್, ಸಂಪುಟ–2, ಪುಟ–26,105, ಸಂಪುಟ–3, ಪುಟ–451,250,37,191,252, ಸಂಪುಟ–4, ಪುಟ–347,471,253, ದಾರುಲ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್)

ಯಝ್‌ದಜರ್ದ್ ಮೊದಲು ತನ್ನ ಸಹಾಯಕ್ಕಾಗಿ ನೆರೆಕೆರೆಯ ದೇಶಗಳನ್ನು ಕರೆದಿದ್ದನು. ಆಗ ಆ ದೇಶಗಳು ವಿಶೇಷವಾಗಿ ಯಾವುದೇ ಸಹಾಯವನ್ನು ಮಾಡಲಿಲ್ಲ. ಆದರೆ ಈಗ ಯಝ್‌ದಜರ್ದ್ ಸ್ವತಃ ತನ್ನ ದೇಶದಿಂದ ಓಡಿಕೊಂಡು ಅವರ ಬಳಿಗೆ ಸಹಾಯವನ್ನು ಬೇಡಿದನು. ಆ ದೇಶಗಳಿಂದ ಸಹಾಯ ಪಡೆದು ಪುನಃ ತನ್ನ ದೇಶವನ್ನು ಜಯಿಸಲು ನಿರ್ಧರಿಸಿದನು. ತುರ್ಕಿನ ಸರದಾರ ಖಾಖಾನ್ ಅವನಿಗೆ ನೆರವು ನೀಡಿದನು.

ಬಲಖಿಗೆ ತನ್ನ ಸೈನ್ಯವನ್ನು ಕೊಂಡುಬಂದನು. ಬಲಖ್ ಎಂಬುದು ಖುರಾಸಾನಿನ ಸಮೀಪ ಒಂದು ಸುಂದರ ಪಟ್ಟಣವಾಗಿತ್ತು. ಮುಸ್ಲಿಮರು ಅಲ್ಲಿ ಇಪ್ಪತ್ತು ಸಾವಿರದಷ್ಟು ಇದ್ದರು. ತುರ್ಕಿಯ ಕುದುರೆಸವಾರರ ಮೂರು ಸೈನಿಕರನ್ನು ಅಹ್ನಫ್ ಕೊಂದುಹಾಕಿದರು. ಇದನ್ನು ಅಪಶಕುನವೆಂದು ಭಾವಿಸಿ ತುರ್ಕಿನ ಸರದಾರ ಖ಼ಾಖಾನ್ ಮರಳಿ ಹೋದನು. ಚೀನ ದೇಶದ ಅರಸ ಮುಸ್ಲಿಮರ ಸ್ಥಿತಿಗತಿಗಳನ್ನು ಮತ್ತು ಘಟನೆಗಳನ್ನು ಕೇಳಿದ ನಂತರ ಯಝ್ದಜರ್‌ದಿಗೆ ಹೀಗೆ ಪತ್ರ ಬರೆದರು: ನಿನ್ನ ದೂತನು ಮುಸ್ಲಿಮರ ವೈಶಿಷ್ಟ್ಯಗಳ ಬಗ್ಗೆ ಹೇಳಿದ ಮಾತುಗಳಿಂದ ನನಗೆ ಅನಿಸುವುದೇನೆಂದರೆ, ಅವರು ಪರ್ವತವನ್ನು ಕೂಡ ಡಿಕ್ಕಿ ಹೊಡೆದರೂ ಅದನ್ನು ಅವರು ಪುಡಿಪುಡಿಯನ್ನಾಗಿ ಮಾಡುವರು. ನಾನು ನಿಮ್ಮ ಸಹಾಯಕ್ಕಾಗಿ ಬಂದರೆ, ಮುಸ್ಲಿಮರಲ್ಲಿ ಈ ಗುಣಗಳು ಇರುವ ತನಕ ಅವರು ನನ್ನ ಸಿಂಹಾಸನವನ್ನು ಕೂಡ ವಶಪಡಿಸುವರು. ನಾನು ಅವರಿಗೆ ಯಾವುದೇ ಹಾನಿಯನ್ನು ಉಂಟುಮಾಡಲಾರನು. ಆದ್ದರಿಂದ ನೀನು ಅವರೊಡನೆ ರಾಜಿ ಮಾಡು. ಯಝ್ದಜರ್‌ದ್ ಅನೇಕ ಪಟ್ಟಣಗಳಲ್ಲಿ ಸುತ್ತುತ್ತಿದ್ದನು. ಕೊನೆಗೆ ಹಝ್ರತ್ ಉಮರರ ಖಿ಼ಲಾಫತ್ ಕಾಲದಲ್ಲಿ ಕೊಲ್ಲಲ್ಪಟ್ಟನು. (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ, ಅಸ್ಸಲಾಬಿ, ಪುಟ–433–435, ದಾರುಲ್ ಮಾರಿಫ ಬೈರೂತ್ 2012)

ಅಹ್‌ನಫ್ ಬಿನ್ ಖೈಸ್ ವಿಜಯದ ಸುವಾರ್ತೆ ಮತ್ತು ಯುದ್ಧ ಸಂಪತ್ತನ್ನು ಹಝ್ರತ್ ಉಮರ್‌ರ ಸನ್ನಿಧಿಗೆ ರವಾನೆ ಮಾಡಿದರು. ಹಝ್ರತ್ ಉಮರ್(ರ) ಮುಸ್ಲಿಮರನ್ನು ಒಟ್ಟುಗೂಡಿಸಿದರು. ವಿಜಯದ ಕುರಿತಿನ ಪತ್ರವನ್ನು ಹಝ್ರತ್ ಉಮರರ ನಿರ್ದೇಶನ ಪ್ರಕಾರ ಓದಿಹೇಳಲಾಯಿತು. ಅನಂತರ ಹಝ್ರತ್ ಉಮರ್(ರ) ತನ್ನ ಖುತ್ಬದಲ್ಲಿ ಹೇಳಿದರು: ಖಂಡಿತವಾಗಿಯೂ ಅಲ್ಲಾಹನು ತನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಬಗ್ಗೆ ಪ್ರಸ್ತಾಪಿಸಿದ್ದಾನೆ. ಯಾವ ಸನ್ಮಾರ್ಗದೊಂದಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಕಳುಹಿಸಿದನೋ ಆ ಸನ್ಮಾರ್ಗದ ಬಗ್ಗೆ ಪ್ರಸ್ತಾಪಿಸಿರುವೆನು. ಅಲ್ಲಾಹನು ಮತ್ತು ಅವರ ಪೈಗಂಬರರನ್ನು ಅನುಸರಿಸುವವರಿಗೆ ಬೇಗನೇ ಪ್ರತಿಫಲ ಮತ್ತು ಇಹಪರ ಲೋಕದಲ್ಲಿ ತಡವಾಗಿ ಒಳಿತು ಲಭಿಸುವುದಾಗಿ ವಾಗ್ದಾನ ಮಾಡಿರುವನು. ಅನಂತರ ಹಝ್ರತ್ ಉಮರ್(ರ) ಪವಿತ್ರ ಖುರ್‌ಆನಿನ ಈ ಆಯತ್ ಓದಿದರು: **ಹುವಲ್ಲಧೀ ಅರ್‌ಸಲ ರಸೂಲಹು ಬಿಲ್‌ಹುದಾ ವ ದೀನಿಲ್ ಹಖ್ಖಿ ಲಿಯುಝ್ಹಿರಹು ಅಲದ್ದೀನಿ ಕುಲ್ಲಿಹೀ ವಲೌ ಕರಿಹಲ್ ಮುಶ್ರಿಕೀನ್**. ಎಂದರೆ, "ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಅವನು ತನ್ನ ಸಂದೇಶವಾಹಕನನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ನಿಯೋಜಿಸಿದ್ದಾನೆ. ಬಹುದೇವಾರಾಧಕರು ಅದನ್ನು ದ್ವೇಷಿಸಿದರೂ ಸರಿ." ಎಲ್ಲ ಸ್ತುತಿ ಅಲ್ಲಾಹನಿಗಾಗಿದೆ. ಅವನು ತನ್ನ ವಾಗ್ದಾನವನ್ನು ಈಡೇರಿಸಿದನು. ತನ್ನ ಸೈನ್ಯದ ಸಹಾಯ ಮಾಡಿದನು. ಕೇಳಿರಿ, ಅಲ್ಲಾಹನು ಮಜೂಸಿ ರಾಜಾಧಿಕಾರವನ್ನು ನಾಶಪಡಿಸಿದ್ದಾನೆ. ಅವರ ಒಗ್ಗಟ್ಟನ್ನು ತುಂಡು ತುಂಡು ಮಾಡಿದ್ದಾನೆ. ತಮ್ಮ ಆಡಳಿತದ ಒಂದು ಗೇಣು ಭೂಮಿ ಸಹ ಅವರ ಅಧಿಕಾರದಲ್ಲಿ ಈಗಿಲ್ಲ. ಅವರು ಯಾವನೇ ಮುಸ್ಲಿಮನಿಗೆ ನಷ್ಟವನ್ನು ಉಂಟುಮಾಡಲಾರರು. ಕೇಳಿರಿ, ಅಲ್ಲಾಹನು ನಿಮ್ಮನ್ನು ಅವರ ಭೂಮಿ, ಅವರ ಮನೆಗಳು, ಅವರ ಮಕ್ಕಳ ವಾರಸುದಾರರನ್ನಾಗಿ ಮಾಡಿರುವನು. ನೀವು ಹೇಗೆ ವರ್ತಿಸುತ್ತೀರಿ ಎಂದು ನೋಡಲಿಕ್ಕಾಗಿ. ಈ ಮಾತನ್ನು ಚೆನ್ನಾಗಿ ನೆನಪಿನಲ್ಲಿಡಿರಿ. ನಿಮ್ಮ ಹಾಗೆ ಅನೇಕ ಸಮುದಾಯಗಳು ಸೈನಿಕ ಬಲದ ಮಾಲಿಕರಾಗಿದ್ದರು. ಕಳೆದ ಕಾಲಘಟ್ಟದ ಅನೇಕ ಸಭ್ಯ ಸಮುದಾಯಗಳು ದೂರ ದೂರ ದೇಶಗಳನ್ನು ವಶಪಡಿಸಿಕೊಂಡಿದ್ದರು. ಅಲ್ಲಾಹನು ತನ್ನ ಆಜ್ಞೆಯನ್ನು ಜಾರಿಗೊಳಿಸುವವನಾಗಿದ್ದಾನೆ. ತನ್ನ ವಾಗ್ದಾನವನ್ನು ಈಡೇರಿಸುವವನಾಗಿದ್ದಾನೆ. ಅವನು ಒಂದು ಸಮುದಾಯದ ನಂತರ ಇನ್ನೊಂದು ಸಮುದಾಯವನ್ನು ತರುವನು. ಅಲ್ಲಾಹನ ಆಜ್ಞೆಗಳನ್ನು ಜಾರಿಗೊಳಿಸಲಿಕ್ಕಾಗಿ ನೀವು ಅಲ್ಲಾಹನೊಡನೆ ಮಾಡಿದ ಪ್ರತಿಜ್ಞೆಗಳನ್ನು ಈಡೇರಿಸುವ ವ್ಯಕ್ತಿಯನ್ನು ಅನುಸರಿಸಿರಿ. ನೀವು ನಿಮ್ಮ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡದಿರಿ. ಇಲ್ಲದಿದ್ದರೆ ಅಲ್ಲಾಹನು ನಿಮ್ಮ ಬದಲಾಗಿ ಬೇರೆಯವರನ್ನು ತರುವನು. ಎಂದರೆ ನೀವು ನಿಮ್ಮ ಧರ್ಮವನ್ನು ಮರೆತುಬಿಟ್ಟರೆ, ಅವನ ಆಜ್ಞೆಗಳನ್ನು ಪಾಲಿಸದಿದ್ದರೆ, ಅಲ್ಲಾಹನು ಬೇರೆಯವರನ್ನು ತರುವನು. ಶತ್ರುಗಳು ಮುಸ್ಲಿಂ ಸಮುದಾಯವನ್ನು ನಾಶಪಡಿಸುವರು ಎಂಬ ಭಯ ನನಗಿಲ್ಲ. ಬದಲಾಗಿ ನೀವು ಮುಸ್ಲಿಮರಿಂದಲೇ ಮುಸ್ಲಿಂ ಸಮುದಾಯ ನಾಶವಾಗುವುದು ಎಂಬ ಭಯವಿದೆ. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–549, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ತಾರೀಖ್ ತಿಬರಿ ಅನುವಾದ, ಸಂಪುಟ–3, ಭಾಗ–1, ಪುಟ–190, ದಾರುಲ್ ಇಶಾಅತ್ ಕರಾಚಿ 2003)

ಇಂದು ಈ ಮಾತು ಸತ್ಯವಾದದ್ದು ನಾವು ನೋಡುತ್ತಿದ್ದೇವೆ. ಮುಸ್ಲಿಮರೇ ಮುಸ್ಲಿಮರನ್ನು ಕೊಲ್ಲುತ್ತಿದ್ದಾರೆ. ಒಂದು ದೇಶ ಮತ್ತೊಂದು ದೇಶದ ಮೇಲೆ ಜಿಹಾದಿನ ಹೆಸರಲ್ಲಿ ಆಕ್ರಮಣ ನಡೆಸುತ್ತಿದೆ.

ಇಸ್ತಖ್ರ್ ವಿಜಯ: ಇಸ್ತಖರ್ ಪರ್ಷಿಯಾದ ರಾಜಧಾನಿ. ಇದು ಸಾಸಾನಿ ರಾಜರ ಪ್ರಾಚೀನ ಕೇಂದ್ರ ಮತ್ತು ಪವಿತ್ರ ಸ್ಥಳವಾಗಿತ್ತು. ಅವರ ಪುರಾತನ ಅಗ್ನಿಕುಂಡವೂ ಇತ್ತು, ಇದನ್ನು ಇರಾನ್ ಚಕ್ರವರ್ತಿ ಸ್ವತಃ ನೋಡಿಕೊಳ್ಳುತ್ತಿದ್ದನು. ಹಝ್ರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ) ಇಸ್ತಖರ್ ಸ್ಥಳದ ಉದ್ದೇಶದಿಂದ, ಅದರ ಕಡೆಗೆ ಮುನ್ನಡೆದರು ಮತ್ತು ಜೌರ್ ಸ್ಥಳದಲ್ಲಿ ಇಸ್ತಖರ್ ಜನರೊಂದಿಗೆ ಘರ್ಷಣೆ ನಡೆಯಿತು. ಅಲ್ಲಿ ಮುಸ್ಲಿಮರು ಅವರೊಂದಿಗೆ ಪೂರ್ಣ ಯುದ್ಧ ಮಾಡಿದರು. ನಂತರ ಸರ್ವಶಕ್ತನಾದ ಅಲ್ಲಹನು ಜೌರ್ ಜನರ ವಿರುದ್ಧ ಮುಸ್ಲಿಮರಿಗೆ ವಿಜಯವನ್ನು ನೀಡಿದನು ಮತ್ತು ಮುಸ್ಲಿಮರು ಕೂಡ ಇಸ್ತಖ್ರ್ ಅನ್ನು ವಶಪಡಿಸಿಕೊಂಡರು. ಹಲವರು ಕೊಲ್ಲಲ್ಪಟ್ಟರು ಮತ್ತು ಅನೇಕರು ಓಡಿಹೋದರು. ಹಝ್ರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ)ರವರು ಅವಿಶ್ವಾಸಿಗಳನ್ನು ಜಿಝ್ಯ ಪಾವತಿಸಲು ಮತ್ತು ದಿಮ್ಮಿ (ರಕ್ಷಿತ ಪ್ರಜೆ) ಪ್ರಜೆಗಳಾಗಲು ಆಹ್ವಾನಿಸಿದರು. ಆದ್ದರಿಂದ ಅವರು ಅವರೊಂದಿಗೆ ಪತ್ರವ್ಯವಹಾರ ಮಾಡಿದನು ಮತ್ತು ಹಜರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ) ಕೂಡ ಅವನೊಂದಿಗೆ ಸಂಪರ್ಕದಲ್ಲಿದ್ದರು. ಅಂತಿಮವಾಗಿ, ಅವರ ಆಡಳಿತಗಾರ ಹುರ್ಮುಜ್ ಈ ಪ್ರಸ್ತಾಪವನ್ನು ಸ್ವೀಕರಿಸಿದನು ಮತ್ತು ಜಿಝ್ಯವನ್ನು ಪಾವತಿಸಲು ಒಪ್ಪಿದನು. ಆದ್ದರಿಂದ, ಇಸ್ತಖ್ರ್ ವಿಜಯದ ಸಮಯದಲ್ಲಿ ಪಲಾಯನ ಮಾಡಿದ ಅಥವಾ ಬೇರೆಯಾದವರೆಲ್ಲರೂ ಜಿಝ್ಯ ಪಾವತಿಸುವ ಷರತ್ತಿನ ಮೇಲೆ ಶಾಂತಿಯ ಸ್ಥಳಕ್ಕೆ ಮರಳಿದರು. ಶತ್ರುಗಳ ಸೋಲಿನ ನಂತರ, ಹಝ್ರತ್ ಉಸ್ಮಾನ್ ಬಿನ್ ಅಬುಲ್‌ಆಸ್ ಯುದ್ಧ ಸಂಪತ್ತನ್ನು ಒಟ್ಟುಸೇರಿಸಿದರು ಮತ್ತು ಅದರ ಐದನೇ ಒಂದು ಭಾಗವನ್ನು ತೆಗೆದು ಅಮೀರುಲ್ ಮೂಅ್‌ಮಿನೀನ್ ಹಝ್ರತ್ ಉಮರ್‌ರ(ರ) ಸನ್ನಿಧಿಗೆ ಕಳುಹಿಸಿದರು ಮತ್ತು ಉಳಿದ ಭಾಗವನ್ನು ಮುಸ್ಲಿಮರಲ್ಲಿ ಹಂಚಿದರು ಅದೇ ರೀತಿ ಎಲ್ಲಾ ಮುಸ್ಲಿಮ್ ಸೈನ್ಯವನ್ನು ದರೋಡೆ ಮಾಡುವುದರಿಂದ ತಡೆದರು ಮತ್ತು ಕಿತ್ತುಕೊಂಡ ವಸ್ತುಗಳನ್ನು ಹಿಂದಿರುಗಿಸಲು ಆದೇಶಿಸಿದರು. ಜನರಿಂದ ಏನು ಕಿತ್ತುಕೊಳ್ಳಲಾಗಿದೆಯೋ ಅವೆಲ್ಲವನ್ನು ಜನರಿಗೆ ಹಿಂದಿರುಗಿಸಲು ಸೇನಾಧಿಪತಿಯು ಆದೇಶಿಸಿದರು. ನಂತರ ಹಝ್ರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ) ಎಲ್ಲಾ ಜನರನ್ನು ಒಟ್ಟುಗೂಡಿಸಿ ಹೇಳಿದರು: ನಾವು ಎಲ್ಲಿಯವರೆಗೆ ಕಳ್ಳತನದಲ್ಲಿ, ದರೋಡೆಯಲ್ಲಿ ಮತ್ತು ದ್ರೋಹ ಮಾಡುವುದಿಲ್ಲವೋ ಅಲ್ಲಿಯ ವರೆಗೆ ನಮ್ಮ ವಿಷಯವು ಯಾವಾಗಲೂ ಉತ್ತುಂಗ ಸ್ಥಾನದಲ್ಲಿಯೇ ಇರುವುದು ಮತ್ತು ನಾವು ಎಲ್ಲಾ ವಿಷಯಗಳಲ್ಲಿಯೂ ರಕ್ಷಣೆಯಲ್ಲಿರುವೆವು. ನಾವು ಕಳ್ಳತನಕ್ಕೆ ದ್ರೋಹ ಮಾಡಲು ಪ್ರಾರಂಭಿಸಿದಾಗ ಮತ್ತು ಈ ಬೇಡದ ವಿಳಯಗಳು ನಮ್ಮೊಳಗೆ ಗೋಚರಿಸಿದಾಗ, ಈ ದುಷ್ಟ ಕಾರ್ಯಗಳು ನಮ್ಮಲ್ಲಿ ಹೆಚ್ಚಿನವರನ್ನು ಆವರಿಸುತ್ತವೆ. ನೀವು ದ್ರೋಹ ಮಾಡಿದರೆ, ಕಳ್ಳತನ ಮಾಡಿದರೆ ಆಗ ಈ ವಿಳಯಗಳು ನಿಮ್ಮನ್ನು ಆವರಿಸುತ್ತವೆ ಮತ್ತು ಇಂದಿನ ಮುಸ್ಲಿಮರಲ್ಲಿ ನಾವು ನೋಡುತ್ತಿರುವುದು ಇದನ್ನೇ. ತಮ್ಮಲ್ಲಿ ಲೂಟಿ ಇದೆ ಅಥವಾ ಅವರು ಎಲ್ಲಿಗೆ ಹೋದರೂ ಅಲ್ಲಿ ಲೂಟಿ ಮಾಡುತ್ತಾರೆ, ಅಪ್ರಾಮಾಣಿಕತೆ ಇದೆ ಮತ್ತು ಈ ಅನೈತಿಕತೆಯು ಅವರಿಗೆಲ್ಲರಿಗೂ ನಿಷ್ಪ್ರಯೋಜಕವನ್ನಾಗಿಸಿದೆ ಮತ್ತು ಪ್ರಪಂಚದ ಎಲ್ಲೆಡೆ ಕುಖ್ಯಾತರಾಗುತ್ತಿದ್ದಾರೆ.

ಹಝ್ರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ) ಅವರು ವಿಜಯದ ದಿನದಂದು ಹೇಳಿದ್ದು, ಸರ್ವಶಕ್ತವಾದ ಅಲ್ಲಾಹನು ಒಂದು ಜನಾಂಗಕ್ಕೆ ಒಳ್ಳೆಯದನ್ನು ಬಯಸಿದಾಗ, ಆತನು ಅವರನ್ನು ಎಲ್ಲಾ ರೀತಿಯ ದುಶ್ಚಟಗಳಿಂದ ರಕ್ಷಿಸುತ್ತಾನೆ ಮತ್ತು ಅವರಲ್ಲಿ ವಿಶ್ವಾಸಾರ್ಹತೆ ಮತ್ತು ಪ್ರಾಮಾಣಿಕತೆಯ ಗುಣಗಳನ್ನು ಸೃಷ್ಟಿಸುತ್ತಾನೆ. ಆದ್ದರಿಂದ, ಪ್ರಾಮಾಣಿಕತೆಯನ್ನು ರಕ್ಷಿಸಿಕೊಳ್ಳಿರಿ, ಏಕೆಂದರೆ ನಿಮ್ಮ ಧರ್ಮದಲ್ಲಿ ಮೊಟ್ಟ ಮೊದಲು ಬಿಟ್ಟು ಹೋಗುವ ವಸ್ತು ಎಂದರೆ ಅದು ಪ್ರಾಮಾಣಿಕತೆಯಾಗಿದೆ. ಮತ್ತು ಯಾವಾಗ ಪ್ರಾಮಾಣಿಕತೆ ನಿಮ್ಮಿಂದ ಹೋಗುತ್ತದೆಯೋ, ಆಗ ಪ್ರತಿದಿನವೂ ನಿಮ್ಮಿಂದ ಒಂದೊಂದು ಒಳ್ಳೆಯ ಮಾತುಗಳು ಕಳೆದುಹೋಗುವುದು. ಸದ್ಗುಣಗಳು ಕಣ್ಮರೆಯಾಗಲಾರಂಭಿಸುತ್ತವೆ.

ಹಝ್ರತ್ ಉಮರ್ ಫಾರೂಕ್(ರ)ರವರ ಖಿಲಾಫತ್ತಿನ ಕೊನೆಯ ದಿನಗಳಲ್ಲಿ ಮತ್ತು ಹಝ್ರತ್ ಉಸ್ಮಾನ್(ರ)ರವರ ಖಿಲಾಫತ್ತಿನ ಮೊದಲ ವರ್ಷದಲ್ಲಿ, ಶಹರಕ್ ಎಂಬವನು ಪರ್ಷಿಯಾದ ಜನರನ್ನು ದಂಗೆಗೆ ಪ್ರಚೋದಿಸಿದನು ಅದರ ಪರಿಣಾಮವಾಗಿ, ಪರ್ಷಿಯಾದ ಜನರು ತಮ್ಮ ಒಪ್ಪಂದವನ್ನು ಮುರಿದರು. ಅವರನ್ನು ನಿಗ್ರಹಿಸಲು ಹಝ್ರತ್ ಉಸ್ಮಾನ್ ಬಿನ್ ಅಬುಲ್ ಆಸ್(ರ) ಅವರನ್ನು ಮತ್ತೆ ಕಳುಹಿಸಲಾಯಿತು ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಮುಅಮ್ಮರ್ ಮತ್ತು ಶಿಬಲ್ ಬಿನ್ ಮಾಬಾದ್ ಬಜ್ಲಿಯವರೊಂದಿಗೆ ಹಿಂದಿನಿಂದ ಒಂದು ಬೆಂಬಲ ಪಡೆಯನ್ನು ಕಳುಹಿಸಲಾಯಿತು. ಅವರು ಪರ್ಷಿಯಾದಲ್ಲಿ ಶತ್ರುಗಳೊಡನೆ ಭೀಕರ ಯುದ್ಧವನ್ನು ನಡೆಸಿದ್ದರು ಇದರಲ್ಲಿ ಶಹರಾಕ್ ಮತ್ತು ಅವನ ಮಗನನ್ನು ಕೊಲ್ಲಲಾಯಿತು ಮತ್ತು ಅದಲ್ಲದೆ ಅನೇಕ ಜನರು ಸಹ ಕೊಲ್ಲಲ್ಪಟ್ಟರು ಮತ್ತು ಹಜರತ್ ಉಸ್ಮಾನ್ ಬಿನ್ ಅಬುಲ್ ಆಸ್ ಅವರ ಸಹೋದರ ಹಕೀಮ್ ಬಿನ್ ಅಬುಲ್ ಆಸ್ ನಿಂದ ಶಹರಕ್ ಕೊಲ್ಲಲ್ಪಟ್ಟರು. (ತಾರಿಖ್ ತಬರಿ ಅನುವಾದಕ, ಸಂಪುಟ–3, ಭಗ–1, ಪುಟ–192–193, ದಾರುಲ್ ಇಶಾತ್ ಕರಾಚಿ 2003)

ಒಂದು ವರದಿಯ ಪ್ರಕಾರ ಅಸ್ತಖ಼ರನ್ನು ಮೊದಲ ಬಾರಿಗೆ ಹಝ್ರತ್ ಅಲಾ ಬಿನ್ ಹಝ್ರಮಿ ಹಿಜರೀ 17ರಲ್ಲಿ ಜಯಿಸಿದ್ದರು. ಅಲ್ಲಿನ ನಿವಾಸಿಗಳು ಸಂಧಾನ ಮಡಿದ ನಂತರ ಒಪ್ಪಂದವನ್ನು ಮುರಿದರು ಅದರ ಪರಿಣಾಮವಾಗಿ

ಅಲ್ಲಿ ದಂಗೆ ಎದ್ದೇಳಿತು. ಅದನ್ನು ನಿಯಂತ್ರಣಿಸಲು ಹಝ್ರತ್ ಉಸ್ಮಾನ್ ಬಿನ್ ಅಬುಲ್ಆಸ್(ರ) ರವರು ತಮ್ಮ ಪುತ್ರ ಹಾಗೂ ಅವರ ಸಹೋದರನನ್ನು ಕಳುಹಿಸಿದರು ಅವರು ಇಸ್ತಖರ್‌ನ ಮುಖಂಡನಾದ ಶಹ್‌ರಖ್‌ನನ್ನು ವಧಿಸಿದ್ದರು. (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಸ್ಸಲಾಬಿ, ಪುಟ-436, ದಾರುಲ್ ಮಾರಿಫ ಬೈರೂತ್ 2007) (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ-2, ಪುಟ-382-383, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006)

ಫಸಾ ಮತ್ತು ದಾರಾಬಜರ್ದ್: ಹಝ್ರತ್ ಸಾರಿಯಾ ಬಿನ್ ಝುನೈವ್(ರ) ಅವರನ್ನು ಹಝ್ರತ್ ಉಮರ್(ರ) ಫಾಸಾ ಮತ್ತು ದಾರಾಬಜಿರ್ದ್ ನಗರಕ್ಕೆ ಕಳುಹಿಸಿದರು. ಇದು 23 ಹಿಜರಿಯ ಘಟನೆಯಾಗಿದೆ. ಫಾಸಾ ಪರ್ಷಿಯಾದ ಶೀರಾಝ್ ನಗರದಿಂದ 216 ಮೈಲುಗಳಷ್ಟು ದೂರದಲ್ಲಿರುವ ಪುರಾತನ ಪರ್ಷಿಯನ್ ನಗರವಾಗಿದೆ. ದಾರಾಬಜರ್ದ್ ಫಾಸಾ ಮತ್ತು ಇತರ ನಗರಗಳನ್ನು ಒಳಗೊಂಡಿರುವ ಪರ್ಷಿಯಾದ ಒಂದು ದೊಡ್ಡ ಪ್ರದೇಶವಾಗಿದೆ. ಪ್ರವಾದಿಯ ಸಾಕ್ಷ್ಯಾಧಾರಗಳಲ್ಲಿ ಒಂದು ವರದಿವಿದೆ. ಹಝ್ರತ್ ಇಬ್ನ್ ಉಮರ್(ರ) ವರದಿ ಮಾಡುತ್ತಾರೆ ಹಝ್ರತ್ ಉಮರ್(ರ) ಹಝ್ರತ್ ಸಾರಿಯಾರವರ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದರು. ಒಂದು ದಿನ ಹಝ್ರತ್ ಉಮರ್(ರ) ಜನರನ್ನು ಉದ್ದೇಶಿ ಮಾತನಾಡುತ್ತಿದ್ದಾಗ, ಅವರು ಇದ್ದಕ್ಕಿದ್ದಂತೆ ಉಚ್ಚ ಸ್ವರದಲ್ಲಿ, "ಯಾ ಸಾರಿಯಾ ಅಲ್‌ಜಬಲ್" ಎಂದು ಹೇಳಿದರು. ಓ ಸಾರಿಯಾ! ಪರ್ವತಕ್ಕೆ ಹೋಗಿ.

ತಾರೀಖೆ ತಬರಿಯಲ್ಲಿದೆ ಹಝ್ರತ್ ಉಮರ್(ರ) ರವರು ಹಝ್ರತ್ ಸಾರಿಯಾ ಬಿನ್ ಝುಯನೈಮ್(ರ)ರವರನ್ನು ಫಾಸಾ ಮತ್ತು ದಾರಾಬಜರ್ದ್‌ನ ಪ್ರದೇಶದ ಕಡೆ ಕಳುಹಿಸಿದ್ದರು. ಅವರು ಅಲ್ಲಿಗೆ ತಲುಪಿ ಜನರನ್ನು ಸುತ್ತುವರಿದರು. ನಂತರ ಆ ಜನರು ತಮ್ಮ ಬೆಂಬಲಿಗರಿಗೆ ಸಹಾಯ ಮಾಡಲು ಕರೆ ಮಾಡಿದರು ಆಗ ಅವರು ಮುಸ್ಲಿಂ ಸೈನ್ಯವನ್ನು ಎದುರಿಸಲು ಮರುಭೂಮಿಯಲ್ಲಿ ಒಟ್ಟುಗೂಡಿದರು ಅವರ ಸಂಖ್ಯೆ ಹೆಚ್ಚಾದಾಗ ಅವರು ಎಲ್ಲಾ ಕಡೆಗಳಲ್ಲಿ ಮುಸ್ಲಿಮರನ್ನು ಸುತ್ತುವರಿದರು. ಹಝ್ರತ್ ಉಮರ್(ರ) ಅವರು ಶುಕ್ರವಾರ ಖುತ್‌ಬ ನೀಡುತ್ತಿದ್ದರು ಆಗ ಅವರು ಹೇಳಿದರು: ಓ ಸಾರಿಯಾ ಬಿನ್ ಝುನೈಮ್! ಅಲ್‌ಜಬಲ್ ಅಲ್‌ಜಬಲ್ ಎಂದರು ಅಂದರೆ, ಜುನೈಮ್ ನ ಮಗ ಸರಿಯಾ! ಪರ್ವತಗಳು ಪರ್ವತಗಳು. ಮುಸ್ಲಿಂ ಸೇನೆ ತಂಗಿದ್ದ ಸ್ಥಳದ ಬಳಿ ಒಂದು ಪರ್ವತವಿತ್ತು. ಅವರು ಅದರಲ್ಲಿ ಆಶ್ರಯ ಪಡೆದರೆ, ಶತ್ರುಗಳು ಒಂದು ಕಡೆಯಿಂದ ಮಾತ್ರ ದಾಳಿ ಮಾಡಬಹುದಗಿತ್ತು. ಆದ್ದರಿಂದ ಅವರು ಪರ್ವತಗಳಲ್ಲಿ ಆಶ್ರಯ ಪಡೆದರು. ತದನಂತರ ಅವರು ಹೋರಾಡಿ ಶತ್ರುಗಳನ್ನು ಸೋಲಿಸಿದರು ಮತ್ತು ಸಾಕಷ್ಟು ಯುದ್ಧದ ಸಂಪತ್ತು ಗಳಿಸಿದರು. ಆ ಸಂಪತ್ತಿನಲ್ಲಿ ಒಂದು ಚಿನ್ನಾಭರಣಗಳಿಂದ ತುಂಬಿದ್ದ ಒಂದು ಪೆಟ್ಟಿಗೆಯು ಇತ್ತು ಅದನ್ನು ಮುಸ್ಲಿಮ್ ಸೇನೆಯು ಪರಸ್ಪರ ಒಪ್ಪಿಗೆಯಿಂದ ಹಝ್ರತ್ ಉಮರ್(ರ) ಅವರಿಗೆ ಉಡುಗೋರೆಯಾಗಿ ನೀಡಿದರು. ಹಝ್ರತ್ ಸಾರಿಯಾ(ರ) ರವರು ಆ ಪೆಟ್ಟಿಗೆ ಮತ್ತು ವಿಜಯದ ಸುವಾರ್ತೆಯೊಂದಿಗೆ ಓರ್ವ ಧೂತನನ್ನು ಕಳುಹಿಸಿದರು. ಆ ದೂತನು ಮದೀನಕ್ಕೆ ತಲುಪಿದಾಗ, ಹಝ್ರತ್ ಉಮರ್(ರ) ಜನರಿಗೆ ಆಹಾರ ನೀಡುತ್ತಿದ್ದರು ಮತ್ತು ಅವರ ಕೈಯಲ್ಲಿ ಒಂಟೆಗಳನ್ನು ಓಡಿಸಲು ಬಳಸುವ ಕೋಲಿತ್ತು. ಈ ದೂತನು ಹಝ್ರತ್ ಉಮರ್(ರ) ಅವರೊಂದಿಗೆ ಮಾತನಾಡಲು ಬಯಸಿದನು, ಹಝ್ರತ್ ಉಮರ್(ರ) ಅವನನ್ನು ಊಟಕ್ಕಾಗಿ ಕೂರಿಸಿದರು. ಹಾಗಾಗಿ ಅವನು ಊಟಕ್ಕೆ ಕುಳಿತನು. ಅವನು ಊಟ ಮುಗಿಸಿದಾಗ, ಹಝ್ರತ್ ಉಮರ್(ರ) ಹೊರಡಲು ಆರಂಭಿಸಿದರು. ಆ ವ್ಯಕ್ತಿ ಮತ್ತೆ ಎದ್ದು ಅವರನ್ನು ಹಿಂಬಾಲಿಸಲು ಆರಂಭಿಸಿದನು. ಹಝ್ರತ್ ಉಮರ್(ರ) ತನ್ನ ಹಿಂದೆ ಬರುತ್ತಿರುವುದನ್ನು ನೋಡಿ ಅವನ ಹೊಟ್ಟೆ ಇನ್ನೂ ತುಂಬಿಲ್ಲ ಎಂದು ಭಾವಿಸಿದರು. ಆದ್ದರಿಂದ ಅವರು ತನ್ನ ಮನೆಯ ಬಾಗಿಲಿಗೆ ತಲುಪಿ, "ಒಳಗೆ ಬಾ" ಎಂದು ಹೇಳಿದರು, ಹಝ್ರತ್ ಉಮರ್(ರ) ತಮ್ಮ ಊಟ ತಯಾರಿಸುವವರಿಗೆ ಆಹಾರವನ್ನು ಮೇಜಿನ ಮೇಲೆ ತರಲು ಆದೇಶಿಸಿದರು. ಆಹಾರ ತರಲಾಯಿತು, ಆ ಆಹಾರ ಬ್ರೆಡ್ ಮತ್ತು ಆಲಿವ್ ಮತ್ತು ಉಪ್ಪನ್ನು ಒಳಗೊಂಡಿತ್ತು. ನಂತರ ಅವರು ಅವನಿಗೆ, "ತಿನ್ನಿರಿ" ಎಂದು ಹೇಳಿದರು, ಅವನು ತಿನ್ನುವುದನ್ನು ಮುಗಿಸಿದಾಗ, ಯಾ ಅಮೀರಲ್ ಮುಮಿನೀನ್! ನಾನು ಸಾರಿಯಾ ಬಿನ್ ಝುನೈಮ್‌ನ ದೂತನಾಗಿದ್ದೇನೆ. ಅದಕ್ಕೆ ಅವರು ಹೇಳಿದರು, "ಸ್ವಾಗತ." ನಂತರ ಆತನ ಮೊಣಕಾಲು ಹಝ್ರತ್ ಉಮರ್(ರ)ರವರ ಮೊಣಕಾಲು ಮುಟ್ಟುವವರೆಗೂ ಆತನನ್ನು ಸಮೀಪಿಸಿದರು. ನಂತರ ಹಝ್ರತ್ ಉಮರ್(ರ) ಅವರನ್ನು ಮುಸ್ಲಿಮರ ಬಗ್ಗೆ ಕೇಳಿದರು. ನಂತರ ಅವನು ಸಾರಿಯಾದ ಬಗ್ಗೆ ಕೇಳಿದರು ಆಗ ಆ ದೂತನು ಹೇಳಿದನು: ಆತನು ಆ ಪೆಟ್ಟಿಗೆಯ ಬಗ್ಗೆ ಸಂಪೂರ್ಣ ವಿವರಗಳನ್ನು ಹೇಳಿದಾಗ ಹಝ್ರತ್ ಉಮರ್(ರ) ಅವನಿಗೆ ನೋಡಿ ಹೇಳಿದರು: ಇಲ್ಲ. ಅದರಲ್ಲಿ ಗೌರವದ ವಿಷಯ ಏನೂ ಇಲ್ಲ. ಆ ಸೈನ್ಯದ ಕಡೆ ಮರಳಿ ಹೋಗಿ ಆ ಚಿನ್ನಾಭರಣವನ್ನು ಅವರ ನಡುವೆ ಹಂಚಿರಿ. ಅದಕ್ಕೆ ಆ ದೂತನು ಹೇಳಿದರು: ಅಮೀರಲ್ ಮುಮಿನೀನ್! ನನ್ನ ಒಂಟೆ ತೂಕವನ್ನು ಕಳೆದುಕೊಂಡಿದೆ ಮತ್ತು ನಾನು ಬಹುಮಾನದ ನಿರೀಕ್ಷೆಯಲ್ಲಿ ಬಹಳಷ್ಟು ಸಾಲವನ್ನು ತೆಗೆದುಕೊಂಡಿದ್ದೇನೆ. ಹಾಗಾಗಿ ಅದನ್ನು ಸರಿದೂಗಿಸಲು ನನಗೆ ಸಾಧ್ಯವಾದಷ್ಟು ಬಹುಮಾನವಾಗಿ ನೀಡಿರಿ. ಅದಕ್ಕೆ ಹಝ್ರತ್ ಉಮರ್(ರ) ಆತನ ಒಂಟೆಗೆ ಬದಲಾಗಿ ದಾನದ ಒಂಟೆಯೊಂದನ್ನು ಕೊಟ್ಟು ಆತನ ಒಂಟೆಯನ್ನು ತೆಗೆದುಕೊಂಡು ಅದನ್ನು ದಾನದ ಒಂಟೆಗೆ ಸೇರಿಸಿದರು ಅವನು ಒತ್ತಾಯಿಸುತ್ತಲೇ ಇದ್ದನು. ಹಝ್ರತ್ ಉಮರ್(ರ)ರವರ ಆದೇಶದ ಪ್ರಕಾರ ನೆರವೇರಿಸಲಾಯಿತು.

ಹೀಗೂ ಹೇಳಲಾಗುತ್ತದೆ ಅಂದರೆ ದೂತನು ಗೆಲುವಿನ ಶುಭ ಸುದ್ದಿಯೊಂದಿಗೆ ಮದೀನಾಕ್ಕೆ ಬಂದಾಗ, ಮದೀನಾದ ಜನರು ಆತನಿಗೆ ಸಾರಿಯಾ ಮತ್ತು ವಿಜಯದ ಬಗ್ಗೆ ಮತ್ತು ಯುದ್ಧದ ದಿನ ಮುಸ್ಲಿಮರು ಯಾವುದೇ ಧ್ವನಿಯನ್ನು ಕೇಳಿದ್ದಾರೆಯೇ? ಎಂದು ಕೇಳಿದರು. ಅದಕ್ಕೆ ಆ ದೂತ ಹೇಳಿದನು, "ಹೌದು, ನಾವು ಸಾರಿಯಾ ಅಲ್‌ಜಬಲ್ ಎಂದು ಕೇಳಿದ್ದೇವೆ, ಅಂದರೆ ಪರ್ವತದ ಕಡೆ ಸರೀಯಿರಿ." ನಾವು ಸಾಯುವ ಹಂತದಲ್ಲಿದ್ದೆವು. ಆದ್ದರಿಂದ ನಾವು ಪರ್ವತದಲ್ಲಿ ಆಶ್ರಯ ಪಡೆದೆವು ಆಗ ಅಲ್ಲಾಹನು ನಮಗೆ ವಿಜಯವನ್ನು ನೀಡಿದನು. (ತಾರೀಖ್ ಅತ್ತಬರಿ ಅನುವಾದ, ಸಂಪುಟ-3, ಭಾಗ-1, ಪುಟಗಳು-194 ರಿಂದ 196, ದಾರ್ ಅಲ್-ಇಶಾತ್, ಕರಾಚಿ, 2003) (ತಾರೀಖ್ ಅತ್ತಿಬರಿ ಸಂಪುಟ-2, ಪುಟ-553-554, ದಾರ್ ಅಲ್-ಕಿತಾಬ್ ಅಲ್-ಅಲಾಮಿಯಾ ಬೈರುತ್ 2002) (ಸಲಾಬಿಯಿಂದ ಅಮೀರ್ ಅಲ್-ಮುಮಿನಿನ್ ಉಮರ್ ಬಿನ್ ಖಟ್ಟಬ್ ಅವರ ಜೀವನಚರಿತ್ರೆ , ಪುಟ 436, ದಾರ್ ಅಲ್-ಮುರ್ಫಾ ಬೈರುತ್ 2007)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಈ ಪದಗಳಿಗೆ, ಎಂದರೆ ಸಾರಿಯ ಅಲ್‌ಜಬಲ್ ಎಂಬ ವಾಕ್ಯಕ್ಕೆ ಭಾಷಣದೊಂದಿಗೆ ಯಾವುದೇ ಸಂಬಂಧವಿಲ್ಲದ ಕಾರಣ ಜನರು ಈ ಪದಗಳ ಬಗ್ಗೆ ಹಝ್ರತ್ ಉಮರ್‌ರೊಡನೆ(ರ) ಪ್ರಶ್ನಿಸಿದರು. ಹಝ್ರತ್ ಉಮರ್(ರ) ಹೇಳಿದರು: ಇಸ್ಲಾಮಿನ ಸೈನ್ಯದ ಒಬ್ಬ ಸೇನಾಧಿಪತಿಯಾದ ಸಾರಿಯನ ಹಿಂದಿನಿಂದ ಶತ್ರುಗಳು ಆಕ್ರಮಣ ನಡೆಸಲು ಹೋಗುವುದಾಗಿ ನಾನು ನೋಡಿದೆ. ಸದ್ಯದಲ್ಲೇ ಇಸ್ಲಾಮಿನ ಸೈನ್ಯ ನಾಶವಾಗುವ ಸಾಧ್ಯತೆಯಿತ್ತು. ಆದ್ದರಿಂದ ನಾನು ಅವರೊಡನೆ "ಹೇ ಸಾರಿಯ, ಪರ್ವತದ ಕಡೆಗೆ ಹೋಗು" ಎಂದು ಉಚ್ಚ ಧ್ವನಿಯಲ್ಲಿ ಹೇಳಿದೆ. ಈ ಘಟನೆ ನಡೆದು ಹೆಚ್ಚು ದಿನವಾಗಿರಲಿಲ್ಲ. ಅಷ್ಟರಲ್ಲಿ ಸಾರಿಯರ ಕಡೆಯಿಂದ ಇದೇ ವಿಷಯದಲ್ಲಿ ಮಾಹಿತಿ ಬಂತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆ ಸಮಯದಲ್ಲಿ ಹಝ್ರತ್ ಉಮರರ(ರ) ನಾಲಗೆ ಅವರ ನಿಯಂತ್ರಣದಲ್ಲಿ ಇರಲಿಲ್ಲ. ಆ ಸರ್ವಶಕ್ತನಾದ ಅಲ್ಲಾಹನ ನಿಯಂತ್ರಣದಲ್ಲಿತ್ತು. ಅವನಿಗೆ ದೂರ ಒಂದು ವಿಷಯವಲ್ಲ.
(ತಫ್ಸೀರೆ ಇಲಾಹಿ, ಅನ್ವಾರುಲ್ ಉಲೂಮ್, ಸಂಪುಟ-4, ಪುಟ-575)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಹಾಬರಿಗೆ ಇಲ್‌ಹಾಂ ಲಭಿಸಿರಲಿಲ್ಲವೆಂದು ಆಪಾದಿಸುವುದು ಅನುಚಿತ ಮತ್ತು ತಪ್ಪಾಗಿದೆ. ಹಝ್ರತ್ ಉಮರ್‌ರಿಗೆ ಸಾರಿಯದ ಸೈನ್ಯದ ಅಪಾಯಕಾರಿ ಸ್ಥಿತಿಯ ಬಗ್ಗೆ ಗೊತ್ತಾದದ್ದು ಇಲ್‌ಹಾಂ ಅಲ್ಲದೇ ಮತ್ತೇನು? (ಬರಾಹೀನೆ ಅಹ್ಮದಿಯಾ, ಭಾಗ-4, ರೂಹಾನಿ ಖಝಾಈನ್, ಸಂಪುಟ-1, ಪುಟ-653-654, ಅಡಿಟಿಪ್ಪಣಿಯ ಅಡಿಟಿಪ್ಪಣಿ ಸಂಖ್ಯೆ-4)

ಹಿಜರಿ 23ರಲ್ಲಿ ಹಝ್ರತ್ ಸುಹೈಲ್ ಬಿನ್ ಅದ್ದಿಯರ ಕೈಗಳಲ್ಲಿ ಕಿರ್ಮಾನ್ ಮೇಲೆ ವಿಜಯ ಸಾಧಿಸಲಾಯಿತು. ಅಬ್ದುಲ್ಲಾ ಬಿನ್ ಬುದೈಲ್‌ನ ಕೈಗಳಲ್ಲಿ ವಿಜಯ ಸಾಧಿಸಲಾಗಿತ್ತು ಎಂದು ಸಹ ಹೇಳಲಾಗುತ್ತದೆ.
(ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಸ್ಸಲಬಿ, ಪುಟ-436, ದಾರುಲ್ ಮಾರಿಫ ಬೈರೂತ್ 2007)

ಹಝ್ರತ್ ಸುಹೇಲ್(ರ)ರವರ ಪ್ರತಿಯೊಂದು ಮೊದಲ ತುಕಡಿಯ ಮೇಲೆ ನುಸೈರ್ ಬಿನ್ ಅಮರ್ ಇದ್ದರು. ಕೆರ್ಮನ್ ಜನರು ಅವರನ್ನು ಎದುರಿಸಲು ಒಟ್ಟು ಗೂಡಿದರು. ಅವರು ತಮ್ಮ ತಾಯ್ನಾಡಿನ ಸಮೀಪದಲ್ಲಿ ಯುದ್ಧಮಾಡುತ್ತಿದ್ದರು. ಅಂತಿಮವಾಗಿ ಅಲ್ಲಾಹನು ಅವರನ್ನು ಚದುರಿಸಿದನು ಮತ್ತು ಮುಸ್ಲಿಮರು ಅವರ ದಾರಿಯನ್ನು ತಡೆದರು. ನುಸೈರ್ ಅವರ ಶ್ರೇಷ್ಠ ಮುಖ್ಯಸ್ಥರನ್ನು ವಧಿಸಿದರು. ಅದೇ ರೀತಿ ಹಝ್ರತ್ ಸುಹೇಲ್ ಬಿನ್ ಉದಾಯಿ ಗ್ರಾಮಸ್ಥರ ಗುಂಪಿನ ಸಹಾಯದಿಂದ ಜಿರಾಫತ್ ಗೆ ಶತ್ರುಗಳ ದಾರಿಯನ್ನು ತಡೆದರು. ಹಝ್ರತ್ ಅಬ್ದುಲ್ಲಾ ಕೂಡ ಶಿರ್ ಮಾರ್ಗವಾಗಿ ಅಲ್ಲಿಗೆ ತಲುಪಿದರು ಮತ್ತು ಅವರ ಇಚ್ಛೆಯಂತೆ ಈ ಸ್ಥಳದಲ್ಲಿ ಅನೇಕ ಒಂಟೆಗಳು, ಕುರಿಗಳು ಮತ್ತು ಮೇಕೆಗಳನ್ನು ಕಂಡುಕೊಂಡರು ಹಾಗಾಗಿ ಅವರು ಒಂಟೆಗಳು, ಕುರಿಗಳು ಮತ್ತು ಮೇಕೆಗಳ ಬೆಲೆಯನ್ನು ಪಾವತಿಸಿದರು. ಅವುಗಳ ಬೆಲೆ ಅರೇಬಿಯನ್ ಒಂಟೆಗಳಿಗಿಂತ ಹೆಚ್ಚಾಗಿದ್ದರಿಂದ ಅವುಗಳ ನಡುವೆ ಭಿನ್ನಾಭಿಪ್ರಾಯವುಂಟಾಯಿತು. ಹಝ್ರತ್ ಉಮರ್(ರ) ಅವರಿಗೆ ಅರೇಬಿಕ್ ಒಂಟೆಯ ಮಾಂಸಕ್ಕೆ ಬೆಲೆ ಕಟ್ಟಲಾಗುತ್ತದೆ ಮತ್ತು ಈ ಒಂಟೆಗಳು ಅದಕ್ಕೆ ಹೋಲುತ್ತವೆ ಎಂದು ಬರೆದರು. ನೀವು ಯೋಚಿಸುವುದಕ್ಕಿಂತ ಹೆಚ್ಚಿನದಾಗಿದ್ದರೆ, ಅದರ ಮೌಲ್ಯವನ್ನು ಹೆಚ್ಚಿಸಿ. ಪ್ರಾಣಿಗಳು ತಾವು ಪಡೆದದ್ದಕ್ಕೆ ಅನುಗುಣವಾಗಿ

ಮೌಲ್ಯಮಾಪನ ಮಾಡಲಾಗುತ್ತಿದೆ. ಒಂದು ವರದಿಯ ಪ್ರಕಾರ ಹಝ್ರತ್ ಉಮರ್(ರ) ಅವರ ಖಿಲಾಫತ್ ಕಲಘಟ್ಟದಲ್ಲಿ, ಹಝ್ರತ್ ಅಬ್ದುಲ್ಲಾ ಬಿನ್ ಬುದೈಲ್ ಬಿನ್ ವರ್ಖಾ ಖುಜಾಯಿ ಕೆರ್ಮನ್ ಅನ್ನು ವಶಪಡಿಸಿಕೊಂಡರು ಎಂದು ಹೇಳಲಾಗಿದೆ. ನಂತರ ಕೆರ್ಮನ್ ವಿಜಯದ ನಂತರ ಅವರು ತಬಾಸಿನ್‌ಗೆ ಬಂದರು. ನಂತರ ಅವರು ಅಲ್ಲಿಂದ ಹಝ್ರತ್ ಉಮರ್(ರ) ರವರ ಬಳಿ ಬಂದು, "ನಾನು ತಬಾಸಿನ್ ಅನ್ನು ವಶಪಡಿಸಿಕೊಂಡಿದ್ದೇನೆ" ಎಂದು ಹೇಳಿದರು. ನೀವು ನನಗೆ ಈ ಎರಡು ಪ್ರದೇಶಗಳನ್ನು ಜಾಗೀರಿನಲ್ಲಿ ಕೊಡಿ ಎಂದು ಹೇಳಿದರು. ಹಝ್ರತ್ ಉಮರ್(ರ) ಅವರಿಗೆ ಈ ಎರಡು ಪ್ರದೇಶಗಳನ್ನು ಜಾಗೀರ್‌ನಲ್ಲಿ ನೀಡಲು ಉದ್ದೇಶಿಸಿದಾಗ, ಯಾರೋ ಒಬ್ಬರು ಈ ಎರಡು ಪ್ರದೇಶಗಳು ಬಹಳ ದೊಡ್ಡ ಜಿಲ್ಲೆಗಳು ಮತ್ತು ಖುರಸನ್ನ ದ್ವಾರಗಳು ಎಂದು ಹೇಳಿದರು. ಇದರ ಮೇಲೆ ಅವರು ಈ ಎರಡು ಪ್ರದೇಶಗಳನ್ನು ಜಾಗೀರ್‌ಗೆ ನೀಡುವ ಉದ್ದೇಶವನ್ನು ಮುಂದೂಡಿದರು.
(ತಾರೀಖ್ ಅತ್ತಿಬರಿ, ಸಂಪುಟ-3, ಭಾಗ-1, ಪುಟ-196-197, ದಾರುಲ್ ಇಶಾತ್ ಕರಾಚಿ 2003)

ಸಬ್‌ಹಿಸ್ತಾನ್‌ನ ವಿಜಯ: ಇದು ಕೂಡ 23 ಹಿಜರಿಯಲ್ಲಿ ನಡೆಯಿತು. ಸಬ್‌ಹಿಸ್ತಾನ್ ಖುರಾನ್‌ಗಿಂತ ದೊಡ್ಡ ಪ್ರದೇಶ ಮತ್ತು ಅದರ ಗಡಿಗಳು ದೂರದ ಪ್ರದೇಶಗಳಿಗೆ ವಿಸ್ತರಿಸಲ್ಪಟ್ಟಿವೆ. ಈ ಪ್ರದೇಶವು ಸಿಂಧೂ ಮತ್ತು ಬಾಲ್ಖ್ ನದಿಯ ನಡುವೆ ಇತ್ತು. ಇದರ ಗಡಿಗಳನ್ನು ದಾಟಲು ತುಂಬಾ ಕಷ್ಟಕರವಾಗಿತ್ತು ಮತ್ತು ಜನಸಂಖ್ಯೆಯು ತುಂಬಾ ದೊಡ್ಡದಾಗಿತ್ತು. ಈ ಸಬ್‌ಹಿಸ್ತಾನ್‌ನನ್ನು ಇರಾನಿಯನ್ ಸಿಸ್ತಾನ್ ಎಂದೂ ಕರೆಯಲಾಗುತ್ತದೆ ಅಥವಾ ಇರಾನಿನ ಜನರು ಇದನ್ನು ಸಿಸ್ತಾನ್ ಎಂದು ಕರೆಯುತ್ತಾರೆ. ಪ್ರಸಿದ್ಧ ಇರಾನಿ ಕುಸ್ತಿಪಟು ರುಸ್ತಮ್ ಈ ಪ್ರದೇಶದ ನಿವಾಸಿಯಾಗಿದ್ದನು. ಇದು ಕೆರ್ಮನ್‌ನ ಉತ್ತರದಲ್ಲಿದೆ ಮತ್ತು ಅದರ ರಾಜಧಾನಿ ಜರಂಜ್ ಆಗಿತ್ತು. ಪ್ರಾಚೀನ ಕಾಲದಲ್ಲಿ ಇದು ಬಹಳ ದೊಡ್ಡ ಪ್ರದೇಶವಾಗಿತ್ತು ಮತ್ತು ಹಝ್ರತ್ ಮುಅವಿಯಾ(ರ)ರವರ ಕಾಲದಲ್ಲಿ ಇದು ಬಹಳ ಮುಖ್ಯವಾದ ಪ್ರದೇಶವಾಗಿತ್ತು. ಕಂದಹಾರ್ ಜನರು ತುರ್ಕರು ಮತ್ತು ಇತರ ರಾಷ್ಟ್ರಗಳ ವಿರುದ್ಧ ಹೋರಾಡುತ್ತಿದ್ದರು. ಅಸಿಮ್ ಇಬ್ನ್ ಅಮರ್ ಸಬ್‌ಹಿಸ್ತಾನ್ ಕಡೆಗೆ ತಿರುಗಿದರು ಮತ್ತು ಅಬ್ದುಲ್ಲಾ ಇಬ್ನ್ ನುಮಿರ್ ಕೂಡ ಸೇನೆಯೊಂದಿಗೆ ಸೇರಿಕೊಂಡರು. ಸುಬ್‌ಹಿಸ್ತಾನ್‌ನ ನಿವಸಿಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ಅವರೊಂದಿಗೆ ಘರ್ಷಣೆ ನಡೆಯಿತು ಮತ್ತು ಮುಸ್ಲಿಮರು ಅವರನ್ನು ಸೋಲಿಸಿದಾಗ ಸುಬ್‌ಹಿಸ್ತಾನ್‌ನ ನಿವಾಸಿಗಳು ಪಲಾಯನ ಮಾಡಿದರು. ಆಗ ಮುಸ್ಲಿಮರು ಅವರನ್ನು ಹಿಂಬಾಲಿಸಿದರು ಮತ್ತು ಜರಂಜ್‌ನಲ್ಲಿ ಅವರನ್ನು ಮುತ್ತಿಗೆ ಹಾಕಿದರು ಮತ್ತು ಅದೇ ಸಮಯದಲ್ಲಿ ಮುಸ್ಲಿಮರು ಸಾಧ್ಯವಿರುವಲ್ಲೆಲ್ಲಾ ವಿವಿಧ ಪ್ರದೇಶಗಳನ್ನು ಸಹ ವಶಪಡಿಸಿಕೊಂಡರು. ಅಂತಿಮವಾಗಿ ಸಬ್‌ಹಿಸ್ತಾನ್‌ನ ನಿವಾಸಿಗಳು ಜರಂಜ್ ಮತ್ತು ಇತರ ವಶಪಡಿಸಿಕೊಂಡ ಪ್ರದೇಶಗಳೊಂದಿಗೆ ರಾಜಿ ಮಾಡಿಕೊಂಡರು ಮತ್ತು ಸಾಮಾನ್ಯ ಮುಸ್ಲಿಮರೊಂದಿಗೆ ಒಪ್ಪಂದವನ್ನು ಅಂಗೀಕರಿಸಿದರು ಮತ್ತು ಅವರ ಕಾಡುಗಳನ್ನು ಸುರಕ್ಷಿತ ಹುಲ್ಲುಗಾವಲುಗಳೆಂದು ಪರಿಗಣಿಸಲು ಅವರ ಒಪ್ಪಂದದಲ್ಲಿ ಒಪ್ಪಿಕೊಂಡರು. ಆದ್ದರಿಂದ, ಮುಸ್ಲಿಮರು ಹಾದುಹೋದಾಗ, ಅವರು ಅವರ ಕಾಡುಗಳಿಂದ ತಪ್ಪಿಸಿಕೊಂಡು ಹೋಗುತ್ತಿದ್ದರು, ಇದರಿಂದ ಅವರ ಕಾಡುಗಳುಗೆ ಯಾವುದೇ ಹಾನಿಯಾಗದಂತೆ ಹೋಗುತ್ತಿದ್ದರು ಏಕೆಂದರೆ ಅವರು ಮಡಿರುವ ಒಪ್ಪಂದ ಮುರಿಯ ಬಾರದು ಎಂದು. ಆ ಮಟ್ಟಿಗೆ ಮುಸ್ಲಿಮರು ಜಾಗರೂಕರಾಗಿದ್ದರು. ಆದಾಗ್ಯೂ, ಸಬ್‌ಹಿಸ್ತಾನದ ನಿವಾಸಿಗಳು ತೆರಿಗೆ ಸಲ್ಲಿಸಲು ಒಪ್ಪಿಕೊಂಡರು ಮತ್ತು ಮುಸ್ಲಿಮರು ಅವರನ್ನು ರಕ್ಷಿಸುವ ಜವಾಬ್ದಾರಿಯನ್ನು ಒಪ್ಪಿಕೊಂಡರು. (ತಾರೀಖ್ ಅತ್ತಿಬರಿ ಅನುವಾದ, ಸಂಪುಟ-3, ಪುಟ-197, ದಾರುಲ್ ಇಶಾತ್ ಕರಾಚಿ 2003)

ಮುಕ್ರಾನ್‌ನ ವಿಜಯ: ಇದು ಕೂಡ 23 ಹಿಜರಿಯಲ್ಲಿ ನಡೆಯಿತು. ಮುಕ್ರಾನ್ (ಈಗ ಇದನ್ನು ಮಕ್ರಾನ್ ಎಂದು ಕರೆಯಲಾಗುತ್ತದೆ. ಇದನ್ನು ಪುರಾತನ ಇತಿಹಾಸಗಳಲ್ಲಿ ಮುಕ್ರಾನ್ ಎಂದು ಬರೆಯಲಾಗಿದೆ) ಹುಕಮ್ ಬಿನ್ ಅಮ್ರೂ ವಶಪಡಿಸಿಕೊಂಡರು. ಆದರೆ ನಂತರ ಶಿಹಾಬ್ ಬಿನ್ ಮುಖಾರಿಕ್, ಸುಹೈಲ್ ಬಿನ್ ಅದ್ದಿ ಮತ್ತು ಅಬ್ದುಲ್ಲಾ ಬಿನ್ ಅಬ್ದುಲ್ಲಾ ಕೂಡ ತಮ್ಮ ಸೇನೆಯೊಂದಿಗೆ ಸೇರಿಕೊಂಡರು. ಮುಸ್ಲಿಮರು ಸಿಂಧ್ ರಾಜನ ವಿರುದ್ಧ ಒಗ್ಗೂಡಿ ಅವನನ್ನು ಸೋಲಿಸಿದರು. ಹುಕಮ್ ಇಬ್ನ್ ಅಮರ್ ಗೆಲುವಿನ ಸುವಾರ್ತೆ ಮತ್ತು ಯುದ್ಧದಲ್ಲಿ ವಿಜಯಿಸಿದ ಸಂಪತ್ತನ್ನು ಸುಹಾರ್ ಅಬ್ದಿಗೆ ಕಳುಹಿಸಿದರು ಮತ್ತು ಯುದ್ಧದ ಸಂಪತಿನಲ್ಲಿ ಪಡೆದ ಆನೆಗಳಿಗೆ ಮಾರ್ಗದರ್ಶನ ಕೋರಿದರು. ವಿಜಯದ ಶುಭ ಸುದ್ದಿ ಹಝ್ರತ್ ಉಮರ್(ರ) ಅವರಿಗೆ ತಲುಪಿದಾಗ, ಹಝ್ರತ್ ಉಮರ್(ರ) ಆತನಿಗೆ ಮಕ್ರಾನ್ ಭೂಮಿಯ ಬಗ್ಗೆ ಕೇಳಿದರು. ಅವರು ಹೇಳಿದರು: ಯಾ ಅಮೀರಲ್ ಮುಮಿನೀನ್! ಅದರ ಮೃದುವಾದ ಮೈದಾನದ ಭೂಮಿ ಪರ್ವತಗಳಂತೆ ಕಠಿಣವಾಗಿದೆ ಮತ್ತು ನೀರಿನ ತೀವ್ರ ಕೊರತೆಯಿದೆ. ಅದರ ಹಣ್ಣುಗಳು ಕೆಟ್ಟವು ಮತ್ತು ಅದರ ಶತ್ರುಗಳು ತುಂಬಾ ಧೈರ್ಯಶಾಲಿಗಳು ಮತ್ತು ಒಳ್ಳೆಯದಕ್ಕಿಂತ ಕೆಟ್ಟದ್ದೇ ಹೆಚ್ಚು. ಅಲ್ಲಿನ ಹೆಚ್ಚು ಸಂಖ್ಯೆಯು ಬಹಳ ಕಡಿಮೆ ಇದೆ ಮತ್ತು ಕಡಿಮೆ ಸಂಖ್ಯೆಯು ಕಳೆದುಹೋಗಿದೆ ಮತ್ತು ಅದರ ಹಿಂಭಾಗವು ಇನ್ನೂ ಕೆಟ್ಟದಾಗಿದೆ. ಹಝ್ರತ್ ಉಮರ್(ರ) ಅವರನ್ನು ಈ ರೀತಿ ಕೇಳಿದರು, "ನೀವು ಪ್ರಾಸವನ್ನು ಅಳೆಯುತ್ತಿದ್ದೀರಾ ಅಥವಾ ನೈಜ ಪರಿಸ್ಥಿತಿಯನ್ನು ವರದಿ ಮಾಡುತ್ತಿದ್ದೀರಾ?" ಅವರು ಹೇಳಿದರು, "ನಾನು ನಿಮಗೆ ಸತ್ಯವನ್ನು ತಿಳಿಸುತ್ತಿದ್ದೇನೆ." ಅವರು ಹೇಳಿದರು, "ನೀವು ಸರಿಯಾಗಿದ್ದರೆ, ಅಲ್ಲಾಹಆಣೆ!! ನನ್ನ ಸೈನ್ಯವು ಅಲ್ಲಿ ದಾಳಿ ಮಾಡುವುದಿಲ್ಲ." ಆದ್ದರಿಂದ ಅವರು ಈ ಆದೇಶವನ್ನು ಹುಕಮ್ ಬಿನ್ ಅಮ್ರ್ ಮತ್ತು ಹಝ್ರತ್ ಸುಹೇಲ್ ಗೆ ಬರೆದರು ಮತ್ತು ಈ ಆದೇಶವನ್ನು ಲಿಖಿತವಾಗಿ ಕಳುಹಿಸಿದರು, ನಿಮ್ಮ ಎರಡು ಸೇನೆಗಳೂ ಮಕ್ರಾನ್ ಅನ್ನು ಮೀರಿ ಮುನ್ನಡೆಯಬಾರದು ಮತ್ತು ನದಿಯ ಆಚೆಗಿನ ಪ್ರದೇಶಕ್ಕೆ ಸೀಮಿತವಾಗಿರಬಾರದು. ಅವರು ಆನೆಗಳನ್ನು ಇಸ್ಲಾಮಿಕ್ ಭೂಮಿಯಲ್ಲಿ ಮಾರಾಟ ಮಾಡಲು ಮತ್ತು ಅದರಿಂದ ಬಂದ ಹಣವನ್ನು ಮುಸ್ಲಿಂ ಸೇನೆಗಳಿಗೆ ಹಂಚಲು ಆದೇಶಿಸಿದರು. (ತಾರೀಖ್ ಅತ್ತಿಬರಿ ಅನುವಾದ, ಸಂಪುಟ-3, ಭಾಗ-1, ಪುಟ-198-199, ದರುಲ್ ಇಶಾಅತ್ ಕರಾಚಿ 2003) (ತಾರೀಖ್ ತಬರಿ, ಸಂಪುಟ-2, ಪುಟ-555, ದಾರುಲ್ ಕುತಬ್ ಇಲ್ಮಿಯ ಬೈರೂತ್ 2012)

ಹಝ್ರತ್ ಉಮರರ(ರ) ಕಾಲದ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

ಜುಮಾದ ನಂತರ ನಾನು ಒಂದು ಟರ್ಕಿಶ್ ಇಂಟರ್‌ನೆಟ್ ರೇಡಿಯೋದ ಉದ್ಘಾಟನೆ ಮಾಡುತ್ತೇನೆ. ಈ ರೇಡಿಯೋದ ಚಾನಲಿನ ಹೆಸರು ಇಸ್ಲಾಂ ಅಹ್ಮದೀ ಯತೀನ್ ಸೀಸಿ ಎಂದಾಗಿದೆ. ಎಂದರೆ ಇಸ್ಲಾಮ್ ಅಹ್ಮದಿಯ್ಯತಿನ ಶಬ್ದ. ಇದು 24 ಗಂಟೆಗಳ ಪ್ರಸಾರಕ್ಕಾಗಿ ತಯಾರಿದೆ. ಈ ರೇಡಿಯೋವನ್ನು ಲೋಕದೆಲ್ಲಡೆ ಟಾಬ್‌ಲೇಟ್, ಸ್ಮಾರ್ಟ್ ಫೋನ್, ಲಾಪ್‌ಟಾಪ್ ಇತ್ಯಾದಿಗಳ ಮೂಲಕ ಒಂದು ಲಿಂಕ್ ಮೂಲಕ ಕೇಳಬಹುದಾಗಿದೆ. ನಾಲ್ಕು ಗಂಟೆಗಳ ಒಂದು ಪಾಕೇಜ್ ಪ್ರೋಗ್ರಾಮನ್ನು ದಿನದಲ್ಲಿ 6 ಬಾರಿ ರಿಪೀಟ್ ಮಾಡಲಾಗುವುದು. ಈ ಪಾಕೇಜಿನಲ್ಲಿ ಒಂದು ಗಂಟೆ ತರ್ಜುಮೆ ಸಮೇತ ತಿಲಾವತ್, ಹದೀಸ್ ನಬಿ(ಸ), ಹಝ್ರತ್ ಮಸೀಹ್ ಮೌಊದ್‌ರ(ಅ) ಉಲ್ಲೇಖಗಳು, ತುರ್ಕಿ ಭಾಷೆಯಲ್ಲಿ ನನ್ನ ಖುತ್ಬಗಳ ತರ್ಜುಮೆ, ಪ್ರಶ್ನೋತ್ತರ ಪ್ರೋಗ್ರಾಮುಗಳು ಪ್ರಸಾರವಾಗುವುವು. ಲೋಕದ 20ಕ್ಕಿಂತ ಹೆಚ್ಚು ರಾಷ್ಟ್ರಗಳು ತರಬೇತಿ ಮತ್ತ ತಬ್ಲೀಗಿನ ಉದ್ದೇಶಕ್ಕಾಗಿ ಪ್ರಯೋಜನ ಈ ರೇಡಿಯೋದಿಂದ ಪಡೆಯುವುವು. ಉದಾಹರಣೆಗೆ ತುರ್ಕಿ ಚಾಲ್ತಿಯಲ್ಲಿರುವ ದೇಶವಾದ ಆಝರ್‌ಬಾಯಿಜಾನ್, ಜಾರ್ಜಿಯ. ಅದೇ ರೀತಿಯಲ್ಲಿ ರಶಿಯದ ಹಿಂದಿನ ರಾಜ್ಯಗಳಲ್ಲಿ ತುರ್ಕಿ ಭಾಷೆ ಮಾತನಾಡಲಾಗುತ್ತದೆ. ಅದೇ ರೀತಿಯಲಿ ತುರ್ಕಿ ಮತ್ತು ತುರ್ಕಿಗಳು ನೆಲೆಸಿರುವ ಎಲ್ಲ ಯುರೋಪಿಯನ್ ದೇಶಗಳು ಈ ಪ್ರಸಾರದಿಂದ ಪ್ರಯೋಜನ ಪಡೆಯುವುವು. ಈ ರೇಡಿಯೋದ ತಯಾರಿಯ ಸೌಭಾಗ್ಯ ಜರ್ಮನಿಯ ತಬ್ಲೀಗ್ ವಿಭಾಗಕ್ಕೆ ಲಭಿಸಿದೆ. ಅಲ್ಲಾಹನು ಅವರಿಗೆ ಪ್ರತಿಫಲವನ್ನು ನೀಡಲಿ ಮತ್ತು ಅಲ್ಲಾಹನು ಇದನ್ನು ಎಲ್ಲ ರೀತಿಯಲ್ಲೂ ಅನುಗ್ರಹಿಸಲಿ. ಇದನ್ನು ನಾನು ಜುಮಾ ನಮಾಝಿನ ನಂತರ ಲಾಂಚ್ ಮಾಡುತ್ತೇನೆ.

ಕೆಲವು ಜನಾಝುಗಳ ಗ್ಹಾಇಬ್ ನಮಾಝುನ್ನು ಖುತ್ಬದ ನಂತರ ನಿರ್ವಹಿಸುವೆನು. ಅದೇ ರೀತಿಯಲ್ಲಿ ನಮ್ಮ ಪ್ರೀತಿಯ ತಾಲಿಅ್‌ರ ಜನಾಝ ಈಗ ತಲುಪಿಲ್ಲ. ಬಹುಶಃ ಕೆಲವು ದಿನಗಳಲ್ಲಿ ಬರುವುದು. ಬಂದ ನಂತರ ಅವರ ಜನಾಝ ನಮಾಝ್ ನಿರ್ವಹಿಸಲಾಗುವೆನು ಮತ್ತು ಅವರ ಕುರಿತು ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್. ನಾನಿಂದು ನಿರ್ವಹಿಸುವ ಜನಾಝುಗಳಲ್ಲಿ ಮೊದಲನೆಯದ್ದು ಮರಾಕಿಶಿನ ಸನ್ಮಾನ್ಯ ಮುಹಮ್ಮದ್ ಅಲ್‌ಮುಖ್‌ತಾರ್ ಕಬ್‌ಕಾ ಸಾಹಿಬ್‌ರದ್ದಾಗಿದೆ. 73ನೇ ವಯಸ್ಸಿನಲ್ಲಿ ¤z ÃÄ¢Æ ÄÃ ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ದಿವಂಗತರು 2009ರಲ್ಲಿ ಬೈಅತ್ ಮಾಡಿದರು. ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ಬೈಅತ್ತಿನ ನಂತರ ಜಮಾಅತಿನ ಸೇವೆ ಮತ್ತು ಅಹ್ಮದಿಯ್ಯತಿನ ತಬ್ಲೀಗಿನಲ್ಲಿ ಸದಾ ನಿರತರಾಗುತ್ತಿದ್ದರು. ಸಮಾಜದಲ್ಲಿ ಹರಡಿರುವ ತಪ್ಪು ವಿಶ್ವಾಸಗಳನ್ನು ಸರಿಪಡಿಸಲು ಅವರು ಬಹಳವಾಗಿ ಪಾತ್ರವಹಿಸಿದರು. ಅವರು ಪಶ್ಚಿಮ ಮರಾಕಿಶಿನವರಾಗಿದ್ದರು. ಅಲ್ಲಿಯ ಸದರ್ ಸಾಹಿಬ್‌ರು ಬರೆಯುತ್ತಾರೆ: ದಿವಂಗತರು ನಿವೃತ್ತ ಸೈನಿಕರಾಗಿದ್ದರು. ವಿದ್ಯಾವಂತರಾಗಿದ್ದರು. ಅರಬಿಯಲ್ಲದೆ ಫ್ರಾನ್ಸೀಸಿ ಮತ್ತು ಸ್ಪಾನಿಶ್ ಭಾಷೆಗಳಲ್ಲಿ ಪ್ರವೀಣರಾಗಿದ್ದರು. ಹಮಾಮತುಲ್ ಬುಶ್ರಾ ಓದಿ ಬೇಗನೇ ಬೈಅತ್ ಮಾಡಿದರು. ಅನಂತರ ಹಝ್ರತ್ ಮಸೀಹ್ ಮೌಊದ್(ರ) ಪುಸ್ತಕಗಳಲ್ಲಿ ಕನಿಷ್ಠ ಎರಡು ಪುಸ್ತಕಗಳನ್ನು ಬಹಳ ಆಸಕ್ತಿ ಮತ್ತು ಪ್ರೀತಿಯಿಂದ ಓದಿದ್ದರು. ಅನಂತರ ತಫ್ಸೀರ್ ಕಬೀರ್ ಓದಿದರು. ಅನಂತರ ಅದರ ನಕಲು ಪ್ರತಿಗಳನ್ನು ತಯಾರಿಸಿ, ಬೈಂಡ್ ಮಾಡಿ ಅಹ್ಮದಿಯರಿಗೆ ವಿತರಿಸಿದರು. ಸದರ್ ಸಾಹಿಬ್ ಹೇಳುತ್ತಾರೆ: ನಮ್ಮ ಜಮಾಅತಿನಲ್ಲಿ ಜಮಾಅತ್ ವ್ಯವಸ್ಥೆ ಸ್ಥಾಪಿತವಾದಾಗ ಅವರು ಜಮಾಅತಿನ ಸೇವೆಗಾಗಿ ಜೀವಿತವನ್ನು ವಖ್‌ಫ್ ಮಾಡಿದರು. ಅನೇಕ ಜಮಾಅತುಗಳಿಗೆ ಹೋದರು. ಧನತ್ಯಾಗದಲ್ಲೂ ಮುಂದಿದ್ದರು. ಇಂದು ನಾನು ಬ್ಯೂಸಿಯಾಗಿದ್ದೇನೆ ಅಥವಾ ಈ ಸೇವೆ ನನಗೆ ಮಾಡಲು ಸಾಧ್ಯವಿಲ್ಲವೆಂದು ಎಂದಿಗೂ ಹೇಳಿರಲಿಲ್ಲ. ಯುವಕರಲ್ಲೂ ಕಾಣಲು ಸಾಧ್ಯವಿಲ್ಲದಂತಹ ದೃಢನಿರ್ಧಾರದವರಾಗಿದ್ದರು.

ಖಿಲಾಫತಿನ ವ್ಯವಸ್ಥೆಯನ್ನು ಪರಿಪೂರ್ಣವಾಗಿ ಮತ್ತು ಬೇಗನೇ ಅನುಸರಿಸುತ್ತಿದ್ದರು. ತಬ್ಲೀಗ್ ಮಾಡುವ ಬಹಳ ಆವೇಶವಿತ್ತು. ಬಸ್, ರೈಲುಗಾಡಿ, ಅಂಗಡಿಗಳಲ್ಲಿ ಎಲ್ಲ ಕಿರಿಯ ಹಿರಿಯರಿಗೆ ತಬ್ಲೀಗ್ ಮಾಡುತ್ತಿದ್ದರು. ಕುಟುಂಬದಲ್ಲಿ ಪ್ರತಿಯೊಬ್ಬರಿಗೂ ಸತ್ಯಸಂದೇಶವನ್ನು ತಲುಪಿಸಿದರು. ದಿವಂಗತರು ತಹಜ್ಜುದ್ ನಮಾಝನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಪ್ರತಿ ಸೋಮವಾರ ಮತ್ತು ಗುರುವಾರದಂದು ಉಪವಾಸವಿರಿಸುತ್ತಿದ್ದರು. ನನ್ನ ಕಡೆಯಿಂದ ಜೂಬಿಲಿಯ ವೇಳೆ ಹೇಳಲಾಗಿದ್ದ ದುಆಗಳನ್ನು ಸದಾ ಓದುತ್ತಿದ್ದರು. ದಿನಾಲೂ ಐದರಿಂದ ಐದು ಭಾಗಗಳಷ್ಟು ಪವಿತ್ರ ಖುರ್‌ಆನ್ ತಿಲಾವತ್ ಮಾಡುತ್ತಿದ್ದರು. ನಡೆಯುತ್ತಾ ಪವಿತ್ರ ಖುರ್‌ಆನಿನ ವಚನಗಳನ್ನು ಕಂಠಪಾಠ ಮಾಡುತ್ತಿದ್ದರು. ಪದೇ ಪದೇ ಓದುತ್ತಿದ್ದರು. ಕೆಲವೊಮ್ಮೆ ರಸ್ತೆಯಲ್ಲಿ ಪವಿತ್ರ ಖುರ್‌ಆನಿನ ಪಾರಾಯಣದಲ್ಲಿ ಎಷ್ಟು ಮಗ್ನರಾಗುತ್ತಿದ್ದರೂ ಎಂದರೆ, ಸುತ್ತಮುತ್ತಲಿನ ಕುರಿತು ಅಶ್ರದ್ಧೆಯಲ್ಲಿರುತ್ತಿದ್ದರು. ಪವಿತ್ರ ಖುರ್‌ಆನಿನೊಂದಿಗೆ ಅವರಿಗೆ ಪ್ರೇಮವಿತ್ತು ಎಂದು ಅವರ ಕುರಿತು ಹೇಳಬಹುದು. ರಾತ್ರಿ ಸಮಯದಲ್ಲಿ ನಿದ್ದೆಯಲ್ಲೂ ಅವರ ಬಾಯಿಯಿಂದ ಪವಿತ್ರ ಖುರ್‌ಆನಿನ ಆಯತ್ತುಗಳು ಓದುವ ಸ್ವರ ಬರುತ್ತಿತ್ತು ಎಂದು ಕೆಲವರು ಅವರ ಕುರಿತು ಹೇಳಿದ್ದಾರೆ. ದಿವಂಗತರು 9 ವರ್ಷಗಳ ಕಾಲ ಪಶ್ಚಿಮ ಮರಾಕಿಶ್ ಜಮಾಅತಿನಲ್ಲ ನಾಇಬ್ ಸದರ್ ಆಗಿ, ಅನ್ಸಾರುಲ್ಲಾಹ್ ಸದರ್ ಆಗಿ ಮತ್ತು ಸೆಕ್ರಟರಿ ಮಾಲ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ದಿವಂಗತರು ಮೂಸಿಯಾಗಿದ್ದರು. ಅವರ ಪತ್ನಿ ಸಹ ಬಹಳ ನಿಷ್ಠಾವಂತ ಮತ್ತು ಮೂಸಿಯಾಗಿರುವರು.

ಮುಂದಿನ ಜನಾಝ ಖಾದಿಯಾನಿನ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕಿನ ಮಾಜಿ ಖಾದಿಮ್ ಮಸ್ಜಿದ್ ಆಗಿದ್ದ ಸನ್ಮಾನ್ಯ ಮಹ್ಮೂದ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಅವರು 74ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಕರ್ನಾಟಕದ ಬೆಳಗಾಮಿನಿಂದ ವಲಸೆಮಾಡಿ ಖಾದಿಯಾನಿಗೆ ಬಂದ ಸನ್ಮಾನ್ಯ ಮಖ್‌ದೂಮ್ ಹುಸೈನ್ ಸಾಹಿಬ್‌ರ ಮಗನಾಗಿದ್ದರು. 28 ವರ್ಷಗಳ ಕಾಲ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕಿನಲ್ಲಿ ಮಸ್ಜಿದ್ ಖಾದಿಮ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ದಿವಂಗತರು ಮೂಸಿಯಾಗಿದ್ದರು. ಅವರು ಉಪವಾಸ ಮತ್ತು ನಮಾಝನ್ನು ಪಾಲಿಸುವವರಾಗಿದ್ದರು. ತಹಜ್ಜುದ್ ನಿರ್ವಹಿಸುವ ಮತ್ತು ದುಆ ಮಾಡುವ ವ್ಯಕ್ತಿಯಾಗಿದ್ದರು. ಮಸೀದಿಯೊಂದಿಗೆ ಅವರಿಗೆ ವಿಶೇಷವಾದ ಬಾಂಧವ್ಯವಿತ್ತು. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯರನ್ನು ಅಗಲಿರುವರು.

ಮುಂದಿನ ಜನಾಝ ಕೇರಳದ ಅಬ್ದುರ್ರಹ್ಮಾನ್ ಸಾಹಿಬ್‌ರ ಪತ್ನಿಯಾದ ಸೌದ ಸಾಹಿಬರದ್ದಾಗಿದೆ. ಅವರು ಕಬಾಬೀರಿನ ಮುಬಲ್ಲಿಗ್ ಇಂಚಾರ್ಜ್ ಆದ ಶಮ್ಸುದ್ದೀನ್ ಮಾಲಬಾರಿ ಸಾಹಿಬ್‌ರ ತಾಯಿಯಾಗಿದ್ದರು. ಅವರು ಜೂಲಾಯಿ 22ರಂದು 76ನೇ ವಯಸ್ಸಿನಲ್ಲಿ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಶಮ್ಸುದ್ದೀನ್ ಸಾಹಿಬ್ ಹೇಳುತ್ತಾರೆ: ನನ್ನ ತಾಯಿ ಪಾಲಕ್ಕಾಡ್ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೊದಲ ಅಹ್ಮದಿಯಾಗಿದ್ದ ದಿವಂಗತ ವಿ.ಟಿ. ಮುಹಮ್ಮದ್ ಸಾಹಿಬ್‌ರ ಮಗಳಾಗಿದ್ದರು. ಅವರು 1937ರಲ್ಲಿ ಬೈಅತಿನ ಸೌಭಾಗ್ಯ ಪಡೆದಿದ್ದರು. ಅನಂತರ ದೀರ್ಘ ಕಾಲದ ವರೆಗೆ ಎದುರಾಳಿಗಳ ಕಡೆಯಿಂದ ತೀವ್ರತರದ ದೌರ್ಜನ್ಯಗಳನ್ನು ಎದುರಿಸುತ್ತಿದ್ದರು. ಮೌಲವಿ ಶಮ್ಸುದ್ದೀನ್ ಸಾಹಿಬ್ ಹೇಳುತ್ತಾರೆ: ಇದೇ ಬಹಿಷ್ಕಾರದ ನಡುವೆ ನನ್ನ ಅಜ್ಜಿ ಮತ್ತು ಅವರ ಹಿರಿಯ ಮಗಳು ನಿಧನರಾದರು. ಆ ವೇಳೆ ನನ್ನ ತಾಯಿಗೆ ಒಂದುವರೆ ವರ್ಷ ಪ್ರಾಯವಾಗಿತ್ತು. ನಿಧನದ ನಂತರ ಎದುರಾಳಿಗಳು ಅಜ್ಜಿಯನ್ನು ದಫನ್ ಮಾಡಲು ಸಹ ಬಿಡಲಿಲ್ಲ. ಆದ್ದರಿಂದ ನಲ್ವತ್ತು ಕಿಲೋಮೀಟರ್ ದೂರದ ಪಟ್ಟಣದ ಒಂದು ಸಾಮಾನ್ಯ ಖಬರಿಸ್ತಾನಿನಲ್ಲಿ ದಫನ್ ಮಾಡಬೇಕಾಯಿತು. ನನ್ನ ಅಜ್ಜ ತನ್ನ ಕಿರಿವಯಸ್ಸಿನ ಮಗಳೊಂದಿಗೆ ಹಿಜ್ರತ್ ಮಾಡಿದರು. ಹೀಗೆ ನನ್ನ ತಾಯಿ ಸಣ್ಣ ವಯಸ್ಸಿನಿಂದಲೇ ಅನೇಕ ತರದ ಪರೀಕ್ಷಣೆಗಳಿಂದ ಸಾಗುತ್ತಿದ್ದರು. ದಿವಂಗತ ತಾಯಿ ಉಪವಾಸ ಮತ್ತು ನಮಾಝನ್ನು ಪಾಲಿಸುವವರಾಗಿದ್ದರು ಹಾಗೂ ಮೂಸಿಯಾಗಿದ್ದರು. ಸೃಷ್ಟಿಗಳೊಂದಿಗೆ ಸಹಾನುಭೂತಿ ಅವರೊಳಗೆ ತುಂಬಿತ್ತು. ಕಷ್ಟತೆಗೆ ಒಳಗಾದ ಪ್ರತಿಯೊಬ್ಬ ವ್ಯಕ್ತಿಗಾಗಿ ದುಆ ಮಾಡುವುದು ಮತ್ತು ಅವರು ಮುಂದಿದ್ದರೆ ಅವರಿಗೆ ಸಹಾಯ ಮಾಡುವುದು ಅವರ ಅಭ್ಯಾಸವಾಗಿತ್ತು. ದಿವಂಗತರು ಪತಿಯನ್ನಲ್ಲದೆ ನಾಲ್ವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಮೊಮ್ಮಗ ಸಹ ವಖ್ಫೇ ಝಿಂದಗಿ ಆಗಿರುವರು ಮತ್ತು ಮಗನು ಮುಬಲ್ಲಿಗ್ ಆಗಿರುವರು. ಅವರಿಗೆ ಹೊರಗಿರುವ ಕಾರಣ ಜನಾಝಗಾಗಿ ಹಾಜರಾಗಲು ಸಾಧ್ಯವಾಗಿರಲಿಲ್ಲ. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಫೈಸಲಾಬಾದಿನ ಶೇಖ್ ಅಬ್ದುಲ್‌ಮಜೀದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಯ್ಯದ ಮಜೀದ್ ಸಾಹಿಬರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರ ಮಗನಾದ ಶೇಖ ಸಾಹಿಬ್ ಹೇಳುತ್ತಾರೆ: ಅವರ ತಾತರಾದ ಹಝ್ರತ್ ಬರ್ಕತ್ ಅಲಿ ಖಾದಿಯಾನಿ ಸಾಹಿಬ್‌ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರ ಅಜ್ಜ ಮತ್ತು ಅಜ್ಜಿ ಇಬ್ಬರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ಸಯ್ಯದ ಮಜೀದ್ ಸಾಹಿಬರಿಗೆ ದೀರ್ಘ ಕಾಲ ಜಮಾಅತಿನ ಸೇವೆ ಮಾಡುವ ಸೌಭಾಗ್ಯ ಲಭಿಸಿತ್ತು. ಆರಂಭದಲ್ಲಿ ಹಲ್ಕ ಸದರ್ ಮತ್ತು ಸೆಕ್ರಟರಿ ಮಾಲಿನ ನೆಲೆಯಲ್ಲಿ, ಅನಂತರ ಫೈಸಲಾಬಾದಿನ ಲಜ್ನ ಇಮಾಇಲ್ಲಾಹ್ ರೂಪುಗೊಂಡ ನಂತರ 1982ರಿಂದ ಸೆಕ್ರಟರಿ ಮಾಲಿನ ಹುದ್ದೆಯಲ್ಲಿ 7 ವರ್ಷಗಳು ಇದ್ದರು. ಬಹಳ ಪರಿಶ್ರಮದಿಂದ 82 ಮಜ್ಲಿಸ್‌ಗಳಲ್ಲಿ ಸುತ್ತಿ ಪ್ರತಿಯೊಂದು ಮಜ್ಲಿಸ್‌ನಲ್ಲಿ ಹುದ್ದೇದಾರರ ಕೆಲಸಗಳ ಮೇಲ್ನೋಟ ವಹಿಸುತ್ತಿದ್ದರು. ಮಾಲ್ ವಿಭಾಗದ ರಿಕಾರ್ಡ್ ಮತ್ತು ಚಂದಾಗಳ ಆಮದು ಮತ್ತು ಕಳುಹಿಸುವಿಕೆಯ ಬಗ್ಗೆ ವಿಶೇಷ ಶ್ರದ್ಧೆವಹಿಸುತ್ತಿದ್ದರು. ಅವರ ಮಾಜಿ ಜಿಲ್ಲಾ ಸದರ್ ಆಗಿದ್ದ ಬುಶ್ರಾ ಸಮೀ ಸಾಹಿಬ ಹೇಳುತ್ತಾರೆ: ಒಂದು ಬಾರಿ ಜಮಾಅತಿನ ಪರ್ಯಟನೆ ಮಾಡಿದ ನಂತರ ಮರಳಿ ಬರುವಾಗ ದರೋಡೆಗೋರರು ವಾಹನವನ್ನು ತಡೆದರು. ಚಂದಾದ ಹಣ ಬಾಕಿ ಉಳಿಯುವಂತಾಗಲು ಸಯ್ಯಿದ ಸಾಹಿಬ ಬೇಗನೇ ಚಂದಾದ ಹಣವಿದ್ದ ಪರ್ಸನ್ನು ಕಾಲಿನ ಬಳಿ ಬೀಳಿಸಿದರು. ಅವರ ಆಭರಣ ದೋಚಿ ಹೋಗುವುದರ ಬಗ್ಗೆ ಪರಿವೆ ಮಾಡಲಿಲ್ಲ. ಅವರ ಆಭರಣಗಳನ್ನು ದರೋಡೆಗೋರರು ದೋಚಿಕೊಂಡು ಹೋದರು. ಆದರೆ ಚಂದಾದ ಹಣ ಬಾಕಿಯುಳಿಯಿತು. ಚಂದಾದ ಹಣ ಬಾಕಿಯುಳಿದ ಬಗ್ಗೆ ಅವರು ಬಹಳ ಸಂತೋಷಗೊಂಡಿದ್ದರು. ನಿಧನಕ್ಕೆ ಸ್ವಲ್ಪ ತಿಂಗಳುಗಳಿಗೆ ಮುಂಚೆ ಅವರ ಬಳಿಯಿದ್ದ ಆಭರಣಗಳನ್ನೆಲ್ಲ ಜಮಾಅತಿಗೆ ಯೋಜನೆಗಳಿಗಾಗಿ ಕೊಟ್ಟರು. ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಹಲವು ಬಾರಿ ಓದಿದ್ದರು ಅನೇಕ ಗುಣಗಳನ್ನು ಹೊಂದಿದ್ದರು. ಅಲ್ಲಾಹನ ಪ್ರೇಮದಲ್ಲಿ ಮುಂದಿದ್ದರು. ದುಆ ಮಾಡುವ ಮತ್ತು ಅಲ್ಲಾಹನ ಮೇಲೆ ಭರವಸೆ ಹೊಂದಿದ್ದ ಮಹಿಳೆಯಾಗಿದ್ದರು. ಖಿಲಾಫತಿನೊಂದಿಗೆ ಬಹಳ ಪ್ರೀತಿ ಮತ್ತು ಪ್ರೇಮದ ಸಂಬಂಧವನ್ನು ಹೊಂದಿದ್ದರು. ತನ್ನ ಪುತ್ರಿ, ಸೊಸೆಯಂದಿರು ಮತ್ತು ಮೊಮ್ಮಗರೊಡನೆ ಸದಾ ಖಿಲಾಫತಿನೊಂದಿಗೆ ಹೊಂದಿಕೊಂಡಿರಲು, ಖಲೀಫತುಲ್ ಮಸೀಹರಿಗಾಗಿ ದುಆ ಮಾಡಲು ಹಾಗೂ ಖುತ್ಬಗಳನ್ನು ಕೇಳಲು ಉಪದೇಶಿಸುತ್ತಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಪತಿಯನ್ನಲ್ಲದೆ 8 ಪುತ್ರರನ್ನು ಮತ್ತು ಅನೇಕ ಮೊಮ್ಮಕ್ಕಳನ್ನು ಹಾಗು ಮೊಮ್ಮಕ್ಕಳ ಮಕ್ಕಳನ್ನು ಅಗಲಿರುವರು.

ಅಲ್ಲಾಹನು ಈ ಎಲ್ಲ ದಿವಂಗತರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ. ನಾನು ಹೇಳಿದಂತೆ ಜುಮಾ ನಮಾಝಿನ ನಂತರ ಅವರ ಜನಾಝ ನಮಾಝ್ ನಿರ್ವಹಿಸುವೆನು.

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಮಾಝುಗಳಲ್ಲಿ ಪಠಿಸುವುದು ಕಡ್ಡಾಯಗೊಳಿಸಲಾಯಿತು.

ನಾಲ್ಕನೆಯದಾಗಿ ಜನರ ಹೃದಯಗಳಲ್ಲಿ ಅದರ ಪಠಣದ ಅಸಾಮಾನ್ಯ ಪ್ರೀತಿ ಹಾಕಲಾಯಿತು.

ಕ್ರೈಸ್ತ ಜನರು ಸದಾಕಾಲಕ್ಕೂ ಆಕ್ಷೇಪ ಮಾಡುತ್ತಿರುತ್ತಾರೆ. ಪವಿತ್ರ ಖುರ್‌ಆನ್ ಅರ್ಥ ತಿಳಿಯದಿದ್ದರೂ ಪಠಿಸಿಕೊಂಡಿರುತ್ತಾರೆ ಎಂದು. ಅದರ ಅರ್ಥ ತಿಳಿಯಲು ಪ್ರಯತ್ನಿಸುವುದಿಲ್ಲ. ಆದರೆ ಯೋಚಿಸಿ ನೋಡಿದರೆ ಇದು ಸಹ ಈ ವಚನದಲ್ಲಿ ನೀಡಲಾದ ವಾಗ್ದಾನಕ್ಕೆ ಸಾಕ್ಷಿಯಾಗಿದೆ. ಮುಸಲ್ಮಾನರ ಹೃದಯಗಳಲ್ಲಿ ಅಲ್ಲಾಹನು ಎಷ್ಟೊಂದು ರೀತಿಯ ಪ್ರೀತಿ ಪವಿತ್ರ ಖುರ್‌ಆನ್‌ನ ಬಗ್ಗೆ ಸೃಷ್ಟಿಸಿದ್ದಾನೆಂದರೆ ಅರ್ಥ ತಿಳಿಯಲಿ, ತಿಳಿಯದಿರಲಿ ಪಠಿಸಿಕೊಂಡಿರುತ್ತಾರೆ. ನಿಶ್ಚಿತವಾಗಿಯೂ ಪವಿತ್ರ ಖುರ್‌ಆನ್ನು ಅರ್ಥಸಹಿತ ಓದುವುದು ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವಾಗಿದೆ. ಇತ್ತ ಕಡೆ ಗಮನಹರಿಸದ ಕಾರಣ ತುಂಬಾ ಅನಾಹುತಕ್ಕೆ ಕಾರಣವಾಗಿದೆ. ಆದರೆ ಅರ್ಥ ತಿಳಿಯದಿದ್ದರೂ ಮುಸಲ್ಮಾನರ ಪವಿತ್ರ ಖುರ್‌ಆನ್‌ನ ಓದುವಿಕೆ ನಿಶ್ಚಿತವಾಗಿಯೂ ಈ ವಚನದಲ್ಲಿ ನೀಡಲಾದ ವಾಗ್ದಾನ ಪೂರ್ತಿಕರಣಕ್ಕೆ ಸಾಕ್ಷಿಯಾಗಿದೆ.

ಇಂದು ಬೈಬಲಿನ ಎಲ್ಲಾ ಪ್ರತಿಗಳು ಸುಟ್ಟುಹಾಕಿದರೆ ಬೈಬಲ್ ಅನುಯಾಯಿಗಳಿಂದ ಅದರ ಶೇಖಡ 20 ಭಾಗವನ್ನು ಪುನಃ ಕ್ರೋಢಿಕರಿಸಲು ಸಾಧ್ಯವಿಲ್ಲ. ಆದೆ ಪವಿತ್ರ ಖುರ್‌ಆನ್‌ಗೆ ಆಗೌರವ ದಕ್ಕುತ್ತದೆ. ಅದರ ಎಲ್ಲಾ ಪ್ರತಿಗಳನ್ನು ಲೋಕದಿಂದ ಮಾಯಾವಾಗಿಸಿದರೂ, ಆಗಲೂ ಸಹ ಎರಡು ಮೂರು ದಿನಗಳ ಒಳಗೆ ಪರಿಪೂರ್ಣ ಖುರ್‌ಆನ್ ಮರು ಸೃಷ್ಟಿಸಬಹುದಾಗಿದೆ. ದೊಡ್ಡ ನಗರಗಳು ಒಂದೆಡೆ ಇರಲಿ. ನಮ್ಮ ಖಾದಿಯಾನಿನಂತಹ ಸಣ್ಣ ಪುಟ್ಟ ಹಳ್ಳಿಯಲ್ಲೂ ಅಕ್ಷರಶಃ ಬರೆಯಬಹುದಾಗಿದೆ.

ಲೋಕದ ಯಾವುದೇ ಭಾಗದಲ್ಲಿ ಈ ಧರ್ಮಗ್ರಂಥವನ್ನು ಅಳಿಸಿ ಹಾಕಿದಾಗಲೂ ಮರುಸುರಕ್ಷಿತವಾಗಿಸಬಹುದು. ಖುರ್‌ಆನ್‌ನ ಹೊರತು ಅಲ್ಲಾಹನು ಅದರ ಸುರಕ್ಷತೆಗಾಗಿ ಒಂದು ಮಾಧ್ಯಮ ಹೀಗೆ ಸೃಷ್ಟಿಸಿಕೊಟ್ಟ. ಅದರ ಅವತರಣಿಕೆಯ ಹಿಂದೆಯೇ ಅದು ಇಡೀ ಲೋಕದಲ್ಲಿ ಪಸರಿಸಿಯಾಯಿತು. ಇದೀಗ ಅದರಲ್ಲಿ ಯಾವ ಬದಲಾವಣೆಗೆ ಆಸ್ಪದವಿಲ್ಲ. ಹೇಳಲಾಗುತ್ತದೆ. ಒಂದು ಸಂದರ್ಭದಲ್ಲಿ ರಷ್ಯಾ ಸರಕಾರ ಜಿಹಾದ್ ಕುರಿತು

ಇರುವ ವಚನಗಳನ್ನು ತೆಗೆದು ಹಾಕಿ ಮರು ಮುದ್ರಣ ಮಾಡಲು ಹೊರಟಿತು. ಆದರೆ ಅವರಿಗೆ ತಿಳಿಸಲಾಯಿತು ಪವಿತ್ರ ಖುರ್‌ಆನ್ ಲೋಕದಾದ್ಯಂತ ಪಸರಿಸಲಾಗಿದೆ. ಈ ವಚನಗಳು ಎಲ್ಲಾ ಕಡೆ ಉಪಸ್ಥಿತ ಇವೆ. ಅದನ್ನು ಹೇಗೆ ನೀವು ತೆಗೆಯುವಿರಿ. ಆಗ ಅವರು ತಮ್ಮ ನಿಲುವನ್ನು ಬಿಟ್ಟುಬಿಟ್ಟರು.

ಪವಿತ್ರ ಖುರ್‌ಆನ್‌ನ ಸುರಕ್ಷತೆಗಿರುವ ಇನ್ನೊಂದು ಮಾಧ್ಯಮವೆಂದರೆ ಇಸ್ಲಾಮಿ ಶಿಕ್ಷಣದ ಬುನಾದಿ ಪವಿತ್ರ ಖುರ್‌ಆನ್ ಆಗಿದೆ. ಆ ಕಾರಣದಿಂದ ಅದರ ಎಲ್ಲಾ ಪದಗಳು ವಾಕ್ಯಗಳು ಸುರಕ್ಷಿತವಾಗಿವೆ. ಉದಾಹರಣೆಗೆ ವ್ಯಾಕರಣ (ನಹು) ಅದು ಪವಿತ್ರ ಖುರ್‌ಆನ್‌ನ ಸೇವೆಗಾಗಿ ಇದೆ. ಅಂದ ಹಾಗೆ ಈ ವ್ಯಾಕರಣ ಹುಟ್ಟಲು ಕಾರಣ ವೇನೆಂದರೆ, ಅಬ್ದುಲ್ ಅಸ್ವದ್ ವಲಿ ಹಝ್ರತ್ ಅಲಿ(ರ) ರವರ ಬಳಿಗೆ ಬಂದ ಓರ್ವ ನವೀನ ಮುಸಲ್ಮಾನ **"ಅನ್ನಲ್ಲಾಹ ಬರಿಉಮ್ ಮಿನಲ್ ಮುಶ್ರಿಕೀನ ವ ರಸೂಲುಹು"** ಬದಲಿಗೆ **"ವ ರಸೂಲಿಹಿ"** ಎಂದು ಓದುತ್ತಿದ್ದ. ಅದರಿಂದ ನವ ಮುಸ್ಲಿಮರಿಗೆ ಪವಿತ್ರ ಖುರ್‌ಆನ್‌ನ ಅರ್ಥ ತಿಳಿಯಲು ಕಷ್ಟ ವಾಗುತ್ತಿದೆ ಎಂದು ತಿಳಿದ ಹಝ್ರತ್ ಅಲಿ(ರ), ಕುದುರೆ ಸವಾರರಾಗಿ ಹೋಗುತ್ತಿದ್ದ ಅದೇ ಸ್ಥಿತಿಯಲ್ಲಿ ಅವರು, ಅವರಿಗೆ ವ್ಯಾಕರಣದ ಕೆಲ ನಿಯಮಗಳನ್ನು ಹೇಳಿಕೊಟ್ಟರು ಮತ್ತು ಹೇಳಿದರು. ಈ ವ್ಯಾಕರಣವನ್ನು ಗಮನಿಸಿ, ಅದರಿಂದ ನವ ಮುಸಲ್ಮಾನರಿಗೆ ಸರಿಯಾದ ರೀತಿಯಲ್ಲಿ ಖುರ್‌ಆನ್ ಪಠಿಸಲು ಭಾಗ್ಯ ದೊರೆತಂತಾಗುವುದು, ಕೆಲವು ವ್ಯಾಕರಣ ಸೃಷ್ಟಿಸಿ ಹೇಳಿದರು. **'ಉನ್‌ಹು ನಹ್ವಹು"** ಅದೇ ಮಾದರಿಯಲ್ಲಿ ಇನ್ನಷ್ಟು ವ್ಯಾಕರಣ ಸೃಷ್ಟಿಸಿಕೊಳ್ಳಿ. ಈ ಪದ ಕಾರಣದಿಂದಾಗಿ ಅರಬಿ ವ್ಯಾಕರಣದ ಹೆಸರು (ವ) ನಹು ಎಂದಾಯಿತು. ಮುಸಲ್ಮಾನರು ಮತ್ತೆ ಪವಿತ್ರ ಖುರ್‌ಆನ್‌ನ ಸೇವೆಗೋಸ್ಕರ ಇತಿಹಾಸ ರಚಿಸಿದರು. ಏಕೆಂದರೆ ಪವಿತ್ರ ಖುರ್‌ಆನ್‌ನಲ್ಲಿ ವಿಭಿನ್ನ ಸಮುದಾಯಗಳ ಅಹವಾಲುಗಳು ಬಂದಿದ್ದವು. ಅದನ್ನು ಸಂಗ್ರಹಿಸಿಕೊಳ್ಳುವಾಗ ಬಾಕಿ ಲೋಕಗಳ ಪರಿಸ್ಥಿತಿಗಳನ್ನು ಸಹ ಸಂಗ್ರಹಿಸಿದರು. ಮತ್ತೆ ಹದೀಸು ಶಿಕ್ಷಣ ಪ್ರಾರಂಭವಾಯಿತು. ಅದು ಸಹ ಪವಿತ್ರ ಖುರ್‌ಆನ್‌ನ ಸೇವಾದೃಷ್ಟಿಯಿಂದ, ಅದರಿಂದಲೂ ಹಝ್ರತ್ ರಸೂಲುಲ್ಲಾಹ್(ಸ) ಪವಿತ್ರ ಖುರ್‌ಆನ್‌ನ್ನು ಹೇಗೆ ವ್ಯಾಖ್ಯಾನಿಸಿದರು ಎಂಬುದನ್ನು ತಿಳಿಯಬಹುದಾಗಿದೆ.

ಮತ್ತೆ ತತ್ವಜ್ಞಾನಿಗಳು ಪವಿತ್ರ ಖುರ್‌ಆನ್‌ನ ಮೇಲೆ ಮಾಡುವ ಆಕ್ಷೇಪಗಳ ರಕ್ಷಣೆಯ ದೃಷ್ಟಿಯಿಂದ ಮುಸಲ್ಮಾನರು ತತ್ವಜ್ಞಾನ ಮುಂತಾದ ವಿದ್ಯೆಗಳನ್ನು ಕಲಿತರು. "ಇಲ್ಮ್ ಮನ್ತಖ್" (ತರ್ಕಶಾಸ್ತ್ರಕ್ಕಾಗಿ) ಹೊಸ ಮಾರ್ಗಗಳನ್ನು ಶೋಧಿಸಿಕೊಟ್ಟರು. ವೈದ್ಯಕೀಯ ಬುನಾದಿಯು ಪವಿತ್ರ ಖುರ್‌ಆನ್‌ನ ಇಂಗಿತದಿಂದ ಸ್ಥಾಪಿಸಲಾಯಿತು. ವ್ಯಾಕರಣಕ್ಕಾಗಿ ಪವಿತ್ರ ಖುರ್‌ಆನ್‌ನ ವಚನಗಳನ್ನು ಉದಾಹರಿಸಲಾಗುತಿತ್ತು. ಸಾಹಿತ್ಯದಲ್ಲಿ ಅತ್ಯುತ್ತಮ ಸಂಗ್ರಹವೆಂದರೆ ಪವಿತ್ರ ಖುರ್‌ಆನ್‌ನ ವಚನಗಳಾಗಿವೆ. ಅಂತೂ ಯಾವುದೇ ವಿದ್ಯೆಗೋಸ್ಕರವಾಗಲಿ ಪವಿತ್ರ ಖುರ್‌ಆನ್‌ನ ವಚನಗಳನ್ನು ಉದಾಹರಣೆಯಾಗಿ ಬಳಸಿಕೊಳ್ಳುತ್ತಿದ್ದರು. ನಾನು ಭಾವಿಸುತ್ತೇನೆ. ಆ ಎಲ್ಲಾ ಗ್ರಂಥಗಳನ್ನು ಸಂಗ್ರಹಿಸಿಕೊಂಡರೆ ಅವುಗಳಿಂದಲೂ ಇಡೀ ಖುರ್‌ಆನ್ ಸಂಗ್ರಹಿಸಬಹುದು. ಮುಸಲ್ಮಾನರು ಪವಿತ್ರ ಖುರ್‌ಆನ್‌ನ ಸೇವೆಗೋಸ್ಕರ ಇತರ ವಿದ್ಯೆ ಕಡೆ ರುಜುವಾದರೂ ಅದರ ಒಂದು ಅಂಶಿಕ ಪ್ರಯೋಜನವೇನಾಯಿತೆಂದರೆ, ಲೌಕಿಕ ವಿದ್ವಾಂಸರು ಪುರಾತನ ಗ್ರಂಥಗಳಿಂದ ಬೇಜಾರಾಗಿದ್ದರು. ಆದರೆ ಮುಸಲ್ಮಾನರು ಆ ವಿದ್ಯೆಗಳ ತಜ್ಞರಾದರು, ಸದಾಕಾಲಕ್ಕೆ ಪವಿತ್ರ ಖುರ್‌ಆನ್‌ನ ಸೇವಕರಾಗಿದ್ದರು. ಏಕೆಂದರೆ ಅವರ ಭಾವನೆ ಏನಾಗಿತ್ತೆಂದರೆ ಪವಿತ್ರ ಖುರ್‌ಆನ್ ನೈಜ ಶಿಕ್ಷಣಗಳ ವಿರುದ್ಧವಿಲ್ಲ. ಬದಲು ಅದಕ್ಕೆ ಸಹಾಯಕವಾಗಿದೆ ಎಂದು.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–18, ಮುದ್ರಣ ಖಾದಿಯಾನ್ 2010)**

***(ಪುಟ ಸಂಖ್ಯೆ 15ರ ಉಳಿದ ಭಾಗ)***

ತೃಪ್ತರಾಗುವ ಗುಣವಿತ್ತು. ಅನೇಕ ಬಾರಿ ಅವರ ಮೇಲೆ ಉಂಟಾದ ಅಲ್ಲಾಹನ ಅನುಗ್ರಹಗಳ ಬಗ್ಗೆ ಎಣಿಸಿ ಹೇಳುತ್ತಿದ್ದನು. ಅವರಲ್ಲಿ ಎಂದಿಗೂ ಭೌತಿಕತೆಯ ಯಾವುದೇ ರೀತಿಯ ಲಾಲಸೆಯನ್ನು ನೋಡಿಲ್ಲ. ಅವರ ಮುಂದೆ ಲೌಕಿಕತೆಯ ಬಗ್ಗೆ ಏನಾದರೂ ಮಾತು ನಡೆದರೆ ವಿಶೇಷವಾದ ಒಂದು ಶೈಲಿಯಲ್ಲಿ ಮುಗುಳ್ನಗುತ್ತಿದ್ದನು ಮತ್ತು ಈ ಎಲ್ಲ ಸಂಗತಿಗಳೊಡನೆ ಯಾವುದೇ ಪರಿವೆ ಇಲ್ಲದಂತೆ ಅಲ್ಲಾಹನು ಅವರನ್ನು ಮಾಡಿರುವನು ಎಂಬುದಕ್ಕೆ ಕೃತಜ್ಞತೆ ಅರ್ಪಿಸುತ್ತಿದ್ದನು. ಅವರ ಎಲ್ಲ ಆವಶ್ಯಕತೆಗಳನ್ನು ಅಲ್ಲಾಹನು ಸ್ವತಃ ಈಡೇರಿಸಿದನು. ಯಥಾರ್ಥ ವಖ್ಫೇ ಝಿಂದಗಿಯಾಗಿದ್ದರು.

ಅವರ ಒಬ್ಬ ಸ್ನೇಹಿತ ಮತ್ತು ಮುರಬ್ಬಿಯಾದ ನೌಶೀರ್‌ವಾನ್ ರಶೀದ್ ಸಾಹಿಬ್‌ರು ಹೇಳುತ್ತಾರೆ: ಕಳೆದ ಮೂರು ವರ್ಷಗಳಿಂದ ತಾಲಿಅ್‌ರೊಡನೆ ಎಂ.ಟಿ.ಎ. ನ್ಯೂಸ್‌ನಲ್ಲಿ ಕೆಲಸ ಮಾಡಲು ಸಂದರ್ಭ ಸಿಕ್ಕಿತ್ತು. ಮೂರು ವರ್ಷಗಳಲ್ಲಿ ಅವರು ನನ್ನ ಸಂಗಡಿಗ ಮಾತ್ರವಲ್ಲ, ಗುರು ಸಹ ಆಗಿದ್ದರು. ಅದಕ್ಕಿಂತ ಹೆಚ್ಚಾಗಿ ಸ್ನೇಹಿತ ಮತ್ತು ಸಹೋದರನಾಗಿದ್ದನು. ಮೂರು ವರ್ಷಗಳಿಂದ ನಿಯತವಾಗಿ ಗುರುವಾರದಂದು ಉಪವಾಸ ಇರಿಸುವುದಾಗಿ ನಾನು ತಾಲಿಅ್‌ರನ್ನು ನೋಡಿದ್ದೇನೆ. ಸಮಯಕ್ಕೆ ಮುಂಚಿತವಾಗಿ ಮಸೀದಿಗೆ ಹೋಗುತ್ತಿದ್ದರು. ಚಂದಾಗಳನ್ನು ಸಮಯಕ್ಕೆ ಮುಂಚಿತವಾಗಿ ಪಾವತಿ ಮಾಡುತ್ತಿದ್ದರು. ಹೇಗಿದ್ದರೂ ಅವರ ಕುರಿತು ಇರುವ ಸಂಭವಗಳು ಬಹಳವಿದೆ. ಹಲವಾರು ಜನರ ಬರೆದಿರುವರು. ಸಮಯ ಪರಿಮಿತಿಯನ್ನು ಗಮನದಲ್ಲಿಟ್ಟು ಕೆಲವನ್ನು ಹೇಳಿದ್ದೇನೆ.

ತಾಲಿಅ್ ಶಹೀದನು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ದೈಹಿಕ ಮತ್ತು ಆಧ್ಯಾತ್ಮಿಕ ಕುಟುಂಬದವನಾಗಿರುವ ತನ್ನ ಹಕ್ಕನ್ನು ಈಡೇರಿಸಿದನು. ಅವನು ಹಝ್ರತ್ ಪೈಗಂಬರರ(ಸ) ಕುಟುಂಬದವನಾಗಿದ್ದನು ಮತ್ತು ಅಲ್ಲಾಹನು ಅವನನ್ನು ಮುಹರ್ರಂ ತಿಂಗಳಲ್ಲಿ ತ್ಯಾಗಕ್ಕಾಗಿ ಆಯ್ಕೆ ಮಾಡಿದನು. ನಾನು ಹೇಳಿದಂತೆ ಒಂದು ವಜ್ರವಾಗಿತ್ತು. ಅಲ್ಲಾಹನು ಅವನ ಪದವಿಗಳನ್ನು ಉನ್ನತಗೊಳಿಸುತ್ತಾ ಹೋಗಲಿ. ಅಲ್ಲಾಹನು ಅವನಿಗೆ ಹಝ್ರತ್ ಪೈಗಂಬರರ(ಸ) ಪಾದಗಳಲ್ಲಿ ಜಾಗ ಕೊಟ್ಟಿರಬಹುದು ಎಂದು ಪ್ರತೀಕ್ಷಿಸುತ್ತೇವೆ. ಮಾತ್ರವಲ್ಲ ಯಾರೋ ಹೀಗೆ ಕನಸು ಸಹ ಕಂಡಿದ್ದರು: ಹಝ್ರತ್ ಪೈಗಂಬರ್(ಸ) ಒಂದು ಜಾಗದಲ್ಲಿ ನಿಂತಿರುವರು ಹಾಗೂ ತಾಲಿಅ್ ಓಡುತ್ತಾ ಹಝ್ರತ್ ಪೈಗಂಬರರನ್ನು(ಸ) ಆಲಿಂಗಿಸುತ್ತಾನೆ; ಹಝ್ರತ್ ಪೈಗಂಬರ್(ಸ) ಸಹ ಅವನನ್ನು ಆಲಿಂಗಿಸುತ್ತಾ ಹೇಳುತ್ತಾರೆ: ಬಾ ನನ್ನ ಪುತ್ರಾ, ಸುಸ್ವಾಗತ.

ದೀನಗಾಗಿ ತ್ಯಾಗವಾಡಿ ಈ ಸ್ಥಾನವನ್ನು ಪಡೆದವರು ಎಷ್ಟು ಸೌಭಾಗ್ಯಶಾಲಿಗಳು. ಅಲ್ಲಾಹನು ಅವರ ಪತ್ನಿ ಮತ್ತು ಮಕ್ಕಳ ಸಂರಕ್ಷಕ ಹಾಗೂ ಸಹಾಯಕನಾಗಲಿ, ತಂದೆ, ತಾಯಿ, ಸಹೋದರ, ಸಹೋದರಿಯರಿಗೆ ಸಹನೆ ಮತು ಧೈರ್ಯ ಕೊಡಲಿ, ಅವರ ಸಹೋದರ ಸಹೋದರಿಯರು ಹಾಗೂ ಅವರ ಮಕ್ಕಳು ಅವರ ಒಳಿತುಗಳನ್ನು ಜಾರಿಯಲ್ಲಿರಿಸುವವರಾಗಲಿ ಎಂದು ಪ್ರಾರ್ಥಿಸುತ್ತೇನೆ.

ನಮಾಝಿನ ನಂತರ ಅವರ ಜನಾಝ ನಮಾಝ್ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್. ಇಂದು ಅವರ ಜನಾಝ ಸಹ ಬಂದಿದೆ.

***************

## ದಹೇಜಿನ (ವರದಕ್ಷಿಣೆ) ಪ್ರದರ್ಶನ ಒಂದು ಕೆಟ್ಟ ಪದ್ಧತಿಯಾಗಿದೆ.

"ಮದುವೆ ಸಮಾರಂಭಗಳಲ್ಲಿ ಕೆಲವು ನಿಷ್ಪ್ರಯೋಜಕ ರೀತಿ ರಿವಾಜುಗಳಿರುತ್ತವೆ. ಉದಾಹರಣೆಗೆ **ಬರಿ** (ವಿವಾಹಕ್ಕೆ ಸಂಬಂಧಿತ ಸಾಮಗ್ರಿಗಳು)ಯನ್ನು ತೋರಿಸುವುದು ಅಥವಾ ವರ ವಧುವಿಗೆ ಕಳುಹಿಸಬಹುದಾದ ಸಾಮಾನುಗಳ ಪ್ರಕಟಣೆ ಮತ್ತೆ ವರದಕ್ಷಣೆಯ ಪ್ರಕಟಣೆ ಅದನ್ನು ಬಹಿರಂಗವಾಗಿ ಪ್ರದರ್ಶಿಸಲಾಗುತ್ತದೆ. ಇಸ್ಲಾಮ್ ಕೇವಲ ವಧುವಿನ ಹಖ್ಖಿನ **ಮಹರ್**‌ನೊಂದಿಗೆ ನಿಕಾಹ್‌ವಿನ ಘೋಷಣೆ ಮಾಡಲು ಆದೇಶಿಸುತ್ತದೆ ಉಳಿದ ಎಲ್ಲಾ ಪದ್ಧತಿಗಳು ನಿಷ್ಪ್ರಯೋಜಕವಾಗಿವೆ. ಒಂದು ಬರಿ ಅಥವಾ ವರದಕ್ಷಣೆಯ ಪ್ರದರ್ಶನ, ಅದರ ಉದ್ದೇಶ ಉಳ್ಳವರ ದೊಡ್ಡಸ್ತಿಕೆ ಕೊಚ್ಚಿಕೊಳ್ಳುವುದಾಗಿರುತ್ತದೆ. ಅಂದರೆ ಭಾಗವಹಿಸಿದವರೆಲ್ಲರೂ ನೋಡಿಕೊಳ್ಳಲಿ. ನಾವು ಸಹೊದರ, ಸಹೋದರಿ ಅಥವಾ ಪುತ್ರ, ಪುತ್ರಿಯರ ವಿವಾಹದಲ್ಲಿ ಇತರರಿಗಿಂತ ಎಷ್ಟು ಹೆಚ್ಚಾಗಿ ಕೊಟ್ಟಿದ್ದೇವೆ ಎಂದು. ಇದು ಕೇವಲ ಒಂದು ರೀತಿಯ ಸ್ಪರ್ಧೆ ಮತ್ತು ಪ್ರದರ್ಶನವಾಗಿರುತ್ತದೆ. ಕೇವಲ ರೀತಿ ರಿವಾಜುಗಳಿಗೆ ಜೋತುಬಿದ್ದು ತನ್ನ ಪ್ರತಿಷ್ಠೆಗಾಗಿ ಬಡವರಿಗೆ ಕಷ್ಟದಲ್ಲಿ ಸಿಲುಕುವುದು, ಸಾಲಗಳ ಬಂಧಿಯಾಗಿಸುವುದು ಬೇಡ. ನಮ್ಮ ದಾವೆ ನಾವು ಅಹ್ಮದಿಯರಾಗಿದ್ದೇವೆ ಮತ್ತು ಬೈಅತ್ತಿನ ಹತ್ತು ಶರತ್ತುಗಳ ಮೇಲೆ ನಡೆದುಕೊಳ್ಳುವವರಾಗಿದ್ದೇವೆ ಎಂಬುದಾಗಿದೆ...... ಅದಾಗ್ಯೂ ಬೈಅತ್ ಮಾಡಿದ ನಂತರ ನಾವು ಸ್ವೇಚ್ಛಾಚಾರಗಳಿಂದ ದೂರ ಉಳಿಯುತ್ತೇವೆ ಎಂದು ಪ್ರತಿಜ್ಞೆ ಮಾಡಿರುತ್ತೇವೆ. ಅದೇ ರೀತಿ ಅಲ್ಲಾಹ್ ಮತ್ತು ಅವನ ಪ್ರವಾದಿ(ಸ) ರವರ ಆದೇಶಗಳನ್ನು ಪರಿಪೂರ್ಣವಾಗಿ ಪಾಲಿಸುತ್ತೇವೆ ಎಂದಾಗಿದೆ. ಅಲ್ಲಾಹನು ಮತ್ತು ಅವನ ಸಂದೇಶವಾಹಕರು ನಮ್ಮಿಂದ ಬಯಸುವುದೇನೆಂದರೆ– ನಾವು ಎಲ್ಲಾ ರೀತಿಯ ರೀತಿ ರಿವಾಜುಗಳು ಮತ್ತು ಸ್ವೇಚ್ಛಾಚಾರಗಳು ಬಿಟ್ಟು ಅಲ್ಲಾಹನ ಮತ್ತು ಅವನ ಪ್ರವಾದಿಯ ಆಜ್ಞೆಗಳನ್ನು ಪಾಲಿಸುವೆವು ಎಂದು." **(ಶರಾಯತೆ ಬೈಅತ್ ಮತ್ತು ಅಹ್ಮದಿಯ ಕರ್ತವ್ಯಗಳು ಪುಟ 101–103)**

**(ವಿಭಾಗ: ರಿಶ್ತನಾತ, ನಝಾರತ್ ಇಸ್ಲಾಹ್ ಇರ್ಶಾದ್ ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

**ಅವರು ನಮ್ಮಿಂದ ಅಗಲಿದ ಒಂದು ವಜ್ರವಾಗಿತ್ತು. ಅಲ್ಲಾಹನು ಜಮಾಅತಿಗೆ ಖಿಲಾಫತಿನ ನಿಷ್ಠಾವಂತ ಮತ್ತು ದೀನಿಗೆ ಆದ್ಯತೆ ನೀಡುವವರನ್ನು ನೀಡುತ್ತಿರಲಿ.**

**ಸಯ್ಯದ್ ತಾಲಿಅ್ ಅಹ್ಮದ್ ಶಹೀದ್‌ರವರ ಪ್ರಕಾಶಮಾನವಾದ ಗುಣಲಕ್ಷಣಗಳ ಪ್ರಸ್ತಾವನೆ**

**ಅವರ ನಷ್ಟವು ನಡುಗಿಸುವಂತಿದೆ. ಅವರು ವಖ್ಫಿನ ನೈಜತೆಯನ್ನು ಅರಿಯುವ ಮತ್ತು ತನ್ನ ಪ್ರತಿಜ್ಞೆಯನ್ನು ಯಥಾರ್ಥ ರೀತಿಯಲ್ಲಿ ನಿಭಾಯಿಸುವ ಪ್ರಿಯ ವ್ಯಕ್ತಿತ್ವವಾಗಿದ್ದರು.**

**ಈ ಘಟನೆಯ ನಂತರ ಈ ಮಟ್ಟದ ಹಲವರನ್ನು ಅಲ್ಲಾಹನು ತಯಾರು ಮಾಡಲಿ ಎಂದು ನಾನು ದುಆ ಮಾಡುತ್ತೇನೆ.**

**ಆದರೆ ಹೇ ಪ್ರಿಯ ತಾಲಿಅ್, ನೀನು ಈ ಪದ್ಯದ ಕೊನೆಯ ಸಾಲುಗಳನ್ನು ಬರೆಯುದಕ್ಕೆ ಮುಂಚೆಯೂ ನನಗೆ ಅದು ಗೊತ್ತಿತ್ತು. ನಿನ್ನ ಪ್ರತಿ ಕೃತ್ಯ, ಪ್ರತಿ ಚಲನವಲನ, ನಿನ್ನ ಕಣ್ಣುಗಳ ಹೊಳಪು ಹಾಗೂ ನಿನ್ನ ಮುಖದ ವಿಸ್ಮಯಕರವಾದೊಂದು ಕಾಂತಿಯಿಂದ ಆ ಸ್ನೇಹದ ಪ್ರಕಟನೆಯಾಗುತ್ತಿತ್ತು. ಒಟ್ಟಿನಲ್ಲಿ ಎಲ್ಲ ರೀತಿಯಲ್ಲೂ ನಿನ್ನ ಪ್ರತಿ ಕೃತ್ಯದಿಂದ, ನಿನಗೆ ಖಲೀಫತುಲ್ ಮಸೀಹ್‌ರೊಡನೆ ಇರುವ ಪ್ರೀತಿ ಪ್ರಕಟವಾಗುತ್ತಿತ್ತು. ನಾನು ಬಹುಶಃ ಯಾರಲ್ಲೂ ಈ ಪ್ರೀತಿಯ ಪ್ರಕಟನೆಯನ್ನು ಕಂಡಿಲ್ಲ.**

**ಹೇ ಪ್ರಿಯ ತಾಲಿಅ್, ನಾನು ಸಾಕ್ಷ್ಯವಹಿಸುತ್ತೇನೆ; ನೀನು ಖಂಡಿತವಾಗಿಯೂ ನಿನ್ನ ವಖ್ಫ್ ಮತು ಪ್ರತಿಜ್ಞೆಯ ಅತ್ಯುನ್ನತ ಮಟ್ಟವನ್ನು ಗಳಿಸಿದ್ದೀಯ.**

**ಅಲ್ಲಾಹನು ಅವನಿಗೆ ಹಝ್ರ‌ತ್ ಪೈಗಂಬರರ(ಸ) ಪಾದಗಳಲ್ಲಿ ಜಾಗ ಕೊಟ್ಟಿರಬಹುದು ಎಂದು ಪ್ರತೀಕ್ಷಿಸುತ್ತೇವೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–09–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ದಿನಗಳಲ್ಲಿ ನಮ್ಮ ಒಬ್ಬ ಬಹಳ ಪ್ರೀತಿಯ ಹುಡುಗ ಮತ್ತು ವಖ್‌ಫೇ ಝಿಂದಗಿಯಾದ ಸಯ್ಯದ್ ತಾಲಿಅ್ ಅಹ್ಮದ್ ಇಬ್ನು ಸಯ್ಯದ್ ಹಾಶಿಂ ಅಕ್ಬರ್ ಘಾನದಲ್ಲಿ ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಆಗಸ್ಟ್ 23 ಮತ್ತು 24ರ ಮಧ್ಯರಾತ್ರಿ ಎಂ.ಟಿ.ಎ.ಯ ಮೂವರು ಸದಸ್ಯರ ಸಂಘವು ಘಾನದ ನಾರ್ದರ್ನ್ ರೀಜನಿನಲ್ಲಿ ರಿಕಾರ್ಡಿಂಗ್ ಮಾಡಿ ಕುಮಾಸಿಗೆ ಹಿಂದಿರುತ್ತಿದ್ದಾಗ ರಸ್ತೆಯಲ್ಲಿ ಸುಮಾರು 7.15ಕ್ಕೆ ದರೋಡೆಗಾರರ ಫೈರಿಂಗ್‌ನಿಂದ ಸಯ್ಯದ್ ತಾಲಿಅ್ ಅಹ್ಮದ್ ಮತ್ತು ಉಮರ್ ಫಾರೂಖ್ ಗಾಯಗೊಂಡರು. ಸುಮಾರು ನಾಲ್ಕುವರೆ ಗಂಟೆಗಳ ನಂತರ ಮೊದಲು ಪೋಲಿ ಕ್ಲಿನಿಕ್‌ನಲ್ಲಿ ಅವರ ಮೆಡಿಕಲ್ ಚಿಕಿತ್ಸೆ ನಡೆಯಿತು. ಅನಂತರ ದೊಡ್ಡ ಆಸ್ಪತ್ರೆಯಾದ ಟಮಾಲೆ ಟೀಚಿಂಗ್ ಹಾಸ್ಪಿಟಲಿಗೆ ಹೋಗುವ ಮಾರ್ಗದಲ್ಲಿ ಅವರು ನಿಧನಗೊಂಡರು. ಎಂ.ಟಿ.ಎ. ಇಂಟರ್‌ನ್ಯಾಶನಲ್ ಇರುವ ಇತರ ದೇಶಗಳಲ್ಲಿ ಕೆಲವು ಶಹಾದತ್ ಆಗಿವೆ. ಆದರೆ ಯು.ಕೆ.ಎ.ಯ ಇವರು ಮೊದಲ ಶಹೀದ್ ಆಗಿರುವರು ಹಾಗೂ ವಖ್ಫೇ ನೌ ಯು.ಕೆ.ಯ ಬಹುಶಃ ಮೊದಲ ಶಹಾದತ್ ಎಂದು ತೋರುತ್ತದೆ.

ಸಯ್ಯದ್ ತಾಲಿಅ್ ಅಹ್ಮದ್ ಸಾಹಿಬ್‌ರು ಸನ್ಮಾನ್ಯ ಅಮತುಲ್ಲತೀಫ್ ಬೇಗಂ ಸಾಹಿಬ ಮತ್ತು ಸಯ್ಯದ್ ಮೀರ್ ಮುಹಮ್ಮದ್ ಅಹ್ಮದ್ ಸಾಹಿಬ್‌ರ ಮೊಮ್ಮಗನೂ ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ(ರ) ಹಾಗೂ ಹಝ್ರ‌ತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್‌ರ ಮೊಮ್ಮಗನ ಮಗನೂ ಆಗಿದ್ದರು. ಹಝ್ರ‌ತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ) ಹಝ್ರ‌ತ್ ಅಮ್ಮಾಜಾನ್ ಎಂದರೆ ಹಝ್ರ‌ತ್ ನುಸ್ರತ್ ಜಹಾನ್ ಬೇಗಂ ಸಾಹಿಬರ(ರ) ಕಿರಿಯ ಸಹೋದರ ಆಗಿದ್ದರು. ಈ ರೀತಿಯಲ್ಲಿ ಅವರ ಕುಟುಂಬ ಪರಂಪರೆಯು ಹಝ್ರ‌ತ್ ಅಮ್ಮಾಜಾನ್‌ರಿಗೆ(ರ) ಬಂದು ಸೇರುತ್ತದೆ ಹಾಗೂ ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ(ರ) ಕಾರಣದಿಂದ ಹಝ್ರ‌ತ್ ಮಸೀಹ್ ಮೌಊದ್‌ರೊಂದಿಗೆ(ರ) ಮತ್ತು ಪುನಃ ಅಮ್ಮಾಜಾನ್‌ರೊಂದಿಗೆ(ರ) ಸಂಬಂಧ ಸ್ಥಾಪಿತವಾಗುತ್ತದೆ. ತಾಲಿಅ್ ಸಾಹಿಬ್‌ರು ದಿವಂಗತ ಮಿರ್ಝಾ ಗ್ಹುಲಾಂ ಖಾದಿರ್ ಶಹೀದ್ ಸಾಹಿಬ್‌ರ ಅಳಿಯನೂ ಆಗಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯೂ ವಖ್ಫೇ ನೌ ಯೋಜನೆಯಲ್ಲಿ ಭಾಗಿಯೂ ಆಗಿದ್ದರು.

ಅವರು ಬಯೋ ಮೆಡಿಕಲ್ ಸೈನ್ಸನಲ್ಲಿ ಡಿಗ್ರಿ ಪಡೆದ ನಂತರ ಜರ್ನಲಿಸಮಿನಲ್ಲಿ ಮಾಸ್ಟರ್ ಮಾಡಿದ್ದರು. 2013ರಲ್ಲಿ ಜೀವಿತವನ್ನು ವಖ್ಫ್ ಮಾಡಿದರು. ಅನಂತರ ವಿವಿಧ ಆಫೀಸ್‌ಗಳಲ್ಲಿ ಕೆಲಸ ಮಾಡಿದ ನಂತರ ಕೊನೆಗೆ ಪ್ರೆಸ್ ಎಂಡ್ ಮೀಡಿಯದಲ್ಲಿ ಅವರು ನಿಯುಕ್ತರಾದರು. ಇದಕ್ಕೆ ಮುಂಚೆ ತನ್ನ ಲೋಕಲ್ ಜಮಾಅತಿನಲ್ಲಿ ಸಹ ಸೇವೆ ಸಲ್ಲಿಸುತ್ತಿದ್ದರು. ಖುದ್ದಾಮುಲ್ ಅಹ್ಮದಿಯಾ ಹಾರ್ಟಲೆಪೂಲಿನಲ್ಲಿ ತಬ್ಲೀಗ್, ತಾಲೀಮ್, ಇಶಾಅತ್ ಮತ್ತು ಅತ್‌ಫಾಲಿನ ವಿಭಾಗಗಳಲ್ಲಿ ಕೆಲಸ ಮಾಡಿದ್ದರು. 2016ರಲ್ಲಿ ಎಂ.ಟಿ.ಎ. ನ್ಯೂಸ್‌ನಲ್ಲಿ ಪೂರ್ಣಾವಧಿಗೆ ನಿಯುಕ್ತಿಗೊಂಡರು. ಇದಕ್ಕೆ ಮುಂಚೆ ಅವರು ರಿವ್ಯೂ ಆಫ್ ರಿಲೀಜಿಯನಿನಲ್ಲಿ ಇಂಡೆಕ್ಸಿಂಗ್ ಟ್ಯಾಗ್ ಎಡಿಟಿಂಗಿನ ಹೆಡ್ ಆಗಿಯೂ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದರು. ಎಂ.ಟಿ.ಎ. ನ್ಯೂಸ್‌ಗಾಗಿ ಅವರು ಡೊಕ್ಯುಮೆಂಟರಿ ಪ್ರೋಗ್ರಾಮುಗಳನ್ನು ತಯಾರಿಸುತ್ತಿದ್ದರು. ಹೆಚ್ಚಿಗೆಯಾಗಿ ಅವರು ಮೂರ್‍ನಾಲ್ಕು ಡೊಕ್ಯುಮೆಂಟರಿಗಳ ಕೆಲಸ ಮಾಡುತ್ತಿದ್ದರು. ವಾರಕ್ಕೊಮ್ಮೆ ಪ್ರಸಾರಗೊಳ್ಳುವ ನನ್ನ ಕೆಲಸಗಳ ಬಗ್ಗೆಗಿನ ದಿಸ್ ವೀಕ್ ವಿದ್ ಹುಝೂರ್ ಕಾರ್ಯಕ್ರಮವನ್ನು ಇವರೇ ಶುರುಮಾಡಿದ್ದರು. ಅನಂತರ ಕೊನೆಯ ತನಕ ವಿಶೇಷವಾದ ಆಸಕ್ತಿಯಿಂದ ಅದರ ರಿಕಾರ್ಡಿಂಗ್ ಮತ್ತಿತ್ಯಾದಿ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಇದು ಎಂ.ಟಿ.ಎ. ನೋಡುವವರ ಜನಪ್ರಿಯ ಪ್ರೋಗ್ರಾಂ ಆಗಿತ್ತು. ತಾಹಿರ್ ಮ್ಯಾಗಝಿನಿನ ಎಡಿಟರ್ ಆಫಿಸಿನಲ್ಲಿ ಅಲ್ಲದೆ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯದ ಇಶಾಅತ್ ವಿಭಾಗದಲ್ಲೂ ಸೇವೆ ಸಲ್ಲಿಸುತ್ತಿದ್ದರು. ಜಮಾಅತಿನ ಮ್ಯಾಗಝಿನ್‌ಗಳಾದ ರಿವ್ಯೂ ಆಫ್ ರಿಲೀಜಿಯನ್ಸ್ ಮತ್ತು ತಾರಿಖ್ ಮ್ಯಾಗಝಿನಿನಲ್ಲೂ ಲೇಖನಗಳನ್ನು ಬರೆಯುತ್ತಿದ್ದರು. ಪ್ರೆಸ್ ಎಂಡ್ ಮೀಡಿಯದ ಆಫೀಸಿನ ಅಡಿಯಲ್ಲಿ ಅನೇಕ ದೇಶಗಳಿಗೆ ನನ್ನೊಂದಿಗೂ ಮತ್ತು ಅಲ್ಲದೆಯೂ ಅವರು ಪರ್ಯಟನೆ ನಡೆಸಿದ್ದರು.

ಸಯ್ಯದ್ ತಾಲಿಅ್ ಅಹ್ಮದ್‌ರಿಗೆ ತನ್ನ ಕೆಲಸವನ್ನು ಮುಗಿಸಲು ಮತ್ತು ಉತ್ತಮ ಗುಣಮಟ್ಟಕ್ಕೆ ಅನುಸಾರ ತನ್ನ ಕೆಲಸವನ್ನು ಕೊನೆಗೊಳಿಸಲು ಅಸಾಮಾನ್ಯ ಉತ್ಸಾಹ ಮತ್ತು ಆವೇಶವಿತ್ತು. ಅದಕ್ಕಾಗಿ ಅವರು ಯಾವುದೇ ಅಪಾಯದ ಪರಿವೆ ಮಾಡುತ್ತಿರಲಿಲ್ಲ. ಅವರ ಶಹಾದತಿನ ಘಟನೆಯಿಂದಲೂ ಅವರಿಗೆ ಅಪಾಯದ ಚಿಂತೆ ಕಿಂಚಿತ್ತೂ ಇರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಯಾವ ಕೆಲಸಕ್ಕಾಗಿ ಬಂದಿದ್ದೇನೋ ಅದನ್ನು ಉತ್ತಮ ರೀತಿಯಲ್ಲಿ ಸಮಯಕ್ಕೆ ಮುಗಿಸುವ ಚಿಂತೆಯಿತ್ತು. ಆದ್ದರಿಂದಲೇ ಅಪಾಯದ ಸಾಧ್ಯತೆ ಬಹಳಷ್ಟು ಇದ್ದ ಸಮಯದಲ್ಲೇ ಯಾತ್ರೆಯನ್ನು ಶುರುಮಾಡಿದ್ದರು. ಟಮಾಲೆಯ ಝೋನಲ್ ಮಿಶನರಿಯಾದ ಅಬೂಬಕರ್ ಇಬ್ರಾಹೀಂ ಸಾಹಿಬ್‌ರು ವಿವರಿಸುತ್ತಾರೆ: ಆಗಸ್ಟ್ 23ಕ್ಕೆ ಬೆಳಿಗ್ಗೆ ಎಂ.ಟಿ.ಎ.ದ ಟೀಂ ಸಲಾಗಾ ರವಾನೆಯಾಗುವಾಗ, ತಾಲಿಅ್ ಸಾಹಿಬ್‌ರು ತನ್ನ ಸಾಮಾನುಗಳನ್ನು ಪ್ಯಾಕ್ ಮಾಡುವುದನ್ನು ನೋಡಿ ನಾನು ಕೇಳಿದೆ: ಹೋಟಲ್‌ನಿಂದ ಹೋಗುತ್ತಿದ್ದೀಯ, ಸಲಾಗದಿಂದ ಮರಳಿ ಬಂದು ಇಲ್ಲಿ ತಂಗಲು ಇದೆಯೋ? ತಾಲಿಅ್ ಸಾಹಿಬ್‌ರು ಹೇಳಿದರು: ಸಮಯದ ಕೊರತೆಯಿದೆ. ಆದ್ದರಿಂದ ನಾನು ಮರಳಿ ಖುಮಾಸಿಗೆ ಹೋಗುವೆನು. ಮೌಲವಿ ಸಾಹಿಬ್‌ರು ಹೇಳಿದರು: ಸಲಾಗದಿಂದ ಮರಳಿಬರುವಾಗ ತಡವಾದರೆ ಯಾತ್ರೆ ಮಾಡುವುದು ಸರಿಯಲ್ಲ. ತಾಲಿಅ್ ಸಾಹಿಬ್‌ರು ಹೇಳಿದರು: ಹೇಗಿದ್ದರೂ ನೋಡುವ, ಆದರೆ ನನಗೆ ಸೀರಾಲಿಯೋನಿಗೂ ಹೋಗಲಿಕ್ಕಿದೆ. ನನ್ನ ಬಳಿ ಈಗ ಕೇವಲ ಎರಡು ದಿನಗಳು ಬಾಕಿಯಿವೆ. ಇಲ್ಲಿ ಖುಮಾಸಿ ಮತ್ತು ಆಕ್ರಾದಲ್ಲಿ

ಮಾಡಬೇಕಾದ ಬಹಳಷ್ಟು ಕೆಲಸಗಳಿವೆ. ಆದರೂ ನೀವು ಹೇಳಿದ ಕಾರಣದಿಂದ ನೋಡುವ. ಹೇಗಿದ್ದರೂ ಮರಳಿಬಂದಾಗ ಮರಳುವಿಕೆಯ ಯಾತ್ರೆಯನ್ನು ಮಾಡಲು ತೀರ್ಮಾನಿಸಿದರು ಮತ್ತು ಟಮಾಲೆಗೆ ಮರಳಲಿಕ್ಕೆ ರವಾನೆಯಾದರು. ಏಳು ಮುಕ್ಕಾಲು ಆದಾಗ ನಮಾಝ್ ಮಾಡುವ ಎಂದು ತಾಲಿಅ್ ಸಾಹಿಬ್‌ರು ಉಮರ್ ಫಾರೂಖ್ ಸಾಹಿಬ್‌ರೊಡನೆ ಹೇಳಿದರು. ಹೀಗೆ ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ಜಮಾಅತಾಗಿ ನಿರ್ವಹಿಸಲಾಯಿತು. ಸಲಾಗ ಮತ್ತು ಟಮಾಲೆಯಲ್ಲಿ ರಿಕಾರ್ಡ್ ಮಾಡಲಾದ ಫೈಲ್‌ಗಳು ಕರಪ್ಟ್ ಆಗಬಹುದು ಎಂಬ ಚಿಂತೆಯಿಂದ ಅವರು ಯಾತ್ರೆಯಲ್ಲೇ ಅವುಗಳನ್ನು ಸುರಕ್ಷಿತಗೊಳಿಸುವ ಪ್ರಯತ್ನವನ್ನು ಶುರುಮಾಡಿದರು. ಯಾವುದಾದರೂ ರೀತಿಯಲ್ಲಿ ಸಮಯ ವ್ಯರ್ಥವಾಗುವುದು ಅವರಿಗೆ ಇಷ್ಟವಿರಲಿಲ್ಲ. ಅದೇ ರೀತಿಯಲ್ಲಿ ಜಮಾಅತಿನ ಸಾಮಾನುಗಳು ವ್ಯರ್ಥವಾಗಬಾರದು ಎಂಬ ಚಿಂತೆ ಅವರಿಗೆ ಯಾವಾಗಲೂ ಇತ್ತು.

ಹೇಗಿದ್ದರೂ ಪೊಲೀಸ್ ರಿಪೋರ್ಟಿನ ಪ್ರಕಾರ ಎಂ.ಟಿ.ಎ.ಯ ವಾಹನ ಮಪಾಹ ಜಂಕ್ಷನಿನ ಸಮೀಪ ದರೋಡೆಕೋರರು ವಾಹನದ ಮೇಲೆ ಫೈರಿಂಗ್ ಶುರುಮಾಡಿದರು. ಅದರಿಂದ ಎಂ.ಟಿ.ಎ.ಯ ಇಬ್ಬರು ವ್ಯಕ್ತಿಗಳು ಗಾಯಗೊಂಡರು. ಅವರ ಡ್ರೈವರ್ ಹೇಳುತ್ತಾರೆ: ಮುಂದಿನಿಂದ ಬರುತ್ತಿದ್ದ ಒಂದು ವಾಹನದ ಚಾಲಕ ಅಪಾಯದ ಬಗ್ಗೆ ಸೂಚನೆ ನೀಡಿದ್ದನು. ಆದರೆ ನನಗೆ ಅದು ಗೊತ್ತಾಗಲಿಲ್ಲ. ಹೇಗಿದ್ದರೂ ಡಕಾಯಿತರು ಮುಂದಿನಿಂದ ಬರುತ್ತಿದ್ದನ್ನು ನಾನು ಹೆಡ್‌ಲೈಟಿನ ಬೆಳಕಿನಿಂದ ನೋಡಿದಾಗ, ನಾನು ಜೋರಾಗಿ ಕಲಿಮ ಉಚ್ಚರಿಸಿದೆ. ಆದರೆ ಡಕಾಯಿತರು ಫೈರಿಂಗ್ ಶುರುಮಾಡಿದರು. ಸಯ್ಯದ್ ತಾಲಿಅ್ ಸಾಹಿಬ್‌ರು ಕಾರಿನ ಹಿಂದಿನ ಭಾಗದಲ್ಲಿ ಕುಳಿತಿದ್ದರು. ಆಯುಧಧಾರಿತ ದರೋಡೆಕೋರರೊಡನೆ ಮುಖಾಮುಖಿಯಾಗುತ್ತಿದೆ ಎಂದು ಅವರಿಗೂ ಗೊತ್ತಾಯಿತು. ಉಮರ್ ಫಾರೂಕ್ ಹೇಳುತ್ತಾರೆ: ಈ ಫೈರಿಂಗಿನ ವೇಳೆ ನನ್ನ ಕಾಲಿನ ಸ್ವಲ್ಪ ಮೇಲೆ ಗುಂಡು ತಗುಲಿತು. ಆದರೆ ನನಗೆ ಅದರ ನೋವು ಅಷ್ಟಿರಲಿಲ್ಲ. ಗುಂಡುಗಳನ್ನು ಹಾರಿಸಿದ ನಂತರ ಡಕಾಯಿತರು ಸುಮ್ಮನಾದರು. ಹೇಗಿದ್ದರೂ ಸ್ವಲ್ಪ ಸಮಯದ ನಂತರ ದರೋಡೆಗಾರರು ಟಾರ್ಚ್ ಹಿಡಿದು ಮುಂದಕ್ಕೆ ಬಂದರು ಹಾಗೂ ನನ್ನನ್ನು ಮತ್ತು ಡ್ರೈವರನ್ನು ವಾಹನದಿಂದ ಇಳಿಸಿದರು. ನಮ್ಮ ಬಳಿಯಿದ್ದ ಫೋನ್ ಮತ್ತು ಹಣವನ್ನು ಅವರಿಗೆ ಒಪ್ಪಿಸಿದೆವು. ಡಕಾಯಿತರು ನಮ್ಮನ್ನು ಹೊರಗೆ ರಸ್ತೆಯಲ್ಲಿ ಮಲಗಿಸಿದರು ಮತ್ತು ಹೊಡೆದರು. ನಮ್ಮ ತಲೆಯಲ್ಲಿ ಜೋರಾಗಿ ಬಡಿಗೆಯಿಂದ ಹೊಡೆದರು. ಹೀಗೆ ರಕ್ತ ಹರಿಯಲು ಶುರುವಾಯಿತು. ಆದಾಗ್ಯೂ ನನಗೆ ತಾಲಿಅ್ ಸಾಹಿಬ್‌ರ ಬಗ್ಗೆ ಹೆಚ್ಚು ಚಿಂತೆಯಿತ್ತು. ಹೇಗಿದ್ದರೂ ಇವರು ಸಹ ಗಾಯಗೊಂಡಿರುವರು. ಅವರಿಗೆ ಗುಂಡು ಸಹ ತಗುಲಿದೆ. ತಲೆ ಸಹ ಗಾಯಗೊಂಡಿದೆ. ಅಲ್ಲಾಹನು ಅವರಿಗೂ ಶಮನ ನೀಡಲಿ. ಅವರಿಗಾಗಿಯೂ ದುಆ ಮಾಡಿರಿ. ಅನಂತರ ಅಬ್ದುರ್ರಹ್ಮಾನ್ ಮತ್ತು ಡ್ರೈವರ್ ಆದ ಉಮರ್ ಫಾರೂಖ್ ಹೇಳುತ್ತಾರೆ: ಹೇಗಿದ್ದರೂ ಇವೆಲ್ಲವೂ ಆಯಿತು. ನಮ್ಮನ್ನು ಲೂಟಿ ಮಾಡಿ ಡಕಾಯಿತರು ಹೋದಾಗ ನಮ್ಮ ಧೈರ್ಯಮಾಡಿ ಎದ್ದೆವು. ಬೇಗನೇ ವಾಹನದ ಬಳಿಗೆ ಬಂದೆವು. ತಾಲಿಅ್ ಸಾಹಿಬ್‌ರ ಸ್ಥಿತಿಯೇನೆಂದು ನೋಡಲು ಹೋದೆವು. ಅವರ ಸೊಂಟದ ಬಲಗಡೆ ಗುಂಡು ತಗುಲಿ ಒಳಗೆ ನುಗ್ಗಿತ್ತು. ಅದರ ಕಾರಣದಿಂದ ವಾಹನದಲ್ಲೇ ಬಹಳಷ್ಟು ರಕ್ತ ಹರಿದಿತ್ತು ಎಂದು ನಮಗೆ ಗೊತ್ತಾಯಿತು. ಹೇಗಿದ್ದರೂ ಮೆಡಿಕಲ್ ರಿಪೋರ್ಟಿನ ಪ್ರಕಾರ ಇದೇ ಜೀವಹೋಗಲು ಕಾರಣವಾಗಿತ್ತು.

ಹೇಗಿದ್ದರೂ ದುರ್ಘಟನೆಯ ನಂತರ ಲೈನ್ ಬಸ್ಸಿನ ಮೂಲಕ ಮೊದಲು ಬೋಪೀಚ್ ಪೋಲಿ ಕ್ಲಿನಿಕ್‌ನಲ್ಲಿ ಅವರ ಸ್ವಲ್ಪಮಟ್ಟಿಗೆ ಮೆಡಿಕಲ್ ಚಿಕಿತ್ಸೆ ನಡೆಯಿತು. ಅನಂತರ ಅನಂತರ ಟಮಾಲೆ ಟೀಚಿಂಗ್ ಆಸ್ಪತ್ರೆಗೆ ಕೊಂಡುಹೋಗಲು ತೀರ್ಮಾನಿಸಲಾಯಿತು. ಆದರೆ ಹೋಗುವ ಮಾರ್ಗದಲ್ಲೇ ಅವರು ನಿಧನಗೊಂಡರು. ಮೃತಪಟ್ಟಿರುವರು ಎಂದು ಆಸ್ಪತ್ರೆಯವರು ಡಿಕ್ಲೇರ್ ಮಾಡಿದರು. ಉಮರ್ ಸಾಹಿಬ್‌ರು ಹೇಳುತ್ತಾರೆ: ತಾಲಿಅ್ ಸಾಹಿಬ್‌ರ ತಲೆ ನನ್ನ ಮಡಿಯಲ್ಲಿತ್ತು. ಅವರು ಪದೇ ಪದೇ ನನ್ನೊಡನೆ ಹೀಗೆಯೇ ಕೇಳುತ್ತಿದ್ದರು: ನಮ್ಮ ಈ ಘಟನೆಯ ಬಗ್ಗೆ ಹುಝೂರರಿಗೆ ತಿಳಿಸಲಾಗಿದೆಯೇ? ದುಆಗಾಗಿ ವಿನಂತಿಸಲಾಗಿದೆ ಎಂದು ಅವರೊಡನೆ ಹೇಳಲಾಯಿತು. ಈ ದುರ್ಘಟನೆಯ ತೀವ್ರವಾದ ಪ್ರಭಾವ ನಮ್ಮ ಮೇಲೆ ಆಗಿತ್ತು. ಬಹಳಷ್ಟು ಭಯ ಮತ್ತು ಹೆದರಿಕೆಯಿತ್ತು. ನಾವು ಅವರನ್ನು ಆಸ್ಪತ್ರೆಗೆ ಕೊಂಡು ಹೋಗುತ್ತಿರುವಾಗಲೂ ಅವರು ತನ್ನ ಸಂಗಡಿಗರೊಡನೆ ಹೀಗೆ ಹೇಳಿದರು: ಫೈರಿಂಗ್ ವೇಳೆ ನಾನು ಬೇಗನೇ ಲ್ಯಾಪ್‌ಟಾಪ್ ಮತ್ತು ಇತರ ಬೆಲೆಬಾಳುವ ವಸ್ತುಗಳನ್ನು ಹಿಂದಿನ ಸೀಟಿನ ಅಡಿಗೆ ನೂಕಿದ್ದೇನೆ. ಅಲ್ಲಿ ಅವುಗಳು ಸುರಕ್ಷಿತವಾಗಿವೆ. ಅವುಗಳನ್ನು ಅಲ್ಲಿಂದ ತೆಗೆಯಿರಿ. ಅನಂತರ ತಾಲಿಅ್ ಸಾಹಿಬ್‌ರು ನನ್ನೊಡನೆ ಕ್ಯಾಮೆರ, ಫೋನ್ ಮತ್ತು ಲ್ಯಾಪ್‌ಟಾಪ್ ಬಗ್ಗೆ ಅವುಗಳು ಸುರಕ್ಷಿತವಾಗಿವೆಯೇ ಎಂದು ಕೇಳಿದರು. ಯಾವುದೇ ರಿಕಾರ್ಡಿಂಗ್ ವ್ಯರ್ಥವಾಗಬಾರದು ಎಂಬ ಚಿಂತೆ ಅವರಿಗಿತ್ತು. ಸಂಬಂಧಪಟ್ಟ ಎಲ್ಲ ಸಾಮಾನುಗಳು ಸುರಕ್ಷಿತವಾಗಿವೆ ಎಂದು ನಾನು ಅವರೊಡನೆ ಹೇಳಿದೆನು.

ಜಮಾಅತಿನ ವಸ್ತುಗಳು ಮತ್ತು ಸಂಪತ್ತಿನ ಬಗ್ಗೆ ಅವರಿಗೆ ಚಿಂತೆಯಿತ್ತು. ಜಮಾಅತಿನ ಚರಿತ್ರೆಯನ್ನು ದಾಖಲಿಸಲು ಅವರು ಮಾಡಿದ ಪ್ರಯತ್ನಗಳನ್ನು ಸುರಕ್ಷಿತಗೊಳಿಸಿದರು. ಉಮರ್ ಫಾರೂಖ್ ಸಾಹಿಬ್‌ರು ಹೇಳುತ್ತಾರೆ: 9, 9.30ಯ ಸಮಯದಲ್ಲಿ ಅವರ ಸ್ಥಿತಿ ಬಿಗಡಾಯಿಸಲು ಶುರುವಾಯಿತು. ಆದ ಕಾರಣ, ಬೇಗನೇ ಬೇರೆ ಆಸ್ಪತ್ರೆಗೆ ಕೊಂಡುಹೋಗಲು ಪೋಲಿ ಕ್ಲಿನಿಕ್‌ನವರು ಹೇಳಿದರು. ನಾನು ಹೇಳಿದಂತೆ ಅವರನ್ನು ಟಮಾಲೆ ಆಸ್ಪತ್ರೆಗೆ ಕೊಂಡುಹೋಗುವ ಮಾರ್ಗದಲ್ಲೇ ಮರಣಗೊಂಡರು. ಎಂಬುಲನ್ಸಿನಲ್ಲಿ ಆವಶ್ಯಕ ವಸ್ತುಗಳು ಕೂಡ ಇರಲಿಲ್ಲ. ಇಂತಹ ದೇಶಗಳಲ್ಲಿ ಕೆಲವೊಮ್ಮೆ ಇದೇ ಸ್ಥಿತಿಯಾಗಿರುತ್ತದೆ. ಆಂಬುಲೆನ್ಸ್ ಲಭಿಸಲು ಕೂಡ ತಡವಾಯಿತು. ಆದ ಕಾರಣದಿಂದ ಬ್ಲೀಡಿಂಗ್ ಸಹ ಬಹಳ ಹೆಚ್ಚಾಗುತ್ತಿತ್ತು. ಕೊನೆಗೆ ಅಲ್ಲಾಹನ ವಿಧಿ ಪ್ರಕಾರ ನಡೆಯಬೇಕಾದದ್ದು ನಡೆಯಿತು. ಉಮರ್ ಸಾಹಿಬ್ ಹೇಳುತ್ತಾರೆ: ಗಾಯಾಳುಗಳಾದ ನಾವು ಯಾತ್ರೆ ಮಾಡುತ್ತಿದ್ದಾಗ ತಾಲಿಅ್ ಸಾಹಿಬ್‌ರು ನನ್ನೊಡನೆ ಹೀಗೆ ಹೇಳುತ್ತಿದ್ದರು:

Tell Huzur that I love him and tell my family that I love them ಎಂದರೆ "ಹುಝೂರರೊಡನೆ ಹೇಳಿರಿ, ನಾನು ಅವರನ್ನು ಪ್ರೀತಿಸುತ್ತೇನೆ. ನನ್ನ ಕುಟುಂಬದೊಡನೆ ಹೇಳಿರಿ, ನಾನು ಅವರನ್ನು ಪ್ರೀತಿಸುತ್ತೇನೆ.

ಉಮರ್ ಫಾರೂಖ್ ಸಾಹಿಬ್ ಹೇಳುತ್ತಾರೆ: ಸ್ವಲ್ಪ ಪ್ರಜ್ಞೆ ಬರುವಾಗಲೆಲ್ಲ ಅವರು ಪುನಃ ಈ ಮಾತನ್ನೇ ಹೇಳುತ್ತಿದ್ದರು. ಹೀಗೆಯೇ ಹಲವಾರು ಬಾರಿ ಆಯಿತು. ಒಂದು ಸಲವಲ್ಲ. ಅನೇಕ ಬಾರಿ. ತಾಲಿಅ್ ಸಾಹಿಬ್‌ರು ಹೀಗೆಯೂ ಹೇಳಿದರು: ನೀವು ನಮ್ಮ ಬಗ್ಗೆ ಬಹಳ ಹೆಚ್ಚು ಕಾಳಜಿ ವಹಿಸಿದ್ದೀರಿ. ಸಾಧ್ಯವಾದ ಎಲ್ಲ ಸಹಾಯವನ್ನು ಮಾಡಿದ್ದೀರಿ. ಅದಕ್ಕಾಗಿ ನಾನು ನಿಮಗೆ ಮನಸ್ಸಾರೆ ಕೃತಜ್ಞತೆ ಅರ್ಪಿಸುತ್ತೇನೆ. ಉಮರ್ ಫಾರೂಖ್ ಸಾಹಿಬ್‌ರು ಹೇಳಿದರು: ನಾನು ಅವರಿಗೆ ಧೈರ್ಯಕೊಡುತ್ತಿದ್ದೆ. ಆದರೆ ಈಗ ಅವರ ಶಕ್ತಿ ಕುಂಟಿತಗೊಳ್ಳುತ್ತಿತ್ತು. ಎಂತಹ ಸ್ಥಿತಿಯಾಯಿತು ಎಂದರೆ, ಸವಾಲು ಮಾಡುವಾಗ ಹೇಳುವುದಕ್ಕೆ ಬದಲಾಗಿ ತನ್ನ ಕೈಯ ಮುಷ್ಟಿಯನ್ನು ಮುಚ್ಚಿಕೊಂಡು ಹೆಬ್ಬೆರಳು ಎತ್ತಿ ಎಲ್ಲವೂ ಸರಿಯಿದೆ ಎಂದು ಹೇಳುತ್ತಿದ್ದರು. ಅದರಿಂದ ನನಗೆ ಭಯವಾಗುತ್ತಿತ್ತು. ಅನಂತರ ಅವರ ಉಸಿರಾಟದಲ್ಲಿ ವೇಗತೆಯುಂಟಾಯಿತು. ಅನಂತರ ಒಂದು ದೀರ್ಘವಾದ ಮೌನವುಂಟಾಯಿತು. ನಾವು ಬಯಸದ್ದು ಆಗಿಬಿಟ್ಟಿದೆ ಎಂದು ನನಗೆ ಗೊತ್ತಾಯಿತು. ಡ್ರೈವರ್ ಮತ್ತು ಮೇಲ್ ನರ್ಸ್ ಪರಸ್ಪರ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅವರು ತಾಲಿಅ್ ಸಾಹಿಬ್‌ರು ನಿಧನರಾದದ್ದನ್ನು ನಮ್ಮೊಡನೆ ಹೇಳಲು ಬಯಸುತ್ತಿಲ್ಲವೆಂದು ಅದರಿಂದ ನಮಗೆ ಅಂದಾಜಾಯಿತು. ಹೇಗಿದ್ದರೂ ನಾನು ಹೇಳಿದಂತೆ ಟಮಾಲೆ ತಲುಪಿ 1.49ಕ್ಕೆ ಅವರ ಮರಣದ ಬಗ್ಗೆ ಆಸ್ಪತ್ರೆಯವರು ಡಿಕ್ಲೇರ್ ಮಾಡಿದರು. ಈ ವಾರ್ತೆಯ ಕಾರಣದಿಂದ ಟಮಾಲೆಯ ಜನರು ಬಹಳ ದುಃಖಿತರಾದರು. ಏಕೆಂದರೆ ಸ್ವಲ್ಪ ಸಮಯಕ್ಕೆ ಮುಂಚೆ ನಗುತ್ತಾ ಅವರನ್ನು ತಾಲಿಅ್ ಸಾಹಿಬ್‌ರು ಬೀಳ್ಕೊಟ್ಟಿದ್ದರು. ಇದಾಗಿತ್ತು ಅವರ ಶಹಾದತಿನ ಘಟನೆಯ ಸ್ವಲ್ಪ ವಿವರಣೆ.

ಅವರು ನಮ್ಮಿಂದ ಅಗಲಿದ ಒಂದು ವಜ್ರವಾಗಿತ್ತು. ಅಲ್ಲಾಹನು ಜಮಾಅತಿಗೆ ಖಿಲಾಫತಿನ ನಿಷ್ಠಾವಂತ ಮತ್ತು ದೀನಿಗೆ ಆದ್ಯತೆ ನೀಡುವವರನ್ನು ನೀಡುತ್ತಿರಲಿ. ಆದರೆ ಅವರ ನಷ್ಟವು ನಡುಗಿಸುವಂತಿದೆ. ಅವರು ವಖ್ಫಿನ ನೈಜತೆಯನ್ನು ಅರಿಯುವ ಮತ್ತು ತನ್ನ ಪ್ರತಿಜ್ಞೆಯನ್ನು ಯಥಾರ್ಥ ರೀತಿಯಲ್ಲಿ ನಿಭಾಯಿಸುವ ಪ್ರಿಯ ವ್ಯಕ್ತಿತ್ವವಾಗಿದ್ದರು. ಅವರನ್ನು ನೋಡಿ ನನಗೆ ಅಚ್ಚರಿಯಾಗುತ್ತದೆ ಮತು ಈಗಲೂ ಆಗುತ್ತಿದೆ. ಭೌತಿಕ ವಾತಾವರಣದಲ್ಲಿ ಬೆಳೆದ ಹುಡುಗ ತನ್ನ ವಖ್ಫನ್ನು ಅರಿತನು, ಅದನ್ನು ನಿರ್ವಹಿಸಿದನು ಮತ್ತು ಅದನ್ನು ಚರಮಸೀಮೆಗೆ ತಲುಪಿಸಿದನು. ತನ್ನ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಲು ಅವರು ಹಿರಿಯರ ಸಂಭವಗಳನ್ನು ಓದುತ್ತಿದ್ದರು. ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಇಂತಹ ಪರಿಜ್ಞಾನವು ಧರ್ಮದ ಆಳವಾದ ಅರಿವು ಇರುವವರಿಗೂ ಗೊತ್ತಿರುವುದಿಲ್ಲ.

ಅವರು ಖಿಲಾಫತಿಗೆ ನಿಷ್ಠಾವಂತರಾಗಿದ್ದರು. ಅದರಲ್ಲಿ ಎಷ್ಟು ಪ್ರಾಮಾಣಿಕರಾಗಿದ್ದರು ಎಂದರೆ, ಜೀವನ್ಮರಣದ ಅವಸ್ಥೆಯಲ್ಲೂ ತನ್ನ ಕೊನೆಯ ವಾಕ್ಯದಲ್ಲಿ ಅವರಿಗೆ ಖಲೀಫತುಲ್ ಮಸೀಹ್‌ರೊಂದಿಗೆ ಪ್ರೀತಿ ಮತ್ತು ನಿಷ್ಠೆಯದ್ದೇ ಆಲೋಚನೆಯಿತ್ತು. ತನ್ನ ಮಕ್ಕಳ ಮತ್ತು ತನ್ನ ಕುಟುಂಬದ ಬಗ್ಗೆ ಎಲ್ಲರಿಗೂ ನೆನಪು ಬರುತ್ತದೆ. ಆದರೆ ಪ್ರತಿ ಬಾರಿ ತನ್ನ ಮಕ್ಕಳ ಮತ್ತು ಕುಟುಂಬಕ್ಕಿಂತ ಮುಂಚೆ ಅಥವಾ ಅದರೊಂದಿಗೆ ಖಲೀಫತುಲ್ ಮಸೀಹ್‌ರ ಬಗ್ಗೆ ತನ್ನ ಪ್ರೀತಿಯನ್ನು ಪ್ರಕಟಿಸುವುದು ಬಹುಶಃ ಕೆಲವರಿಗೆ ಮಾತ್ರ ಸಾಧ್ಯ.

ಸುಮಾರು ಎರಡು ಮೂರು ವರ್ಷಗಳ ಹಿಂದೆ ಅವರು ಖಿಲಾಫತಿನೊಂದಿಗೆ ಸಂಬಂಧ ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವ ಒಂದು ಪದ್ಯವನ್ನು ಬರೆದಿದ್ದರು. ಅದನ್ನು ಅವರು ತನ್ನೊಬ್ಬ ಸ್ನೇಹಿತನಿಗೆ ಕೊಟ್ಟು ತನ್ನ ಬಳಿ ಇರಿಸಲು ಹಾಗೂ ಯಾರಿಗೂ ತೋರಿಸದಿರಲು ಹೇಳಿದ್ದರು. ನಾನು ಖಲೀಫತುಲ್ ಮಸೀಹ್‌ರನ್ನು ಅತ್ಯಂತ ಹೆಚ್ಚು ಪ್ರೀತಿಸುತ್ತೇನೆ ಎಂಬುದಾಗಿ ಆ ಪದ್ಯ ಶುರುವಾಗುತ್ತಿತ್ತು ಹಾಗೂ ಖಲೀಫತುಲ್ ಮಸೀಹ್‌ರೊಂದಿಗೆ ನನಗೆ ಇರುವ ಪ್ರೀತಿ ಮತ್ತು ಪ್ರೇಮ ಅವರಿಗೆ ಎಂದಿಗೂ ಗೊತ್ತಾಗಲಿಕ್ಕಿಲ್ಲ ಎಂಬುದಾಗಿ

ಆ ಪದ್ಯವನ್ನು ಕೊನೆಗೊಳಿಸಲಾಗಿತ್ತು. ಆದರೆ ಹೇ ಪ್ರಿಯ ತಾಲಿಅ್, ನೀನು ಈ ಪದ್ಯದ ಕೊನೆಯ ಸಾಲುಗಳನ್ನು ಬರೆಯುದಕ್ಕೆ ಮುಂಚೆಯೂ ನನಗೆ ಅದು ಗೊತ್ತಿತ್ತು. ನಿನ್ನ ಪ್ರತಿ ಕೃತ್ಯ, ಪ್ರತಿ ಚಲನವಲನ, ನಿನ್ನ ಕಣ್ಣುಗಳ ಹೊಳಪು ಹಾಗೂ ನಿನ್ನ ಮುಖದ ವಿಸ್ಮಯಕರವಾದೊಂದು ಕಾಂತಿಯಿಂದ ಆ ಸ್ನೇಹದ ಪ್ರಕಟನೆಯಾಗುತ್ತಿತ್ತು. ಒಟ್ಟಿನಲ್ಲಿ ಎಲ್ಲ ರೀತಿಯಲ್ಲೂ ನಿನ್ನ ಪ್ರತಿ ಕೃತ್ಯದಿಂದ, ನಿನಗೆ ಖಲೀಫತುಲ್ ಮಸೀಹ್‌ರೊಡನೆ ಇರುವ ಪ್ರೀತಿ ಪ್ರಕಟವಾಗುತ್ತಿತ್ತು. ನಾನು ಬಹುಶಃ ಯಾರಲ್ಲೂ ಈ ಪ್ರೀತಿಯ ಪ್ರಕಟನೆಯನ್ನು ಕಂಡಿಲ್ಲ. ಈಗ ಕುಟುಂಬದ ಯುವಕರಲ್ಲಿ ನಾನು ಇಂತಹ ಪ್ರಕಟನೆಯನ್ನು ಕಾಣುತ್ತಿಲ್ಲವೆಂದು ಮನೆಯಲ್ಲಿ ಹೇಳುತ್ತಿದ್ದೆ. ಮಾತ್ರವಲ್ಲ ಬಹುಶಃ ದೊಡ್ಡವರಲ್ಲೂ ಕೆಲವರಲ್ಲಿ ಮಾತ್ರ ಇರಬಹುದು. ಹೃದಯಗಳ ಸ್ಥಿತಿ ಅಲ್ಲಾಹನೇ ಬಲ್ಲನು. ಈ ಘಟನೆಯ ನಂತರ ಈ ಮಟ್ಟದ ಹಲವರನ್ನು ಅಲ್ಲಾಹನು ತಯಾರು ಮಾಡಲಿ ಎಂದು ನಾನು ದುಆ ಮಾಡುತ್ತೇನೆ.

ತಾಲಿಅ್‌ರ ಸ್ಥಿತಿಯು ಅವರು ತನ್ನ ಪದ್ಯದಲ್ಲಿ ಪ್ರಸ್ತಾಪಿಸಿದಂತೆಯೇ ಆಗಿತ್ತು. ತನ್ನ ಪ್ರೀತಿಯನ್ನು ಬಯಲು ಮಾಡುತ್ತಿರಲಿಲ್ಲ. ಅದನ್ನು ರಹಸ್ಯವಾಗಿ ಇಡಲು ಬಯಸುತ್ತಿದ್ದರು. ಆದರೆ ಅದು ಅಡಗುತ್ತಿರಲಿಲ್ಲ. ಅಲ್ಲಾಹನು ಈ ಪ್ರೀತಿಯ ಸಂಬಂಧವನ್ನು ಯಾವುದಾದರೂ ರೀತಿಯಲ್ಲಿ ಅದನ್ನು ಬಯಲು ಮಾಡುತ್ತಿದ್ದನು. ಆದ್ದರಿಂದ ಅವರು ನನಗೆ ಬಹಳ ಪ್ರಿಯನಾಗಿದ್ದರು. ಖಲೀಫತುಲ್ ಮಸೀಹ್‌ರು ಏನಾದರೂ ನುಡಿದರೆ ಅದನ್ನು ತಕ್ಷಣ ಮಾಡುವ ಚಿಂತೆಯಲ್ಲಿರುತ್ತಿದ್ದನು. ಅದನ್ನು ಸ್ವತಃ ಮಾಡುವುದು ಮಾತ್ರವಲ್ಲ, ಬದಲಾಗಿ ಯಾವ ರೀತಿಯಲ್ಲಿ ಖಿಲಾಫತಿನ ಸ್ಥಾನದ ಬಗ್ಗೆ ಲೋಕಕ್ಕೆ ಹೇಳಿಕೊಡಬೇಕು ಎಂದು ಚಿಂತಿಸುತ್ತಿದ್ದನು. ಖಿಲಾಫತಿನ ಸಂರಕ್ಷಣೆಗಾಗಿ ಜೀವತ್ಯಾಗ ಮಾಡಬೇಕಾಗಿ ಬಂದರೆ ಜೀವವನ್ನು ಸಮರ್ಪಿಸಲು ತಯಾರಿದ್ದನು. ಅದಲ್ಲದೆ ತನ್ನ ಕೆಲಸದೊಂದಿಗೆ ಇಷ್ಟು ಪ್ರೀತಿ ಬಹಳ ಕಡಿಮೆ ವ್ಯಕ್ತಿಗಳಲ್ಲಿ ನೋಡಿದ್ದೇನೆ.

ತನ್ನ ಕೆಲಸ ತನಗೆ ಇಷ್ಟವಾದ ಕಾರಣದಿಂದ ಮಾತ್ರ ಅದನ್ನು ಪ್ರೀತಿಸುತ್ತಿರಲಿಲ್ಲ. ತನ್ನ ಕೆಲಸವನ್ನು ಪ್ರೀತಿಸುವ ಹಲವರು ಇರುತ್ತಾರೆ. ತಾಲಿಅ್‌ರಿಗೆ ತನ್ನ ಕೆಲಸದೊಂದಿಗೆ ಪ್ರೀತಿ ಇರಲು ಕಾರಣವೇನೆಂದರೆ, ಅದರ ಮೂಲಕ ಇಸ್ಲಾಂ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೀನನ್ನು ಸಂರಕ್ಷಿಸಬೇಕು ಮತ್ತು ಈ ಸಂದೇಶವನ್ನು ಲೋಕಕ್ಕೆ ತಲುಪಿಸಬೇಕು ಎಂಬುದಾಗಿತ್ತು. ಹಝ್ರತ್ ಮಸೀಹ್ ಮೌಊದ್(ರ) ಸಂದೇಶವನ್ನು ಲೋಕದೆಲ್ಲಡೆ ತಲುಪಿಸಬೇಕು ಮತ್ತು ಖಲೀಫತುಲ್ ಮಸೀಹ್‌ರ ಸಹಾಯಕನಾಗಬೇಕು ಎಂಬ ಕಾರಣದಿಂದ ತನ್ನ ಕೆಲಸವನ್ನು ಪ್ರೀತಿಸುತ್ತಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ಮಯ್ಯತ್ತನ್ನು ದಫನ್ ಮಾಡುವಾಗ, ಮಣ್ಣು ಹಾಕುವುದಕ್ಕೆ ಮುಂಚೆ ನಾನು ಖಬರಿನ ಮುಂದೆ ನಿಂತಿದ್ದಾಗ ನನ್ನ ಬಲಗಡೆ ಬಂದು ನಿಂತನು. ಯಾರು ಬಂದು ನಿಂತಿರುವನು ಎಂದು ನನಗೆ ಗೊತ್ತಿರಲಿಲ್ಲ. ಈಗ ನಾನು ಅದರ ಫೋಟೋ ನೋಡಿದಾಗ ಅವರು ಯಾರೆಂದೂ ಯಾವ ಸಂದರ್ಭವಾಗಿತ್ತೆಂದೂ ನನಗೆ ಅಂದಾಜಾಯಿತು. ಆ ಸಂದರ್ಭದಲ್ಲಿ ಹದಿಮೂರು ವರ್ಷ ಪ್ರಾಯದ ಆ ಹುಡುಗನು ಬಹುಶಃ ಹೀಗೆ ಪ್ರತಿಜ್ಞೆ ಮಾಡಿರಬಹುದು. "ನಾನು ಖಲೀಫತುಲ್ ಮಸೀಹ್‌ರ ಸಹಾಯಕನಾಗಬೇಕು" ಅವನು ಶಿಕ್ಷಣವನ್ನು ಪೂರ್ತಿ ಮಾಡಿದನು ಮತ್ತು ಹಲವಾರು ವರ್ಷಗಳ ನಂತರ ಈ ಪ್ರತಿಜ್ಞೆಯನ್ನು ನೆರವೇರಿಸಿದನು. ಬಹಳ ಉತ್ತಮವಾಗಿ ನಿಭಾಯಿಸಿದನು. ಜರ್ನಲಿಝ್ಮಿನಲ್ಲೂ ಅವನು ನನ್ನ ಸಲಹೆ ಪ್ರಕಾರ ದಾಖಲು ಪಡೆದಿದ್ದನು. ಅನಂತರ ತನ್ನ ಶಿಕ್ಷಣವನ್ನು ಪೂತಿ ಮಾಡಿದನು ಮತ್ತು "ನಾನು ಖಿಲಾಫತಿನ ನೈಜ ಸಹಾಯಕ"ನೆಂದು ಶಹೀದ್ ಆಗಿ ತೋರಿಸಿಕೊಟ್ಟನು.

ಹೇ ಪ್ರಿಯ ತಾಲಿಅ್, ನಾನು ಸಾಕ್ಷ್ಯವಹಿಸುತ್ತೇನೆ; ನೀನು ಖಂಡಿತವಾಗಿಯೂ ನಿನ್ನ ವಖ್ಫ್ ಮತು ಪ್ರತಿಜ್ಞೆಯ ಅತ್ಯುನ್ನತ ಮಟ್ಟವನ್ನು ಗಳಿಸಿದ್ದೀಯ.

ಅವರು ಖಲೀಫತುಲ್ ಮಸೀಹ್‌ರ ಮಾತುಗಳನ್ನು ಅನುಸರಿಸಲು ಎಷ್ಟು ಪ್ರಯತ್ನಿಸುತ್ತಿದ್ದರು ಎಂಬುದರ ಅಂದಾಜು ಈ ಸಂಗತಿಯಿಂದ ಆಗುತ್ತದೆ. ಅದೇನೆಂದರೆ, ಒಂದು ಗಂಟೆಯಷ್ಟು ಸಮಯ ತಹಜ್ಜುದ್ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕೆಂದು ನಾನು ಕೆಲವು ಮೀಟಿಂಗ್‌ಗಳಲ್ಲಿ ಮುರಬ್ಬಿಯರೊಂದಿಗೆ ಹೇಳಿದ್ದೆ. ಬೇಸಿಗೆಗಾಲದಲ್ಲಿ ರಾತ್ರಿ ಸಮಯ ಕಡಿಮೆಯಿರುವಾಗ ಹೇಗೆ ಇಷ್ಟು ಬೇಗ ಎದ್ದು ಒಂದು ಗಂಟೆಯಷ್ಟು ಸಮಯ ತಹಜ್ಜುದ್ ನಿರ್ವಹಿಸುವುದು ಎಂದು ಕೆಲವು ಮುರಬ್ಬಿಗಳು ಸವಾಲು ಮಾಡುವ ರೀತಿಯಲ್ಲಿ ತಾಲಿಹ್ ಸವಾಲು ಮಾಡಲಿಲ್ಲ. ಬದಲಾಗಿ ನಾನು ಹೇಳಿದಂತೆ ಮಾಡುವ ಪ್ರಯತ್ನವನ್ನು ಮಾಡಿದನು. ತಾಲಿಅ್‌ರ ಸ್ನೇಹಿತನಾದ ಒಬ್ಬ ಮುರಬ್ಬಿ ಒಂದು ದಿನ ಅವರು ಬಹಳ ದನಿದ್ದಾಗಿ ಕಂಡರು. ಅದಕ್ಕೆ ಕಾರಣವೇನೆಂದು ಅವರೊಡನೆ ಕೇಳಿದರು. ಆಗ ಅವರು ಹೇಳಿದರು: ಖಲೀಫತುಲ್ ಮಸೀಹ್‌ರು ಒಂದು ಗಂಟೆಯಷ್ಟು ತಹಜ್ಜುದ್ ನಿರ್ವಹಿಸಲು ಮುರಬ್ಬಿಯರೊಡನೆ ಹೇಳಿರುವರು. ನಾನು ವಖ್ಫ್ ಆಗಿರುವೆನು. ಆದ್ದರಿಂದ ಈ ಆದೇಶ ನನಗೂ ಆಗಿದೆ. ಇಂದು ತಹಜ್ಜುದ್ ನಿರ್ವಹಿಸಿದ ಕಾರಣ ನಿದ್ದೆ ಪೂರ್ತಿ ಮಾಡಲು ಸಾಧ್ಯವಾಗಲಿಲ್ಲ. ಆದರಿಂದ ದನಿದಿದ್ದೇನೆ. ಆ ಮುರಬ್ಬಿ ನನಗೆ ಹೀಗೆ ಬರೆದಿರುವರು: ತಾಲಿಹ್ ಸಾಹಿಬ್‌ರ ಈ ಮಾತು ನನ್ನನ್ನು ನಾಚಿಸಿತು; ಲಜ್ಜಿತನಾಗಿ ಮಾಡಿತು. ಮುರಬ್ಬಿಯಾದ ನಮ್ಮನ್ನು ನೇರವಾಗಿ ಸಂಬೋಧಿಸಲಾಗಿತ್ತು. ಆಗಿದ್ದರೂ ನಾನು ಖಲೀಫತುಲ್ ಮಸೀಹ್‌ರ ಮಾತನ್ನು ಈ ರೀತಿಯಲ್ಲಿ ಅನುಸರಿಸಲಿಲ್ಲ. ಆದರೆ ತಾಲಿಅ್ ಸಾಹಿಬ್‌ರು ಕೇವಲ ತನ್ನ ವಖ್ಫೇ ಝಿಂದಗಿ ಎಂಬ ಪ್ರತಿಜ್ಞೆಯನ್ನು ನಿಭಾಯಿಸಲು ಖಲೀಫತುಲ್ ಮಸೀಹ್‌ರ ಮಾತಿನಂತೆ ನಡೆದರು. ಇದಾಗಿತ್ತು ತಾಲಿಅ್ ಸಾಹಿಬ್‌ರ ಪ್ರತಿಜ್ಞೆ ನೆರವೇರಿಕೆಯ ಮಟ್ಟ.

ಒಟ್ಟಿನಲ್ಲಿ ಅವರು ವಖ್ಫೇ ಝಿಂದಗಿಗಳಿಗೆ ಮಾದರಿಯಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದ ಒಬ್ಬ ವ್ಯಕ್ತಿ ಎಂಬ ನೆಲೆಯಲ್ಲಿ, ಹಝ್ರತ್ ಮಸೀಹ್ ಮೌಊದ್‌ರ ಕುಟುಂಬದ ಸದಸ್ಯರಿಗೂ ನಿಷ್ಠೆ ಮತ್ತು ಪ್ರಾಮಾಣಿಕತೆಯ ಮಾದರಿಯನ್ನು ಸ್ಥಾಪಿಸಿದರು. ಯಾವ ಮಟ್ಟದ ವರೆಗೆ ಈ ಮಾದರಿಯ ಪ್ರಕಾರ ನಡೆದು ಹಝ್ರತ್ ಮಸೀಹ್ ಮೌಊದ್‌ರೊಡನೆ(ರ) ಇರುವ ಸಂಬಂಧದ ಹಕ್ಕನ್ನು ಈಡೇರಿಸುವರು ಎಂಬುವುದು ಈಗ ಹಝ್ರತ್ ಮಸೀಹ್ ಮೌಊದ್‌ರ ಕುಟುಂಬದ ಸದಸ್ಯರಿಗೆ ಬಿಟ್ಟದ್ದು. ಕುಟುಂಬದ ಗೌರವ ಅಥವಾ ದೈಹಿಕ ಸಂಬಂಧದಿಂದ ಯಾವುದೇ ಪದವಿ ಸಿಗುವುದಿಲ್ಲ. ಅವರನ್ನು ಯಾರಾದರೂ ಗೌರವಿಸುವುದಾದರೆ ಅವರ ಭೌತಿಕತೆಯ ಕಾರಣದಿಂದ ಗೌರವಿಸುತ್ತಿಲ್ಲ. ಅದು ಎಂದಿಗೂ ಸಿಗುವುದಿಲ್ಲ. ಧರ್ಮದ ಸೇವಕನಾಗುವುದರಲ್ಲಿ, ದೀನಿಗೆ ಲೌಕಿಕತೆಯ ಮೇಲೆ ಆದ್ಯತೆ ನೀಡುವುದರಲ್ಲೇ ಯಥಾರ್ಥ ಗೌರವವಿರುವುದು. ಇಲ್ಲದಿದ್ದರೆ, ಲೌಕಿಕರಲ್ಲಿ ಕೋಟಿಗಟ್ಟಲೆ ಜನರು ಸಾಂಪತ್ತಿಕವಾಗಿ ಅವರಿಗಿಂತ ಉತ್ತಮರಾಗಿರುವರು. ಆದ್ದರಿಂದ ಲೌಕಿಕರ ಬಳಿ ಸಹ ಅವರಿಗೆ ಯಾವುದೇ ಗೌರವವಿಲ್ಲ. ಒಟ್ಟಿನಲ್ಲಿ, ನಾನು ಹಝ್ರತ್ ಮಸೀಹ್ ಮೌಊದ್‌ರ(ಅ) ಕುಟುಂಬದ ಸದಸ್ಯರೊಡನೆ ಸಹ ಹೇಳುತ್ತೇನೆ: ಅಗಲಿಹೋದ ಈ ವ್ಯಕ್ತಿಯಿಂದ ಪಾಠ ಕಲಿಯಿರಿ. ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಮುಂದಾಗಿರಿ. ಯಾವ ರೀತಿಯಲ್ಲಿ ಈ ನಿಷ್ಠೆಯ ಮೂರ್ತೀರೂಪವಾದ ತಾಲಿಹ್ ಸಾಹಿಬ್‌ರು ತನ್ನ ಪ್ರತಿಜ್ಞೆಯನ್ನು ನಿಭಾಯಿಸಿದರು, ದೀನಿಗೆ ಲೌಕಿಕತೆಗಿಂತ ಪ್ರಾಮುಖ್ಯತೆ ನೀಡಿದರು, ಕುಟುಂಬದ ಇತರ ಸದಸ್ಯರು ಸಹ ಈ ಮಾದರಿಯನ್ನು ನೋಡಿರಿ. ಇದೇ ಗೌರವದ ಸಂಗತಿಯಾಗಿದೆ. ಅಲ್ಲಾಹನ ಅನುಗ್ರಹವನ್ನು ಗಳಿಸುವಂತದ್ದಾಗಿದೆ. ಲೌಕಿಕತೆ ಮತ್ತು ಭೌತಿಕವಾದ ಅಭಿಲಾಷೆಗಳು ಹಝ್ರತ್ ಮಸೀಹ್ ಮೌಊದ್‌ರ(ಅ) ಕುಟುಂಬಕ್ಕೆ ಸಾಮಾನ್ಯವಾದ ಬೆಲೆಯನ್ನು ಸಹ ನೀಡುವುದಿಲ್ಲ. ತನ್ನ ಸ್ವಂತ ಕೃತ್ಯಗಳು ಸರಿಯಲ್ಲವಾದರೆ, ಯಾವುದಾದರೂ ಹಿರಿಯ ವ್ಯಕ್ತಿಯ ಪುತ್ರ ಅಥವಾ ಪುತ್ರಿಯಾಗುವುದು ಹೆಮ್ಮೆಯ ಸಂಗತಿಯೇನಲ್ಲ.

ನಾನು ಹೇಳಿದಂತೆ ಅವರು ವಖ್ಫೇ ಝಿಂದಗಿಗಳಿಗೆ ಆಶ್ಚರ್ಯಕರವಾದ ಮಾದರಿಯಾಗಿದ್ದರು. ಹಣದ ಕೊರತೆ ಅಥವಾ ಅಲವನ್ಸ್ ಕಡಿಮೆಯಿರುವುದರ ಬಗ್ಗೆ ಅವರು ಎಂದಿಗೂ ದೂರುತ್ತಿರಲಿಲ್ಲ. ಸಿಗುವುದರಲ್ಲೇ ಕೃತಜ್ಞತೆಯಿಂದ ಜೀವನ ಸಾಗಿಸುತ್ತಿದ್ದರು. ಎಲ್ಲಿಂದಾದರೂ ಹೆಚ್ಚಿನ ಆದಾಯ ಸಿಕ್ಕಿದರೆ ಕೃತಜ್ಞತೆಯ ಭಾವದೊಂದಿಗೆ ಇರುತ್ತಿದ್ದರು. "ನನಗೆ ದಾರಿದ್ರ್ಯವನ್ನು ನೀಡಬೇಡ ಎಂದೇ ಅವರು ದುಆ ಮಾಡುತ್ತಿದ್ದರು. ಅಲ್ಲಾಹನು ಸಹ ಅವರಿಗೆ ಧನಪರವಾದ ಕಷ್ಟತೆಯನ್ನು ಕೊಡಲಿಲ್ಲ. ಕರಾರುವಕ್ಕಾಗಿ ಉಪವಾಸ ಇರಿಸುತ್ತಿದ್ದರು. ಅನೇಕ ವಿಶಿಷ್ಟ ಗುಣಗಳು ಅವರಲ್ಲಿತ್ತು. ನನಗೆ ತಾಝಿಯತಿನ ಪತ್ರವನ್ನು ಬರೆಯುವವರು ನನಗೆ ಅವರ ಅನೇಕ ಗುಣಗಳ ಬಗ್ಗೆ ಹೇಳಿರುವರು. ಅವರು ನನ್ನ ನಿಕಟ ಸ್ನೇಹಿತರಾಗಿದ್ದರು ಎಂದೆಲ್ಲ ಬರೆದಿರುವರು. ನನ್ನನ್ನು ಆಶ್ಚರ್ಯಪಡಿಸುವ ಅನೇಕ ವೈಶಿಷ್ಟ್ಯಗಳನ್ನು ಹೊಂದಿದ್ದರು. ನಾನು ಅವರ ನಿಷ್ಠೆಯನ್ನು ಸ್ವಲ್ಪಮಟ್ಟಿಗೆ ತಿಳಿದಿದ್ದೆ. ಆದರೆ ಅವರ ಒಳಿತು ಮತ್ತು ದೇವಭಕ್ತಿಯ ಮಟ್ಟ ಬಹಳಷ್ಟು ಉನ್ನತವಾಗಿತ್ತು. ಆದ್ದರಿಂದ ಅವರ ಜೀವನದ ಬಗ್ಗೆ ಜನರು ಹೇಳಿದ ಮಾತುಗಳಲ್ಲೇ ಕೆಲವು ಸಂಗತಿಗಳನ್ನು ನಿಮ್ಮ ಮುಂದೆ ಇರಿಸುವುದೇ ಸರಿ. ಅವುಗಳಲ್ಲಿ ಅವರ ಪತ್ನಿ, ತಂದೆ ತಾಯಿ, ಸಹೋದರ ಸಹೋದರಿ ಮತ್ತು ಸ್ನೇಹಿತರ ಅನಿಸಿಕೆಗಳು ಇವೆ. ಸತ್ಯಾಧಾರಿತ ಕೆಲವು ಘಟನೆಗಳಿವೆ.

ರಿವ್ಯೂ ಆಫ್ ರಿಲೀಜಿಯನ್ಸಿನ ಸಂಪಾದಕ ಆಮಿರ್ ಸಫೀರ್ ಸಾಹಿಬ್‌ರು ಹೇಳುತ್ತಾರೆ: 4 ವರ್ಷಗಳ ಕಾಲ ತಾಲಿಅ್ ಸಾಹಿಬ್‌ರು ರಿವ್ಯೂಯಲ್ಲಿ ಕೆಲಸ ಮಾಡಿದ್ದರು. ಇಂಡೆಕ್ಸಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಆರ್ಕೈವ್ ಟೇಕಿಂಗ್ ಪ್ರೋಜೆಕ್ಟ್‌ನಲ್ಲಿ ಸೂಪರ್‌ವೈಸರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಅವರು ಈ ಬಹಳ ದೊಡ್ಡ ಜವಾಬ್ದಾರಿಯನ್ನು ಈಡೇರಿಸಿದ್ದರು. ರಿವ್ಯು ಆಫ್ ರಿಲಿಜಿಯನ್ಸಿನ ನೂರು ವರ್ಷಗಳಿಗಿಂತ ಹೆಚ್ಚಿನ ಕಾಲದ ಇಂಡೆಕ್ಸ್ ತಯಾರು ಮಾಡುವುದು, ಬೇರೆ ಬೇರೆ ಕೆಟಗರಿಗಳ ವಿಷಯಸೂಚಿಕೆಯನ್ನು ತಯಾರು ಮಾಡುವುದು, ಬೇರೆ ಬೇರೆ ಶೀರ್ಷಿಕೆಗಳಲ್ಲಿ ವಿಷಯಗಳನ್ನು ಕ್ರಮಪಡಿಸುವುದು, ಬಹಳ ದೊಡ್ಡ ಕೆಲಸವಾಗಿತ್ತು. ಅದನ್ನು ಅವರು ಬಹಳ ಪರಿಶ್ರಮ ಮತ್ತು ಮಗ್ನತೆಯಿಂದ ಮಾಡಿದರು. ಇದು 11 ವ್ಯಕ್ತಿಗಳನ್ನು ಹೊಂದಿದ್ದ ಒಂದು ಟೀಮಾಗಿತ್ತು. ಬಹಳ ಪರಿಶ್ರಮಬೇಕಾದ ಕೆಲಸವಾಗಿತ್ತು. ಅಲ್ಲಾಹನ

ಅನುಗ್ರಹದಿಂದ ಎಲ್ಲರೂ ಅದನ್ನು ಮಾಡಿ ಮುಗಿಸಿದರು. ಅದರ ಮೇಲ್ನೋಟವನ್ನು ತಾಲಿಅ್ ಸಾಹಿಬ್‌ರು ವಹಿಸಿದರು. ತಾಲಿಅ್ ಬಹಳಷ್ಟು ಯೋಗ್ಯತೆಗಳನ್ನು ಹೊಂದಿದ್ದರು ಎಂದು ನಾನು ಕಣ್ಣಾರೆ ನೋಡಿದ್ದೇನೆ. ವ್ಯವಸ್ಥೆಗೆ ಸಂಬಂಧಿಸಿದ ಕೆಲಸಗಳನ್ನು ಬಹಳ ಉತ್ತಮವಾಗಿ ಮಾಡುತ್ತಿದ್ದರು. ಸೇವೆಯ ಬಹಳಷ್ಟು ಆವೇಶವಿತ್ತು. ಖಿಲಾಫತಿನೊಂದಿಗೆ ಅಪರಿಮಿತವಾದ ನಿಷ್ಠೆ ಮತ್ತು ಪ್ರೀತಿಯಿತ್ತು. ಅವರು ಯಾವುದಾದರೂ ಪ್ರೋಜೆಕ್ಟನ್ನು ಶೂನ್ಯದಿಂದ ಶುರುಮಾಡುತ್ತಿದ್ದರು ಮತ್ತು ಅದನ್ನು ಹೆಮ್ಮೆಪಡುವಂತಹ ಸಂಗತಿಯನ್ನಾಗಿ ಮಾಡುತ್ತಿದ್ದರು ಎಂಬ ಒಂದು ಗುಣವನ್ನೂ ನಾನು ಅವರಲ್ಲಿ ನೋಡಿದ್ದೇನೆ. ಕೆಲಸ ಮಾಡಲು ಯಾರಾದರು ಹುರಿದುಂಬಿಸಲು ಅಥವಾ ನೆನಪಿಸಲು ಕಾಯುತ್ತಿರಲಿಲ್ಲ. ಒಬ್ಬ ಆವೇಶಭರಿತ ವ್ಯಕ್ತಿಯ ಹಾಗೆ ಮುಂದೆ ಬಂದು ಕೆಲಸ ಮಾಡುತ್ತಿದ್ದರು ಹುಚ್ಚಿನ ಮಟ್ಟಿಗೆ ದೃಢನಿರ್ಧಾರ ಮತ್ತು ನಿಷ್ಠೆಯ ಭಾವದಿಂದ ದೀನಿನ ಕೆಲಸವನ್ನು ಮಾಡುತ್ತಾರೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಯಾರ ಬಗ್ಗೆ ಹೇಳಿದ್ದರೋ ಅವರಲ್ಲಿ ಸೇರಿದವರಾಗಿದ್ದರು ತಾಲಿಅ್ ಸಾಹಿಬ್‌ರು. ತಾಲಿಅ್ ಸಾಹಿಬ್‌ರಿಗೆ ಲೋಕದ ಪರಿವೆಯಿರಲಿಲ್ಲ. ಜಮಾಅತ್ ಮತ್ತು ಖಿಲಾಫತಿಗಾಗಿ ಸೇವೆ ಸಲ್ಲಿಸುವ ಸೌಭಾಗ್ಯ ಸಿಗುವುದೇ ಅವರಿಗೆ ಎಲ್ಲವೂ ಆಗಿತ್ತು. ನಾನು ಅವರ ಬಗ್ಗೆ ನೋಡಿದುವುದರ ಸಂಕ್ಷೇಪವೇನೆಂದರೆ, ಅವರ ಎಲ್ಲವೂ ಖಿಲಾಫತಿನ ಸುತ್ತ ಸುತ್ತುತ್ತಿತ್ತು. ಖಲೀಫತುಲ್ ಮಸೀಹ್‌ರೊಂದಿಗೆ ಅವರಿಗೆ ಒಂದು ವೈಯಕ್ತಿಕ ಸಂಬಂಧವಿತ್ತು. ನಾನು ಅವರಿಗೆ ಖಲೀಫತುಲ್ ಮಸೀಹ್‌ರ ನಿರ್ದೇಶನವನ್ನು ತಲುಪಿಸುವಾಗ ಅವರು ಕಲ್ಲಿನಂತೆ ನಿಂತುಕೊಂಡು, ಮಗು ಕ್ಯಾಂಡಿಯ ಕಡೆಗೆ ನೋಡುವ ಹಾಗೆ ಕಣ್ಣುಗಳನ್ನು ಪೂರ್ಣವಾಗಿ ತೆರೆದು ಗಮನವಿಟ್ಟು ಅದನ್ನು ಕೇಳುತ್ತಿದ್ದರು. ಅನಂತರ ಆ ನಿರ್ದೇಶನವನ್ನು ತಲುಪಿಸಿದ್ದಕ್ಕಾಗಿ ನನಗೆ ಕೃತಜ್ಞತೆ ಸಹ ಅರ್ಪಿಸುತ್ತಿದ್ದರು. ಒಂದು ಡೊಕ್ಯುಮೆಂಟರಿಗೆ ಬದಲಾಗಿ ಎರಡೆರಡು ಡೊಕ್ಯೂಮೆಂಟರಿಗಳ ಮೇಲೆ ಕೆಲಸ ಮಾಡುತ್ತಿದ್ದರು. ಎರಡು ಡೊಕ್ಯೂಮೆಂಟರಿಗಳಲ್ಲಿ ಹೇಗೆ ಕೆಲಸ ಮಾಡುವುದು ಎಂದು ನಾನು ಅಚ್ಚರಿಪಡುತ್ತಿದ್ದೆ. ತಾಲಿಅ್ ಸಾಹಿಬ್‌ರು ಯಾವ ಡೊಕ್ಯುಮೆಂಟರಿಯ ಮೇಲೆ ಕೆಲಸಮಾಡುತ್ತಿದ್ದಾರೆ ಎಂದು ನಮಗೆ ಗೊತ್ತಾಗುತ್ತಿರಲಿಲ್ಲ. ನಮಗೆ ಸರ್ಪ್ರೈಝ್ ಕೊಡಲು ಬಯಸುತ್ತಿದ್ದರು. ತಾಲಿಅ್ ಸಾಹಿಬ್ ಅನ್ವೇಷಣೆ ಮತ್ತು ಶೋಧನೆ ನಡೆಸುವ ರೀತಿಯ ಬಹಳ ಉನ್ನತವಾಗಿತ್ತು.

ತಾಲಿಅ್ ಸಾಹಿಬ್‌ರ ಮತ್ತೊಂದು ಗುಣವೇನಾಗಿತ್ತು ಎಂದರೆ, ಸದಾ ತನ್ನ ಕುಟುಂಬದವರು ಮತ್ತು ಸಂಬಂಧಿಕರು ಜಮಾಅತಿನೊಂದಿಗೆ ಸೇರಿಕೊಂಡಿರುವುದಾಗಿಯೂ ಜಮಾಅತಿನ ಸೇವೆ ಮಾಡುತ್ತಿರುವುದಾಗಿಯೂ ನೋಡಲು ಬಯಸುತ್ತಿದ್ದರು. ಸಂಬಂಧಿಕರಲ್ಲಿ ಒಬ್ಬರು ಈ ಸಲದ ರಿವ್ಯೂದಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದು ಅವರೊಡನೆ ಹೇಳಿದರೆ, ಅವರು ತುಂಬ ಖುಶಿಪಡುತ್ತಿದ್ದರು.

ಯು.ಕೆ.ಯ ಖುದ್ದಾಮುಲ್ ಅಹ್ಮದಿಯ ಸದರ್ ಆದ ಖುದ್ದೂಸ್ ಆರಿಫ್ ಸಾಹಿಬ್ ಹೇಳುತ್ತಾರೆ: ಚಿಕ್ಕಂದಿನಿಂದ ನನಗೆ ಅವರೊಂದಿಗೆ ಸಂಬಂಧವಿತ್ತು. ಅವರು ಹಝ್ರತ್ ಮಲಿಕ್ ಗುಲಾಂ ಫರೀದ್ ಸಾಹಿಬ್‌ರ ಶಾರ್ಟ್ ಕಮೆಂಟರಿ ಓದಿದ್ದರು. ಮಾತ್ರವಲ್ಲ ಅದರಲ್ಲಿ ಪೆನ್ನಿನಿಂದ ಹಲವೆಡೆ ಮಾರ್ಕ್ ಮಾಡಿದ್ದರು ಹಾಗೂ ಪವಿತ್ರ ಖುರ್‌ಆನಿನ ಫೈ ವಾಲ್ಯುಂ ಕಮೆಂಟರಿಯನ್ನು ಬಹಳ ವಿಶದವಾಗಿ ಓದಿದ್ದರು. ಅನೇಕ ವಚನಗಳನ್ನು ಹೈಲೈಟ್ ಮಾಡಿದ್ದರು ಮತ್ತು ಚೀಟಿಗಳನ್ನು ಅಂಟಿಸಿದ್ದರು.

ಫೈ ವಾಲ್ಯುಂ ಕಮೆಂಟರಿ ಓದಿದ್ದ ಬಗ್ಗೆ ನಾನು ಸ್ವಲ್ಪ ವಿವರಿಸುತ್ತೇನೆ. ತಾಲಿಅ್ ಸಾಹಿಬ್‌ರು ಬಿ.ಎಸ್.ಸಿ ಮಾಡಿದ ನಂತರ ಒಂದು ವರ್ಷ ಗ್ಯಾಪ್ ಮಾಡಿದರು. ಆಗ ನಾನು ವಖ್ಫೇ ನೌ ಕ್ಲಾಸಿನಲ್ಲೂ ಅನಂತರ ಬಹುಶಃ ಆಫೀಸಿಗೆ ಬಂದು ಭೇಟಿಯಾದಾಗಲೂ ಫೈ ವಾಲ್ಯುಂ ಕಮೆಂಟರಿ ಓದಲು ನಾನು ತಾಲಿಅ್‌ರೊಡನೆ ಹೇಳಿದ್ದೆ. ಕೆಲವು ವರ್ಷಗಳಲ್ಲಿ ಮುಗಿಸುವರು ಎಂದು ನಾನು ಭಾವಿಸಿದ್ದೆ. ಆದರೆ ಕೆಲವು ತಿಂಗಳಲ್ಲೇ ಅದನ್ನು ಪೂರ್ಣವಾಗಿ ಓದಿ ಮುಗಿಸಿದಾಗಿ ನನಗೆ ಬಂದು ಹೇಳಿದರು. ಇದನ್ನು ಕೇಳಿ ನನಗೆ ಈಗಲೂ ಆಶ್ಚರ್ಯವಾಗುತ್ತದೆ. ಅದೇ ರೀತಿಯಲ್ಲಿ ಯುವಕರು ಇಷ್ಟಪಡುವಂತಹ ಡೊಕ್ಯುಮೆಂಟರಿಗಳನ್ನು ಅವರು ತಯಾರಿಸುತ್ತಿದ್ದರು. ಉದಾಹರಣೆಗೆ ಫುಟ್‌ಬಾಲ್ ಕುರಿತು ಡೊಕ್ಯುಮೆಂಟರಿ ಮಾಡಿದರು. ಅದರಲ್ಲಿ ತರಬೇತಿ ವಿಷಯಕ್ಕೆ ಪ್ರಾಮುಖ್ಯತೆ ನೀಡಿದರು.

ಎಂ.ಟಿ.ಎ.ಗಾಗಿ ಅವರು ತಯಾರಿಸಿದ ಡೊಕ್ಯುಮೆಂಟರಿಗಳು ಬಹಳ ಉತ್ತಮವಾದುದಾಗಿವೆ. ಖುದ್ದೂಸ್ ಸಾಹಿಬ್‌ರು ಹೇಳುತ್ತಾರೆ: ನನಗೆ ನೆನಪಿದೆ, brutality and justice true trials in a time ಎಂಬ ಡೊಕ್ಯುಮೆಂಟರಿ ಪ್ರಸಾರವಾದಾಗ ಅದು ಬಹಳ ವಿಶ್ವಾಸವರ್ಧಕವಾಗಿತ್ತು ಎಂದು ನಾನು ತಾಲಿಅ್ ಸಾಹಿಬ್‌ರಿಗೆ ಮೆಸೇಜ್ ಮಾಡಿದೆ. ತಾಲಿಅ್ ಸಾಹಿಬ್‌ರು ಬಹಳ ವಿನಯದಿಂದ ಹೀಗೆ ಜವಾಬು ನೀಡಿದರು: ನಮ್ಮನ್ನು ದುಆಗಳಲ್ಲಿ ನೆನಪಿಡಿರಿ, ಇವೆಲ್ಲ ಅಲ್ಲಾಹನ ಅನುಗ್ರಹವಾಗಿದೆ. ಟ್ವಿಟರ್‌ನಲ್ಲಿ ಯಾರೋ ಡೊಕ್ಯುಮೆಂಟರಿಯ ಹೆಸರಿನ ಬಗ್ಗೆ ಆಕ್ಷೇಪವೆತ್ತಿದರು. ತಾಲಿಅ್ ಸಾಹಿಬ್‌ರು ಅದಕ್ಕೆ ಉತ್ತರಕೊಟ್ಟರು. ತಾಲಿಅ್ ಸಾಹಿಬ್‌ರು ಇದರ ಬಗ್ಗೆ ಹೀಗೆ ಹೇಳುತ್ತಿದ್ದರು: ಈ ಹೆಸರು ಖಲೀಫತುಲ್ ಮಸೀಹ್‌ರು ಸ್ವತಃ ಮಂಜೂರು ಮಾಡಿದ್ದರು. ಆದ್ದರಿಂದ ನಾನು ಅದನ್ನು ಡಿಫೆಂಡ್ ಮಾಡಿದೆ. ನನ್ನ ಕಡೆಯಿಂದ ಅಥವಾ ಆಬಿದ್ ಸಾಹಿಬ್ ಕಡೆಯಿಂದ ಈ ಹೆಸರು ಹಾಕಲಾಗಿದ್ದರೆ, ನಾನು ಏನೂ ಹೇಳಲು ಹೋಗುತ್ತಿರಲಿಲ್ಲ. ಆದರೆ ಇದನ್ನು ಖಲೀಫತುಲ್ ಮಸೀಹರು ಮಂಜೂರು ಮಾಡಿರುವುದರಿಂದ ಹೇಗಿದ್ದರೂ ನಾನು ಅದಕ್ಕೆ ವಿವರಣೆ ಕೊಡಬೇಕಾಗುತ್ತಿತ್ತು. ಖುದ್ದೂಸ್ ಸಾಹಿಬ್ ಹೇಳುತ್ತಾರೆ: ಕಳೆದ ವರ್ಷ ವಿರ್ಚುವಲ್ ಅತ್‌ಫಾಲ್ ರ್‍ಯಾಲಿಯಲ್ಲಿ ನಾನು ಮುಹ್‌ತಮಿಂ ಅತ್‌ಫಾಲ್ ಮುಖಾಂತರ ತಾಲಿಅ್ ಸಾಹಿಬ್‌ರೊಡನೆ ಖಲೀಫತುಲ್ ಮಸೀಹ್‌ರೊಂದಿಗೆ ಸಂಬಂಧಪಟ್ಟು ತನ್ನ ಕೆಲವು ಅನುಭವಗಳನ್ನು ಮುಂದಿರಿಸಲು ವಿನಂತಿಸಿದೆ. ಮೊದಲು ಅವರು ಅದನ್ನು ಸಮ್ಮತಿಸಲಿಲ್ಲ. ಅನಂತರ ನಾನು ಮಜ್ಲಿಸಿನ ಸದರ್ ಎಂಬ ನೆಲೆಯಲ್ಲಿ ಹೇಳಿದಾಗ ಸಮ್ಮತಿಸಿದರು. ಹೇಗಿದ್ದರೂ ಆ ಘಟನೆಗಳನ್ನು ಹೇಳುವ ಪ್ರೋಗ್ರಾಂ ಸಹ ಎಲ್ಲರಿಗೂ ಇಷ್ಟವಾಯಿತು. ಅತ್‌ಫಾಲರು ಅದನ್ನು ಬಹಳ ಇಷ್ಟಪಟ್ಟರು. ತಾಲಿಅ್ ಸಾಹಿಬ್‌ರು ನನಗೆ ಅನಂತರ ಹೀಗೆ ಮೆಸೇಜ್ ಮಾಡಿದರು: ನನ್ನ ಸುಧಾರಣೆಯಾಗಲಿ ಎಂದು ನಾನು ಉದ್ದೇಶಿಸಿದ್ದೆ. ಜನರಿಗೆ ಉಪದೇಶಿಸುವಷ್ಟು ನನ್ನ ಸುಧಾರಣೆಯಾಗಿಲ್ಲ ಎಂದು ನಾನು ಭಾವಿಸುತ್ತಿದ್ದೆ ಅಥವಾ ವಯಸ್ಸಾಗಿ ಮರಣದ ಸಮೀಪವಾಗುವಾಗ ಈ ಘಟನೆಗಳನ್ನು ಹೇಳುವೆನು ಎಂದು ಬಯಸಿದ್ದೆ. ಮೌನವಾಗಿ ಕಾಲವನ್ನು ಕಳೆಯಬೇಕೆಂದಾಗಿತ್ತು ನನ್ನ ಇಚ್ಛೆ. ಆದರೆ ನೀನು ನನ್ನಿಂದ ಹೇಳಿಸಿದೆ. ಆದರೆ ಅವರಿಂದ ಈ ಘಟನೆಗಳನ್ನು ಹೇಳಿಸುವ ಸಮಯ ಅದೇ ಆಗಿತ್ತು ಎಂದು ಅಲ್ಲಾಹನಿಗೆ ಗೊತ್ತಿತ್ತು.

ಅವರ ಪತ್ನಿಯಾದ ಸುತ್ವತ್ ಸಾಹಿಬ ಹೇಳುತ್ತಾರೆ: ಬಹಳ ಪ್ರೀತಿಸುವ, ನನ್ನೊಂದಿಗೂ ಮಕ್ಕಳೊಂದಿಗೂ ಬಹಳ ವಾತ್ಸಲ್ಯದಿಂದ ವರ್ತಿಸುವ ಪತಿಯಾಗಿದ್ದರು. ಬಹಳ ಕರುಣೆಯನ್ನು ತೋರಿಸುತ್ತಿದ್ದರು. ಸಣ್ಣ ಸಣ್ಣ ಸಂಗತಿಗಳನ್ನು ಅಪ್ರಿಶಿಯೇಟ್ ಮಾಡುತ್ತಿದ್ದರು. ಊಟ ಹೇಗಿದ್ದರೂ ಅದನ್ನು ಇಷ್ಟಪಡುತ್ತಿದ್ದರು. ನನ್ನ ತಂದೆಯ ಶಹಾದತಿನ ನಂತರ ನಾನು ಸ್ವಲ್ಪ ಚಿಂತೆಯಲ್ಲಿ ಇರುತ್ತಿದ್ದೆ. ನಂತರ ಬೇಗನೇ ಎಂಗೇಜ್‌ಮೆಂಟ್ ಸಹ ಆಯಿತು. ತಂದೆಯಿಲ್ಲದ ಕಾರಣ ನನಗೆ ಬಹಳ ಬೇಸರವಿತ್ತು. ಆದರೆ ವಿವಾಹದ ನಂತರ ತಾಲಿಅ್ ನನ್ನ ಬಹಳ ಕಾಳಜಿವಹಿಸಿದರು. ಹಝ್ರತ್ ಪೈಗಂಬರರೊಡನೆ(ಸ) ಅವರಿಗೆ ಎಷ್ಟು ಪ್ರೀತಿಯಿದೆ ಎಂದು ನಾನು ಎಂಗೇಜ್‌ಮೆಂಟ್ ನಂತರ ಯೋಚಿಸುತ್ತಿದ್ದೆ. ಯುವಕರಾಗಿದ್ದರು ಆದರೆ ಹಝ್ರತ್ ಪೈಗಂಬರರ(ರ) ಬಗ್ಗೆ ಪ್ರಸ್ತಾಪಿಸುವಾಗ ಅವರು ಮಕ್ಕಳ ಹಾಗೆ ಅಳುತ್ತಿದ್ದರು. ಮಗನಾದ ತಲಾಲ್‌ನಿಗೆ ಹಝ್ರತ್ ಪೈಗಂಬರರ(ಸ) ಕಥೆಗಳನ್ನು ಹೇಳಿಕೊಡುವಾಗ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಹಝ್ರತ್ ಪೈಗಂಬರರ(ಸ) ಕುರಿತು ಅನೇಕ ಘಟನೆಗಳು ಅವರಿಗೆ ಗೊತ್ತಿತ್ತು. ಅವುಗಳನ್ನು ಕಂಠಪಾಠ ಮಾಡಿದ್ದರು ಎಂದು ಹೇಳಬಹುದು. ಚರಿತ್ರೆ ಮತ್ತು ಹಝ್ರತ್ ಪೈಗಂಬರರ(ಸ) ಜೀವನದ ಬಗ್ಗೆ ಬಹಳ ಆಳವಾದ ಅರಿವು ಇತ್ತು ಎಂದು ಹಲವರು ನನಗೆ ಬರೆದಿರುವರು. ಮಗನು ಕ್ರೈಸ್ತರ ಸ್ಕೂಲಿನಲ್ಲಿ ಕಲಿಯುತ್ತಿದ್ದ ಕಾರಣದಿಂದ ಅವನನ್ನು ಸ್ಕೂಲಿಗೆ ಕೊಂಡುಹೋಗುವಾಗ ಸೂರಃ ಇಖ್ಲಾಸ್ ಓದಿಸುತ್ತಿದ್ದರು. ಮಗನೊಡನೆ ಅದನ್ನು ಪುನರಾವರ್ತಿಸಲು ಹೇಳುತ್ತಿದ್ದರು. ಖಲೀಫತುಲ್ ಮಸೀಹ್‌ರೊಡನೆ ಪ್ರೀತಿ ಸಹ ಬಹಳವಿತ್ತು. ಅದರ ಬಹಳ ಅಭಿಮಾನ ಸಹ ಇತ್ತು. ಕೆಲವು ಸಣ್ಣ ಸಣ್ಣ ಮಾತುಗಳು ಇರುತ್ತವೆ. ಆದರೆ ಅದರಿಂದ ಅವರ ನಿಷ್ಠೆಯ ಬಗ್ಗೆ ಗೊತ್ತಾಗುತ್ತದೆ.

ಖಲೀಫತುಲ್ ಮಸೀಹ್ ಅವರೊಡನೆ ಅಥವಾ ಅವರ ಮಗನೊಡನೆ ಸಂತೋಷಗೊಂಡಿರುವರು ಎಂದು ತಿಳಿದರೆ ಬಹಳ ಹೆಚ್ಚು ಖುಶಿಪಡುತ್ತಿದ್ದರು. ಖಲೀಫರನ್ನು ಭೇಟಿಯಾದ ನಂತರ ಸದಾ ಟ್ರೀಟ್ ಮಾಡುತ್ತಿದ್ದರು. ಬಹಳ ಒಳ್ಳೆಯ ಮಗನಾಗಿ ನೀನು ಅಲ್ಲಿದ್ದೆ ಎಂದು ಮಗನಿಗೆ ಚಾಕ್‌ಲೇಟ್ ನೀಡುತ್ತಿದ್ದರು ಅಥವಾ ಐಸ್‌ಕ್ರೀಂ ಇತ್ಯಾದಿ ನೀಡುತ್ತಿದ್ದರು. ಖಲೀಫರ ಮುಂದೆ ನೀನು ಇಂದು ಬಹಳ ಉತ್ತಮವಾಗಿ ನೀನು ವರ್ತಿಸಿದ್ದೆ ಅಥವಾ ಖಲೀಫರೊಂದಿಗೆ ನಮ್ಮ ಭೇಟಿ ಬಹಳ ಉತ್ತಮವಾಗಿತ್ತು ಎಂಬ ಸಣ್ಣ ಸಣ್ಣ ಸಂಗತಿಗೂ ಸಂತೋಷಪಡುತ್ತಿದ್ದರು. ಖಲೀಫರು ಅವರ ಯಾವುದಾದರೂ ಸಂಗತಿಯ ಕಾರಣದಿಂದ ಬೇಸರಗೊಂಡಿರುವರು ಎಂದು ಅವರಿಗೆ ಅನಿಸಿದರೆ ತಹಜ್ಜುದ್‌ನಲ್ಲಿ ಅಳುತ್ತಾ ಅಲ್ಲಾಹನಲ್ಲಿ ಕ್ಷಮೆ ಕೇಳುತ್ತಿದ್ದರು. ನಾನು ಅವರೊಡನೆ ಬೇಸರಗೊಂಡಿದ್ದೆ ಎಂಬುದು ಅವರ ಭಾವನೆ ಮಾತ್ರ ಆಗಿತ್ತು. ಅಂತಹ ಏನಾದರೂ ಆಗಿದ್ದಾಗಿ ನನಗಂತು ನೆನಪಿಲ್ಲ. ಪತ್ನಿ ಹೇಳುತ್ತಾರೆ: ನಮಾಝ್‌ನಲ್ಲಿ ಮಕ್ಕಳ ಹಾಗೆ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಡೊಕ್ಯುಮೆಂಟರಿ ತಯಾರಿಸಿದ ನಂತರ ಖಲೀಫರ ಕಡೆಯಿಂದ ಅದರ ಮಂಜೂರಾತಿ ಬರಲಿ ಎಂಬ ಚಿಂತೆ ಅವರಿಗಿತ್ತು. ದಿಸ್ ವೀಕ್ ಪ್ರೋಗ್ರಾಮನ್ನು ಶುರುಮಾಡಿದಾಗ, ಅದರ ಕಾರಣದಿಂದ ಹೆಚ್ಚು ಹೆಚ್ಚಾಗಿ ಖಲೀಫರನ್ನ ಭೇಟಿಯಾಗಿ ರಿಕಾರ್ಡಿಂಗ್ ಮಾಡುವ ಸಂದರ್ಭ ಸಿಗುತ್ತಿದೆ ಎಂದು ಅವರು ಬಹಳ ಸಂತೋಷಗೊಂಡಿದ್ದರು. ಅವರಲ್ಲಿ ಬಹಳ ದೊಡ್ಡದಾದ ಒಂದು ಗುಣವೇನಾಗಿತ್ತೇನೆಂದರೆ, ಅವರು ತನ್ನ ದೀನಿಗೆ ಲೌಕಿಕತೆಗಿಂತ ಪ್ರಾಮುಖ್ಯತೆ ನೀಡಿದ್ದರು. ಭೌತಿಕತೆಯೊಡನೆ ಯಾವುದೇ ಇಷ್ಟವಿರಲಿಲ್ಲ. ಯಾವುದೇ ವಸ್ತುವನ್ನು ಅವರು ಆಶಿಸಿರಲಿಲ್ಲ.

ಭೌತಿಕ ವಸ್ತುಗಳ ಲಾಲಸೆ ಅವರಿಗೆ ಎಂದಿಗೂ ಇರಲಿಲ್ಲ. ಯಾರಾದರೂ ಬೆಲೆಬಾಳುವ ಏನಾದರೂ ಕೊಟ್ಟರೆ, ಇಷ್ಟು ಬೆಲೆಯ ವಸ್ತು ನನ್ನ ಕೈಯಲ್ಲಿ ಬಂದಿದೆ ಎಂಬ ಕಾರಣಕ್ಕೆ ಹೆದರುತ್ತಿದ್ದರು. ಅಲ್ಲಾಹನಿಗೆ ಬಹಳ ಕೃತಜ್ಞತೆ ಅರ್ಪಿಸುತ್ತಿದ್ದರು. ಅಲ್ಲಾಹನು ನೀಡಿದ್ದರಲ್ಲಿ ಖುಶಿಯಾಗಿದ್ದರು. ಇದ್ದುದ್ದರಲ್ಲಿ ತೃಪ್ತರಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಡನೆ ಸಾಂಪತ್ತಿಕ ಕಾರ್ಯದಲ್ಲಿ ಅಲ್ಲಾಹನು ಹೇಗೆ ವರ್ತಿಸುತ್ತಿದ್ದನು ಎಂಬುದರ ಬಗ್ಗೆ ಚಿಕ್ಕ ವಯಸ್ಸಿನಲ್ಲಿ ಅವರು ಓದಿದ್ದರು. ಆಗ ಅವರೊಡನೆ ಸಹ ಅಲ್ಲಾಹನು ಹಾಗೆ ವರ್ತಿಸಲು ಅವರು ತಕ್ಷಣ ದುಆ ಮಾಡಿದ್ದರು. ಅವರ ದುಆ ಅಲ್ಲಾಹನು ಸ್ವೀಕರಿಸಿದ್ದಾನೆ ಮತ್ತು ಅವರೊಡನೆ ಸಹ ಅಲ್ಲಾಹನು ಹಝ್ರತ್ ಹಕೀಂ ನೂರುದ್ದೀನ್ ಸಾಹಿಬ್‌ರೊಡನೆ ವರ್ತಿಸಿದ ರೀತಿಯಲ್ಲಿ ವರ್ತಿಸುವನು ಎಂದು ಅವರಿಗೆ ದೃಢವಿಶ್ವಾಸವಿತ್ತು. ಇದು ಸತ್ಯವೂ ಆಗಿದೆ. ಏನಾದರೂ ವಸ್ತುವಿನ ಆವಶ್ಯಕತೆ ಬರುವಾಗ ಅಚಾನಕ್ಕಾಗಿ ಅವರ ಬಳಿ ಹಣ ಬರುತ್ತಿತ್ತು. ಹತ್ತು ವರ್ಷಗಳ ನಂತರ ಈಗಷ್ಟೆ ಒಂದು ಲೋನ್ ಕಂಪೆನಿಯಿಂದ ನಮಗೆ ಒಂದು ಫೋನ್ ಬಂತು. ನಮ್ಮ ಸಾವಿರ ಪೌಂಡ್ ಅವರ ಬಳಿಯಿದೆ ಎಂದು ಹೇಳಿತು. ಆಗ ವಾಹನದ ಇನ್ಶ್ಯುರೆನ್ಸ್ ಪೇ ಮಾಡಬಹುದು ಮತ್ತು ವಾಹನದ ಮೇಂಟೇನೆನ್ಸ್ ಮಾಡಬಹುದು ಎಂಬ ಕಾರಣಕ್ಕೆ ಅವರು ಬಹಳ ಸಂತೋಷದಲ್ಲಿದ್ದರು. ಜಮಾಅತಿನಿಂದ ಆ ಹಣ ಪಡೆಯಬೇಕು ಎಂಬ ಯೋಚನೆ ಅವರಿಗಿರಲಿಲ್ಲ.

ಪತ್ನಿ ಹೇಳುತ್ತಾರೆ: ಅವರೊಂದಿಗೆ ಅಲ್ಲಾಹನ ಪ್ರೀತಿಯ ವರ್ತನೆ ನಾನು ಸ್ವತಃ ನೋಡಿದ್ದೇನೆ. ಸುಮಾರು ಹತ್ತು ವರ್ಷಗಳಿಗೆ ಮುಂಚಿನ ಘಟನೆಯನ್ನು ತಾಲಿಅ್ ಸ್ವತಃ ವಿವರಿಸಿದ್ದರು. ಒಂದು ಸಲ ಅವರಿಗೆ ಬಹಳ ಹಸಿವಾಯಿತು. ಅವರ ಬಳಿ ಹಣವಿರಲಿಲ್ಲ. ಹಣ ಪೂರ್ತಿಯಾಗಿ ಮುಗಿದಿತ್ತು. ಅವರು ನಮಾಝ್ ನಿರ್ವಹಿಸಿದರು. ಸಲಾಂ ಮಾಡಿದ ನಂತರ ನೋಡಿದಾಗ, ಹಾಸಿಗೆಯ ಕೆಳಗೆ ಹತ್ತು ಪೌಂಡ್ ಇತ್ತು. ಅವರಿಗೆ ಅಲ್ಲಾಹನು ಈ ಹಣವನ್ನು ಕಳುಹಿಸಿದ್ದಾನೆ ಎಂಬ ಕಾರಣಕ್ಕೆ ಅವರು ಬಹಳ ಸಂತೋಷಗೊಂಡಿದ್ದರು.

ಅವರಿಗೆ ಆತ್ಮವಿಶ್ವಾಸ ಸಹ ಬಹಳವಿತ್ತು. ಜನರು ಕೆಲವು ಸಾಂಪತ್ತಿಕವಾದ ತಯಾರಿಯನ್ನು ಮಾಡುತ್ತಾರೆ. ಆದರೆ ಅವರಿಗೆ ಅಲ್ಲಾಹನ ರಿಝ್ಕ್, ಅಥವಾ ಜೀವಾನಾಧಾರ ನೀಡುವನು ಎಂಬ ಭರವಸೆ ಇತ್ತು. ಆದ್ದರಿಂದ ಲೋಕದ ಹಿಂದೆ ಹೋಗುವ ಆವಶ್ಯಕತೆಯಿಲ್ಲ, ತನ್ನ ವಖ್ಫನ್ನು ನಿಭಾಯಿಸುವೆನು ಎಂದು ಹೇಳುತ್ತಿದ್ದರು. ಕೊನೆ ಸಮಯದಲ್ಲೂ ಅವರಿಗೆ ಇದ್ದ ಚಿಂತೆಯೇನೆಂದರೆ, ಇಷ್ಟು ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ಆಫ್ರಿಕಕ್ಕೆ ಹೋಗುತ್ತಿದ್ದೇನೆ ಹೇಗೆ ಅದನ್ನು ಜೋಪಾನವಾಗಿ ಇಡುವುದು ಎಂದು ಹೇಳುತ್ತಿದ್ದರು.

ತನ್ನ ಬಗ್ಗೆ ಯಾವುದೇ ಪರಿವೆಯಿರಲಿಲ್ಲ. ಬಹಳವಾಗಿ ಅತಿಥಿ ಸತ್ಕಾರ ಮಾಡುತ್ತಿದ್ದರು. ಫ್ಯಾಮಿಲಿ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಸರಳ ವಸ್ತ್ರಗಳನ್ನು ಧರಿಸುತ್ತಿದ್ದರು. ಅವರಿಗೆ ಅಹಂಕಾರವಿತ್ತು ಎಂದು ಕೆಲವರು ಅವರ ಬಗ್ಗೆ ತಪ್ಪಾಗಿ ತಿಳಿದುಕೊಂಡಿದ್ದರು ಎಂದು ನನಗೆ ಅನಿಸುತ್ತದೆ. ಆದರೆ ಅವರಿಗೆ ಇದ್ದದ್ದು ಆತ್ಮವಿಶ್ವಾಸವಾಗಿತ್ತು. ಅವರು ಪ್ರೀತಿಯಿಂದ ಹಾಗೆ ಮಾತನಾಡುತ್ತಿದ್ದರು. ಅಹಂಭಾವ ಅವರಿಗೆ ಕಿಂಚಿತ್ತೂ ಇರಲಿಲ್ಲ. ತಾಲಿಅ್ ಬಹಳ ಕ್ಷಮೆ ಮಾಡುವವರಾಗಿದ್ದರು. ಎಲ್ಲರ ತಪ್ಪುಗಳನ್ನು ಮರೆ ಮಾಚುತ್ತಿದ್ದರು. ಎಂದಿಗೂ ಯಾರ ಬಗ್ಗೆಯೂ ಮನಸ್ಸಿನಲ್ಲಿ ಕೆಟ್ಟದ್ದಾಗಿ ತಿಳಿದುಕೊಳ್ಳುತ್ತಿರಲಿಲ್ಲ.

ಶಹೀದ್ ತಾಲಿಅ್‌ರ ತಂದೆ ಬರೆಯುತ್ತಾರೆ: ಅಲ್‌ಹಮ್ದುಲಿಲ್ಲಾಹ್, ಅಲ್ಲಾಹನು ನಮ್ಮ ಮಗನನ್ನು ಶಹಾದತಿಗಾಗಿ ಆಯ್ಕೆ ಮಾಡಿದನು. ಒಂದು ಕನಸಿನ ಆಧಾರದಲ್ಲಿ ನಾನು ನನ್ನ ಪತ್ನಿಯನ್ನು ಮತ್ತು ತಾಲಿಅ್‌ರನ್ನು ಮಾನಸಿಕವಾಗಿ ತಯಾರುಮಾಡಲು ಶುರುಮಾಡಿದ್ದೆ. ನಾನು ಕಂಡ ಕನಸನ್ನು ತಾಲಿಅ್‌ರೊಡನೆ ಹೇಳಿದಾಗ ಅವನು ನನ್ನೊಡನೆ ಕೇಳಿದರು: ನಾನು ಶಹೀದ್ ಆಗಿದ್ದಾಗಿ ನೀವು ಕನಸಿನಲ್ಲಿ ಕಂಡಿದ್ದೀರಾ? ನಿನಗೆ ಹೇಗೆ ಗೊತ್ತಾಯಿತು ಎಂದು ನಾನು ಆಶ್ಚರ್ಯದಿಂದ ಅವನೊಡನೆ ಕೇಳಿದೆ. ನೀವು ಶಹೀದ್ ಆಗಿದ್ದಾಗಿ ನಾನು ಸಹ ಕನಸ್ಸನ್ನು ಕಂಡಿದ್ದೇನೆ ಎಂದು ಅವನು ಹೇಳಿದನು. ಹೇಗಿದ್ದರೂ ಅಲ್ಲಾಹನು ಒಬ್ಬ ಮಗನಿಗೆ ತನ್ನ ತಂದೆಯೊಡನೆ ಇಷ್ಟು ಪ್ರೀತಿಯನ್ನು ಹೊಂದುವ ಅನುಮತಿ ನೀಡಿದ್ದಾನೆ. ಎಂದರೆ, ಅವರು ಈ ಪ್ರೀತಿಯನ್ನು ಅದರ ಸೀಮೆಗೆ ತಲುಪಿಸಿದ್ದರು. ಅದೇ ಕಾರಣದಿಂದ ಅವರು ತನ್ನ ತಂದೆಯ ಶಹಾದತಿನ ಬದಲಾಗಿ ತನ್ನ ಶಹಾದತಿಗಾಗಿ ದುಆ ಮಾಡಿದ್ದರು ಎಂದು ತೋರುತ್ತದೆ. ಆದ್ದರಿಂದ ಅಲ್ಲಾಹನು ಅವರಿಗೆಯೇ ಶಹಾದತಿನ ದರ್ಜೆಯನ್ನು ನೀಡಿದನು. ಗುಂಡು ತಗುಲಿದ ನಂತರ ಮಿಶನರಿ ಸಾಹಿಬ್‌ರೊಡನೆ ತಾಲಿಅ್ ಹೀಗೆಯೂ ಹೇಳಿದ್ದರು: ನಾನು ಜೀವಂತವಾಗಿ ಉಳಿದರೂ ಮರಣಪಟ್ಟರೂ ನಾನು ನನ್ನ ಮಿಶನನ್ನು ಪೂರ್ತಿ ಮಾಡಿದ್ದೇನೆ.

ಅವರು ಮತ್ತೆ ಹೇಳುತ್ತಾರೆ ಚಿಕ್ಕಂದಿನಿಂದಲೇ ಅಲ್ಲಾಹನು ಅವರ ಹೃದಯದಲ್ಲಿ ಇಟ್ಟಿದ್ದ ವಿಷಯವೇನೆಂದರೆ, ನಿನ್ನನ್ನು ನಾನು ಮಸೀಹರ ಕುಟುಂಬದಲ್ಲಿ ಹುಟ್ಟಿಸಿದ್ದೇನೆ. ಈಗ ಅದರ ಜವಾಬ್ದಾರಿಯನ್ನು ಅರಿಯಬೇಕು ಮತ್ತು ಅದರ ಹೊಣೆಗಾರಿಕೆಯನ್ನು ನೆರವೇರಿಸಬೇಕು. ತಿಳಿದುಕೊಳ್ಳು, ನಿನ್ನ ಜೀವ ಈಗ ನಿನ್ನದಲ್ಲ. ಅದು ನನ್ನದ್ದಾಗಿದೆ. ಕೇವಲ ನನ್ನ ಆಜ್ಞೆ ಪ್ರಕಾರ ನಡೆದು ನೀನು ನಿನ್ನ ಸಂಪೂರ್ಣ ಜೀವನವನ್ನು ಸಾಗಿಸಬೇಕು. ಅವರ ತಂದೆ ಹೇಳುತ್ತಾರೆ: ತಾಲಿಅ್ ತನ್ನ ಜೀವಿತಕ್ಕೆ ಮರಣದಿಂದ ಮುದ್ರೆ ಹಾಕಿದರು. ಅವನು ತನ್ನ ಜವಾಬ್ದಾರಿಯ ಹಕ್ಕನ್ನು ನೆರವೇರಿಸಿದನು. ಅವನು ಎಂತಹ ವ್ಯಕ್ತಿಯಗಿದ್ದನು ಎಂದರೆ, ಅಲ್ಲಾಹನು ತನ್ನ ಪ್ರೀತಿಯನ್ನು ಮತ್ತು ತನ್ನ ಪ್ರಿಯರ ಪ್ರೀತಿಯನ್ನು ಅವನ ಹೃದಯದಲ್ಲಿ ತುಂಬಿಸಿದ್ದನು. ಎಂತಹ ಹೃದಯವಾಗಿತ್ತು ಎಂದರೆ, ಹಝ್ರತ್ ಪೈಗಂಬರ್‌ರ(ಸ) ಹೆಸರು ಮತ್ತು ಪ್ರಸ್ತಾಪದಿಂದ ಅವನ ಮುಗ್ಧ ತುಟಿ ನಡುಗುತ್ತಿತ್ತು. ಕಣ್ಣೀರು ಬರುತ್ತಿತ್ತು. ಒಂದು ಪರಿಶುದ್ಧ ಆತ್ಮ, ಅದರಲ್ಲಿ ಯಾವುದೇ ಕೆಡುಕಿದೆ ಎಂದು ಸಂಶಯಿಸಲು ಕೂಡ ಸಾಧ್ಯವಿಲ್ಲ. ಬಾಹ್ಯ ಮತ್ತು ಆಂತರಿಕ ಸೌಂದರ್ಯ ಸಹ ಇತ್ತು. ತಂದೆ ಹೇಳುತ್ತಾರೆ: ನಾನು ಅವನನ್ನು ಹಝ್ರತ್ ಯೂಸುಫ್‌ರೊಡನೆ ಹೋಲಿಸಿ ಹೇಳುತ್ತೇನೆ. ಸ್ವಭಾವದಲ್ಲೂ ಅದೇ ರೀತಿಯಲ್ಲಿ ದೃಢವಾಗಿದ್ದರು. ಅವನ ಆತ್ಮ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮದಲ್ಲಿ ಹದಿನಾಲ್ಕು ಶತಮಾನಗಳ ಹಿಂದಿನ ಮಕ್ಕ ಮತ್ತು ಮದೀನದ ಗಲ್ಲಿಗಳಲ್ಲಿ ಸುತ್ತುತ್ತಿತ್ತು. ಅವನ ಶರೀರ ಪ್ರೇಮದ ರೂಪವಾಗಿತ್ತು. ಅವನ ಹಾಸಿಗೆ ಮತ್ತು ಹೊದಿಕೆ, ಊಟ ಮಾಡುವುದು ಮತ್ತು ಉಸಿರಾಟ ಎಲ್ಲವೂ ಖಲೀಫತುಲ್ ಮಸೀಹ್‌ರಿಗಾಗಿತ್ತು.

ಶಹೀದ್‌ರ ತಾಯಿ ಅಮತುಶ್ಶುಕೂರ್ ಸಾಹಿಬ ಹೇಳುತ್ತಾರೆ: ಅಲ್ಲಾಹನು ನನಗೆ ಮಹತ್ತಾದೊಂದು ಮಗನನ್ನು ದಯಪಾಲಿಸಿದ್ದನು ಎಂಬ ಕಾರಣದಿಂದ ನಾನು ಬಹಳ ಸೌಭಾಗ್ಯವಂತಳು ಆಗಿದ್ದೇನೆ. ತಾಲಿಅ್‌ರೊಡನೆ 31 ವರ್ಷಗಳ ಜೀವನ ಲೋಕದ ಅತಿದೊಡ್ಡ ವರದಾನಗಳಲ್ಲಿ ಒಂದಾಗಿದೆ. ಅನಂತರ ಅವರು ಯಾವುದೋ ಮಹಿಳೆ ಕಂಡ ಕನಸಿನ ಪ್ರಸ್ತಾಪ ಮಾಡಿರುವರು. ಅವರು ಹೀಗೆ ನೋಡಿದ್ದರು: ಒಬ್ಬ ಮಗು ತೊಟ್ಟಿಲಲ್ಲಿದೆ. ಅವನ ಕೈ ತೊಟ್ಟಿಲಿನಂದ ಹೊರಗೆ ಬರುತ್ತಿದೆ. ಮಗು ಅಸ್ಸಲಾಮು ಅಲೈಕುಂ ಎಂದು ಹೇಳುತ್ತಿರುವುದಾಗಿ ಅವರು ಕೇಳಿದರು. ಮಗುವಿನ ಬಳಿ ನೀಲಿ ಬಣ್ಣದ ಒಂದು ಕಾರ್ಡ್ ಇತ್ತು. ಅದರಲ್ಲಿ ಅರಬಿ ಮತ್ತು ಇಂಗ್ಲಿಷ್ ಭಾಷೆಯಲಿ God ಎಂದು ಬರೆಯಲಾಗಿತ್ತು. ಅವರು ಹೇಳುತ್ತಾರೆ: ನೀಲಿ ಬಣ್ಣದಿಂದ ಹುಡುಗನೆಂದು ತಾತ್ಪರ್ಯವೆಂದು ತೋರುತ್ತದೆ. ಇದು ತಾಲಿಅ್‌ರ ಜನನಕ್ಕೆ ಮುಂಚೆ ಯಾರೋ ಒಬ್ಬ ಮಹಿಳೆ ನೋಡಿದ್ದರು. ಆ ಮಹಿಳೆ ನನ್ನೊಡನೆ ಹೀಗೆ ಹೇಳಿದ್ದರು: ನಿನಗೆ ಒಬ್ಬ ಗಂಡುಮಗು ಜನಿಸುವುದು. ಆ ಹುಡುಗ ಹೋಗುವೆಲ್ಲೆಲ್ಲ ಶಾಂತಿ ಮತ್ತು ಸಮಾಧಾನವನ್ನು ಹರಡುವನು.

ತಾಯಿ ಹೇಳುತ್ತಾರೆ: ಅಲ್ಲಾಹನು ನನಗೆ ಸುಂದರ ಮತ್ತು ಪ್ರೀತಿಯ ಮಗುವನ್ನು ದಯಪಾಲಿಸಿದನು. 2005ರಲ್ಲಿ ಅವನಿಗೆ 15 ವರ್ಷ ಪ್ರಾಯವಾದಾಗ ನಾವಿಬ್ಬರೂ ವಸಿಯ್ಯತ್ ಮಾಡಿದೆವು. ಧರ್ಮದ ವಿಷಯದಲ್ಲಿ ಬಹಳ ಜಾಗರೂಕನಾಗಿದ್ದನು. ಮೂರು ವರ್ಷ ಪ್ರಾಯದಲ್ಲಿ ಅವನು ಕೆಲವು ಸೂರತ್ತುಗಳನ್ನು ಕಂಠಪಾಠ ಮಾಡಿದ್ದನು. ಅವನಿಗೆ ಮೂರು ವರ್ಷ ಪ್ರಾಯವಿದ್ದಾಗ ಅವನೊಡನೆ ತಬ್ಲೀಗಿನ ವಿಷಯಗಳನ್ನು ಹೇಳುತ್ತಿದ್ದೆ. ಬಹಳ ಗೌರವಭಾವದಿಂದ ಅವನು ನನ್ನೊಡನೆ ಮಾತುಕತೆ ನಡೆಸುತ್ತಿದ್ದನು ಮತ್ತು ಚರ್ಚೆ ಮಾಡುತ್ತಿದ್ದನು. ಕಲಿಕೆಯಲ್ಲೂ ಉತ್ತಮನಾಗಿದ್ದನು. ಒಳ್ಳೆಯ ಅಂಕಗಳನ್ನು ಪಡೆಯುತ್ತಿದ್ದನು. ಅವನು ಡಾಕ್ಟರ್ ಆಗಬೇಕು ಎಂದಾಗಿತ್ತು ನನ್ನ ಬಯಕೆ. ಆದರೆ ಅಲ್ಲಾಹನ ಪ್ಲಾನ್ ಬೇರೆಯಾಗಿತ್ತು. ಬಯೋ ಮೆಡಿಕಲ್ ಸೈನ್ಸಿನಲ್ಲಿ ತನ್ನ ಆರಂಭಿಕ ಶಿಕ್ಷಣವನ್ನು ಮುಗಿಸಿದ ನಂತರ ಅಲ್ಲಾಹನು ಅವನಿಗೆ ಜರ್ನಲಿಸಮ್‌ನಲ್ಲಿ ಮಾಸ್ಟರ್ ಮಾಡುವ ಸೌಭಾಗ್ಯ ನೀಡಿದ್ದನು. ಮಗನ ಮರಣದ ನಂತರ, ಅವನಿಗೆ ಖಲೀಫತುಲ್ ಮಸೀಹ್‌ರೊಡನೆ ಎಷ್ಟು ಪ್ರೀತಿಯಿತ್ತು ಎಂದು ನನಗೆ ಹೆಚ್ಚು ಗೊತ್ತಾಯಿತು. ಖಲೀಫರು ಅವರಿಗೆ ಎಂ.ಟಿ.ಎ.ಗಾಗಿ ಡೊಕ್ಯುಮೆಂಟರಿ ಮಾಡುವ ಕೆಲಸ ಕೊಟ್ಟಾಗ, ಸ್ವತಂತ್ರವಾಗಿ ಈ ಕೆಲಸವನ್ನು ಮಾಡಲು ನಿರ್ದೇಶಿಸಿದ್ದರು. ಈ ಕಾರಣದಿಂದ ಅವರು ಬಹಳ ಪ್ರಭಾವಿತರಾಗಿದ್ದರು ಮತ್ತು ಇನ್ಸ್‌ಪೈರ್ ಆಗಿದ್ದರು. ತಾಯಿ ಹೇಳುತ್ತಾರೆ: ಅವನ ಪತ್ನಿಯಾದ ಸುತೂತ್ ಸಾಹಿಬ ನನ್ನೊಡನೆ ಹೀಗೆ ಹೇಳಿದ್ದಳು: 2019ರಲ್ಲಿ ಅವರಿಗೆ ಒಂದು ಮೇಲ್ ಮಾಡಿದ್ದರು. ಅದರಲ್ಲಿ 8 ಪ್ರೋಗ್ರಾಮುಗಳ ಒಂದು ಪ್ಲಾನ್ ಕಳುಹಿಸಿದ್ದರು. ಅದರೊಂದಿಗೆ ಹೀಗೆ ಬರೆದಿದ್ದರು: ನನಗೆ ಏನಾದರೂ ಆದರೆ ಈ ಪ್ರೋಗ್ರಾಮಗಳನ್ನು ಸಂಬಂಧಪಟ್ಟವರಿಂದ ಪೂರ್ತಿ ಮಾಡಿಸಬೇಕು. ಅವರಿಗೆ ತಲುಪಿಸಬೇಕು.

ದಿವಂಗತರ ಸಹೋದರಿ ನುದ್‌ರತ್ ಸಾಹಿಬ ಹೇಳುತ್ತಾರೆ: ತಾಲಿಅ್ ಸಾಹಿಬ್‌ರೊಡನೆ ಇದ್ದ ನಂತರ ಅವರಿಗೆ ಜಮಾಅತಿನ ಕೆಲಸಗಳಲ್ಲಿ ಇದ್ದ ಪ್ರೀತಿಯನ್ನು ಅರಿತೆ. ದೀನಿನ ಕೆಲಸದಲ್ಲಿ ನಿರತರಾದ ಕಾರಣದಿಂದ ಹೆಚ್ಚಾಗಿ ತಡವಾಗಿ ಮನೆಗೆ ಮರಳುತ್ತಿದ್ದರು. ಕೆಲವೊಮ್ಮೆ ರಾತ್ರಿ 10 ಗಂಟೆಯ ನಂತರ, ಕೆಲವೊಮ್ಮೆ ಅರ್ಧರಾತ್ರಿಗೆ ಮನೆಗೆ ಬರುತ್ತಿದ್ದರು, ಊಟ ಮಾಡಿ ಪುನಃ ಕೆಲಸದಲ್ಲಿ ನಿರತರಾಗುತ್ತಿದ್ದರು. ರಜೆಯ ದಿನ ಕೂಡ, ಜಮಾಅತಿನ ಕೆಲಸ ಮುಗಿಯುವ ವರೆಗೆ ಅವರಿಗೆ ಸತ್ಯದಲ್ಲಿ ರಜೆಯಾಗಿರಲಿಲ್ಲ. ಸದಾ ಬಹಳ ಆವೇಶ ಮತ್ತು ಉತ್ಸಾಹದಿಂದ ಜಮಾಅತಿನ ಕೆಲಸದಲ್ಲಿ ಮಗ್ನರಾಗುತ್ತಿದ್ದರು. ಬಿಡುವಿನ ವೇಳೆಯಲ್ಲಿ ಹೆಚ್ಚಾಗಿ ಡೊಕ್ಯೂಮೆಂಟರಿ ಮತ್ತು ವೀಡಿಯೋಸ್ ನೋಡುತ್ತಿದ್ದರು.

ಇಷ್ಟು ಆಳವಾಗಿ ಯಾರೂ ಯಾವುದೇ ಪ್ರೋಗ್ರಾಮನ್ನು ನೋಡುವುದಾಗಿ ಮತ್ತು ಅದರ ವಿಶ್ಲೇಷಣೆ ಮಾಡುತ್ತಿರುವುದಾಗಿ ನಾನು ಎಂದಿಗೂ ನೋಡಿಲ್ಲ. ಪುಸ್ತಕ ಓದುವಂತೆ. ಇದರ ಬಗ್ಗೆ ಕೇಳಿದರೆ ಅವರು ಹೀಗೆ ಹೇಳುತ್ತಿದ್ದರು: ತನ್ನ ಕಲೆ ಕೌಶಲ್ಯದಲ್ಲಿ ಉತ್ತಮ ಯಶಸ್ಸು ಗಳಿಸಲು ಅನೇಕ ಡೊಕ್ಯುಮೆಂಟರಿಗಳನ್ನು ಮತ್ತು ವೀಡಿಯೋಸ್‌ಗಳನ್ನು ನೋಡಬೇಕಾಗುತ್ತದೆ. ಜಮಾಅತಿಗಾಗಿ ವಿಷಯಗಳನ್ನು ತಯಾರು ಮಾಡಿ ಉತ್ತಮ ಗುಣಮಟ್ಟದ ಚಾರಿತ್ರಿಕ ಡೊಕ್ಯುಮೆಂಟರಿಗಳನ್ನು ತಯರು ಮಾಡುವ ಯೋಗ್ಯತೆ ಅವರಿಗೆ ತುಂಬಾ ಇತ್ತು.

ತಾಲಿಅ್‌ರ ಧಾರ್ಮಿಕ ಅರಿವು ಬಹಳ ವಿಶಾಲವಾಗಿತ್ತು. ಇಸ್ಲಾಮಿನ ಅಧ್ಯಾಪನೆಗಳಿಗೆ ಸಂಬಂಧಿಸಿ ಯಾವುದಾದರೂ ಅತಿ ಸೂಕ್ಷ್ಮವಾದ ವಿಷಯದ ಕುರಿತು ನನ್ನ ಮನಸ್ಸಿನಲ್ಲಿ ಏನಾದರೂ ಸವಾಲು ಎದ್ದರೆ ಹೆಚ್ಚಾಗಿ ಅವರೊಡನೆ ಈ ಕುರಿತು ಮಾತನಾಡುವ ಎಂದು ನನಗೆ ಅನಸುತ್ತಿತ್ತು. ಹದೀಸುಗಳ ಆಳವಾದ ಅಧ್ಯಯನ ಮಾಡಿದ್ದರು. ಹೆಚ್ಚಿನ ಜನರು ಅರಿಯದ ಹದೀಸುಗಳನ್ನು ಅವರು ಮುಂದಿರಿಸುತ್ತಿದ್ದರು. ಅದರೊಂದಿಗೆ ಅದರ ರೆಫರೆನ್ಸ್ ಸಹ ಹೇಳುತ್ತಿದ್ದರು. ವಿವಿಧ ವಿಷಯಗಳಲ್ಲಿ ಪವಿತ್ರ ಖುರ್‌ಆನಿನ ರೆಫರೆನ್ಸ್ ಸಹ ನೀಡುತ್ತಿದ್ದರು. ಎಲ್ಲ ವಿಧದ ಮಾತುಕತೆ ಬಗ್ಗೆ ತನ್ನ ಅಭಿಪ್ರಾಯವನ್ನು ಹೇಳುತ್ತಿದ್ದರು. ಚರ್ಚೆ ಮಾಡುವಾಗ ಎಷ್ಟು ಶಕ್ತಿಯುತವಾಗಿ ತನ್ನ ಪೊಯಿಂಟ್‌ಗಳನ್ನು ಹೇಳುತ್ತಿದ್ದರು ಎಂದರೆ, ಇತರರಿಗೆ ಅದನ್ನು ಅಂಗೀಕರಿಸದೇ ಇರಲು ಸಾಧ್ಯವಾಗುತ್ತಿರಲಿಲ್ಲ. ಅರಬಿ ಭಾಷೆ ಮತ್ತು ಅದರ ವ್ಯಾಕರಣದಲ್ಲಿ ನುರಿತರಾಗಲು ಪ್ರಯತ್ನಿಸುತ್ತಿದ್ದರು. ಅಲ್ಲಾಹನ ವಚನಗಳನ್ನು ಅದರ ಯಥಾರ್ಥ ಭಾಷೆಯಲ್ಲೇ ಅರಿಯಲು ಬಯಸಿದ್ದರು. ಅರಬಿ ಭಾಷೆಯನ್ನು ಇಷ್ಟು ಆಳವಾಗಿ ಹೇಗೆ ಕಲಿತೆ ಎಂದು ನಾನು ಅವರೊಡನೆ ಕೇಳಿದ್ದೆ. ಆಗ ಅವರು ನನಗೂ ಅನೇಕ ಅಂಶಗಳನ್ನು ಒಳಗೊಂಡ ಒಂದು ಸಮಗ್ರ ಪಟ್ಟಿಯನ್ನು ಕಳುಹಿಸಿದರು ಮತ್ತು ನನ್ನನ್ನು ಗೈಡ್ ಮಾಡಿದರು. ಆ ಪಟ್ಟಿಯಲ್ಲಿ 26 ಪಾಠಗಳು ಮತ್ತು ಅನೇಕ ಪೋಯಿಂಟ್ಸ್‌ಗಳು ಬೇರೆಯಿದ್ದುವು. ಕಲಿಯಲು ಅನೇಕ ಉಪಾಯಗಳು ಸಹ ಅದರಲ್ಲಿ ಇದ್ದುವು. ಅವರು ತನ್ನ ಎಲ್ಲ ಬುದ್ಧಿಪರವಾದ ಯೋಗ್ಯತೆಗಳನ್ನು ಅಲ್ಲಾಹನ ಸಾಮೀಪ್ಯ ಮತ್ತು ಜಮಾಅತಿನ ಸೇವೆಗಾಗಿ ಉಪಯೋಗಿಸಿದರು. ವಿಶೇಷವಾಗಿ ಎರಡು ಕನಸುಗಳನ್ನು ತಾಲಿಅ್ ನನಗೆ ನೇರವಾಗಿ ಹೇಳಿದ್ದರು. ಅವು ಅವರ ಶಹಾದತಿನ ಕಡೆಗೆ ಬೊಟ್ಟುಮಾಡುತ್ತದೆ ಎಂದು ತೋರುತ್ತಿತ್ತು. ತಾಲಿಅ್ ತನ್ನ ಮಗನಾದ ತಲಾಲ್‌ನ ಬಗ್ಗೆ ಮಾತನಾಡುತ್ತಾ ಹೇಳಿದರು: ತಲಾಲನಿಗೆ ತನ್ನ ತಂದೆತಾಯಂದಿರಲ್ಲಿ ಯಾರಾದರೂ ಒಬ್ಬರ ಮರಣದ ತೀವ್ರ ಭಯವಿತ್ತು. ಅವನಿಗೆ ತನ್ನ ತಾತನ ಶಹಾದತಿನ ಬಗ್ಗೆ ಗೊತ್ತಿತ್ತು. ಈ ಮಾತನ್ನು ಹೇಳುವಾಗ ತಾಲಿಅ್ ಸ್ವಲ್ಪ ಗಂಭೀರಭಾವದಿಂದ ಇದ್ದರು. ತನ್ನ ಸ್ವರವನ್ನು ಕಡಿಮೆಗೊಳಿಸಿದರು. ಸಹೋದರಿ ಹೇಳುತ್ತಾಳೆ. ತಾಲಿಅ್ ಕಂಡ ಈ ಕನಸು ಪೂರ್ಣವಾಗಿ ನನಗೆ ನೆನಪಿಲ್ಲ. ಆದರೂ ಒಟ್ಟಾಗಿ ಹೇಳುವುದಾದರೆ, ಆ ಕನಸಿನಲ್ಲಿ ಅವನು ಖುದ್ದಾಮುಲ್ ಅಹ್ಮದಿಯದ ಬಟ್ಟೆಯನ್ನು ಧರಿಸಿ ಧ್ವಜವನ್ನು ಎತ್ತಿಕೊಂಡು ಸ್ವರ್ಗದಲ್ಲಿ ಪ್ರವೇಶಿಸುತ್ತಿದ್ದಾನೆ. ಪ್ರತಿಯೊಬ್ಬರೂ ಅವನನ್ನು ಅವನ ಪತ್ನಿಯ ತಂದೆಯ ಹೆಸರಿನಲ್ಲಿ ಕರೆಯುತ್ತಿದ್ದರು. ಎಂದರೆ ಗುಲಾಂ ಖಾದಿರ್ ಬಂದರು ಎಂದು ಹೇಳುತ್ತಿದ್ದರು.

ತಾಲಿಅ್‌ರ ಕಿರಿಯ ಸಹೋದರಿ ಹೇಳುತ್ತಾಳೆ: ಅವರು ಅತ್ಯುತ್ತಮ ಮಾದರಿಯಾಗಿದ್ದರು. ನನಗೆ ಅವರಿಂದ ಅನೇಕ ಕಾರ್ಯಗಳನ್ನು ಕಲಿಯುವ ಅವಕಾಶ ಸಿಕ್ಕಿತ್ತು. ನನಗೆ 13, 14 ವರ್ಷ ಪ್ರಾಯವಿದ್ದಾಗ ಒಂದು ದಿನ ನನಗೆ ಇಷ್ಟಪಟ್ಟ ಸೂರತ್ತನ್ನು ಓದಿಹೇಳಲು ತಾಲಿಅ್ ಬಯಸಿದರು. ಹೀಗೆ ಅವರು ನನಗಾಗಿ ಅತ್ಯಂತ ಉತ್ತಮ ಶೈಲಿಯಲ್ಲಿ ಮತ್ತು ಮಧುರ ಸ್ವರದಲ್ಲಿ ಸೂರಃ ಯೂಸುಫ್ ಪಾರಾಯಣ ಮಾಡಿದರು. ಆಫೀಸಿಗೆ ಹೋಗುವಾಗಲೂ ಬರುವಾಗಲೂ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ದರ್ಸುಲ್ ಖುರ್‌ಆನ್ ಆಲಿಸುತ್ತಿದ್ದರು. ಒಂದು ಬಾರಿ ನಾನು ಅವರಿಗೆ ಒಂದು ಹಾಸ್ಯವನ್ನು ಹೇಳಿದೆ. ಅದರಲ್ಲಿ ಕ್ರೈಸ್ತರ ಪ್ರಸ್ತಾಪವಿತ್ತು. ಅದರಲ್ಲಿ ಅವರ ಧರ್ಮದ ಕುರಿತು ಸ್ವಲ್ಪ ಗೇಲಿ ಮಾಡಲಾಗಿತ್ತು. ಆಗ ನಾವು ಯಾರ ಧರ್ಮವನ್ನು ಅಪಹಾಸ್ಯ ಮಾಡಬಾರದು. ಹೀಗಾದರೆ ಅವನು ಸಹ ನಮ್ಮ ವಿರುದ್ಧ ಹೇಳುವರು ಎಂದು ಅವರು ನನಗೆ ಉಪದೇಶಿಸಿದರು.

ಸೆಕ್ರಟರಿ ರಿಶ್ತ ನಾತ ಮತ್ತು ತಾಲಿಅ್‌ರ ಮಾವ ಸಹ ಆಗಿರುವ ಆಬಿದ್ ವಹೀದ್ ಸಾಹಿಬ್ ಹೇಳುತ್ತಾರೆ: ತಾಲಿಅ್‌ರೊಂದಿಗೆ ನನಗೆ ವಿಶೇಷ ಸಂಬಂಧವಿತ್ತು. ಕೇವಲ ಒಂದು ಸಂಬಂಧವಾಗಿರಲಿಲ್ಲ. ಬದಲಾಗಿ ಎಲ್ಲ ಸಂಬಂಧಗಳನ್ನು ಒಳಗೊಂಡ ಸಂಬಂಧವಾಗಿತ್ತು. ನಾನು ಅವರ ಮಾವನೂ ಆಗಿದ್ದೆ. ಆದರೆ ನಮ್ಮ ನಡುವೆ ಹೆಚ್ಚು ವಯಸ್ಸಿನ ವ್ಯತ್ಯಾಸವಿಲ್ಲ. ನನಗೆ ಅವರು ಕಿರಿಯ ಸಹೋದರ ಮತ್ತು ಸ್ನೇಹಿತನ ಹಾಗಿದ್ದರು. ಕೇವಲ ಏಳು ವರ್ಷದ ವ್ಯತ್ಯಾಸವಿತ್ತು. ಅವರಿಗೆ ಹಝ್ರತ್ ಮಸೀಹ್ ಮೌಊದ್‌ರ(ಅ) ಕುಟುಂಬದೊಂದಿಗೆ ಅಪರಿಮಿತವಾದ ಪ್ರೇಮವಿತ್ತು ಎಂದು ನಾನು ಅವರ ಬಗ್ಗೆ ನೋಡಿದ್ದೇನೆ. ಕುಟುಂಬದೊಳಗೆ ಯಾರಾದರೂ ತಪ್ಪು ಕೆಲಸ ಮಾಡಿದ್ದರೆ ಬಹಳ ಹೆಚ್ಚು ದುಃಖ ಮತ್ತು ನೋವನ್ನು ಅನುಭವಿಸುತ್ತಿದ್ದರು. ಏಕೆಂದರೆ ಅದು ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫತುಲ್ ಮಸೀಹ್‌ರಿಗೆ ಕೆಟ್ಟ ಹೆಸರು ನೀಡುವ ಸಂಗತಿಯಾಗಿರುತ್ತದೆ. ತಾಲಿಅ್‌ರ ಮತ್ತು ನನ್ನ ನಡುವೆ ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೆ, ಅದರ ಕುರಿತು ನಾವು ಚರ್ಚೆ ನಡೆಸಿದರೆ, ಕೆಲವೇ ನಿಮಿಷಗಳಲ್ಲಿ ನಾನು ಸೋಲನ್ನು ಒಪ್ಪಿಕೊಳ್ಳುತ್ತಿದ್ದೆ. ಏಕೆಂದರೆ ನಾನು ಅದನ್ನು ದೃಢವಾಗಿ ನಂಬುವ ವರೆಗೆ ಅವನು ಚರ್ಚೆಯನ್ನು ಮುಂದುವರೆಸಿ ಅದಕ್ಕೆ ಪುರಾವೆಗಳನ್ನು ನೀಡುತ್ತಾ ಹೋಗುವವನು ಎಂದು ನನಗೆ ಗೊತ್ತಿತ್ತು. ಆದರೆ ಇದರ ಕುರಿತು ಖಲೀಫತುಲ್ ಮಸೀಹ್‌ರ ಅಭಿಪ್ರಾಯ ಇದಾಗಿದೆ ಎಂದು ನಾನು ಹೇಳಿದರೆ ಅವರು ಹೀಗೆ ಹೇಳುತ್ತಿದ್ದರು: ನನ್ನ ಅಭಿಪ್ರಾಯ ಹುಝೂರಿನ ಅಭಿಪ್ರಾಯದಿಂದ ಅಲ್ಪವು ವ್ಯತ್ಯಾಸವಿರುವುದಾದರೆ ನಾನು ಅದನ್ನು ಸ್ವೀಕರಿಸುವೆನು. ನಾನು ಪೂರ್ಣವಾಗಿ ತಪ್ಪು ಹೇಳುತ್ತಿದ್ದೇನೆ ಎಂದು ಒಪ್ಪುವೆನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ(ರ) ಕುರಿತು ಒಂದು ಡೊಕ್ಯುಮೆಂಟರಿ ತಯಾರಿಸುತ್ತಿದ್ದರು. ಆಗ ಅವರ ಒಬ್ಬ ಕಝಿನ್, ಎಂದರೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ ಮೊಮ್ಮಗನ ಮಗಳು ಹೇಳಿದರು: ಅಬ್ಬಾಜಾನಿನ ಕುರಿತು ಉತ್ತಮ ಡೊಕ್ಯುಮೆಂಟರಿ ಮಾಡಬೇಕು. ಏಕೆಂದರೆ ಅದು ಯಾವಾಗಲೂ ಮಾಡಲಿಕ್ಕೆ ಆಗುವುದಿಲ್ಲ. ಆಗ ತಾಲಿಅ್ ಸಾಹಿಬ್ ಹೇಳಿದರು: ಅಷ್ಟು ಒಳ್ಳೆಯದಾಗುವುದು ಎಂದು ನನಗೆ ಅನಿಸುವುದಿಲ್ಲ. ಏಕೆಂದರೆ ಅದು ನೇರವಾಗಿ ಖಲೀಫರ ಕುರಿತು ಅಲ್ಲ. ಆದರೆ ಜನರಿಗೆ ಇಷ್ಟವಾಗಲಿ ಎಂದು ನಾನು ದುಆ ಮಾಡುತ್ತೇನೆ. ಇದಾಗಿತ್ತು ಅವರಿಗೆ ಖಿಲಾಫತಿನೊಂದಿಗೆ ಇದ್ದ ಸಂಬಂಧ.

ಮಿರ್ಝಾ ತಲ್‌ಹ ಅಹ್ಮದ್ ಸಾಹಿಬ್‌ರು ಬರೆಯುತ್ತಾರೆ: ಚೌಧರಿ ಝಫರುಲ್ಲಾಹ್ ಖಾನ್ ಸಾಹಿಬ್‌ರ(ರ) ಕುರಿತು ಸಹ ಒಂದು ಡೊಕ್ಯುಮೆಂಟರಿ ಮಾಡಲು ಉದ್ದೇಶಿಸಿದ್ದರು. ಅದಕ್ಕಾಗಿ ಅವರು ನನಗೂ ಸ್ವಲ್ಪ ಕೆಲಸ ನೀಡಿದ್ದರು. ಅಲ್ಲಾಹನ ಅನುಗ್ರಹದಿಂದ ಬಹಳ ಉತ್ತಮ ಡೊಕ್ಯುಮೆಂಟರ್ ಮಾಡುತ್ತಿದ್ದರು. ಅವರಿಗೆ script writing ಮತ್ತು story telling ನಲ್ಲಿ ಪ್ರಾವೀಣ್ಯವಿತ್ತು.

ಆದಂ ವಾಕರ್ ಸಾಹಿಬ್ ಬರೆಯುತ್ತಾರೆ: ಚಿಕ್ಕಂದಿನಿಂದ ನನಗೆ ತಾಲಿಅ್‌ನ ಪರಿಚಯವಿದೆ. ನಾವು ಒಟ್ಟಿಗೆ ಖುದ್ದಾಮುಲ್ ಅಹ್ಮದಿಯಾ, ಮರ್ಕಝಿ ಪ್ರೆಸ್ ಆಫಿಸ್ ಮತ್ತು ಎಂ.ಟಿ.ಎ.ದಲ್ಲಿ ಕೆಲಸ ಮಾಡಿದ್ದೇವೆ. ಎಂ.ಟಿ.ಎ.ಯ ಸಂಬಂಧಿಸಿದ ಕೆಲಸಗಳಲ್ಲಿ ವಿಶೇಷವಾಗಿ ನಾನು ನೋಡಿದ್ದೇನೆ. ತಾಲಿಅ್ ಯಾವಾಗಲೂ ಅತ್ಯಂತ ಸೂಕ್ಷ್ಮವಾಗಿ ಕೆಲಸವನ್ನು ಅವಲೋಕಿಸುತ್ತಿದ್ದರು. ಹೆಚ್ಚಾಗಿ ಡೊಕ್ಯುಮೆಂಟರಿ ಪ್ರೋಗ್ರಾಂ ತಯಾರಿಸುವಾಗ ಅವರು 18, 19 ಗಂಟೆಗಳ ಕಾಲ ಕೆಲಸ ಮಾಡುತ್ತಿರುವುದಾಗಿ ನಾನು ನೋಡಿದ್ದೇನೆ. ಬಹಳ ಆಳವಾಗಿ ಹೋಗಿ ವಿಷಯಗಳನ್ನು ನೋಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್‌ರ(ಅ) ತಬ್ಲೀಗ್ ಅಥವಾ ಖಲೀಫರ ನಿರ್ದೇಶನಗಳನ್ನು ಜನರಿಗೆ ತಲುಪಿಸುವ ಬಗ್ಗೆ ಅವರ ಮನಸ್ಸಿನಲ್ಲಿ ಏನಾದರೂ ಆಲೋಚನೆ ಬಂದರೆ, ಅವರ ಯಾವುದೇ ಹಿಂಜರಿಕೆಯಿಲ್ಲದೆ ನನ್ನೊಡನೆ ಮಾತನಾಡುತ್ತಿದ್ದರು ಮತ್ತು ತನ್ನ ಅನಿಸಿಕೆಗಳನ್ನು ಹೇಳುತ್ತಿದ್ದರು. ವಿವಿಧ ಆನ್‌ಲೈನ್ ಮಾಧ್ಯಮಗಳ ಮೂಲಕ ಸಂದೇಶವನ್ನು ಹೇಗೆ ಜನರಿಗೆ ತಲುಪಿಸುವುದು ಎಂಬುದರ ಬಗ್ಗೆ ಯೋಚಿಸುತ್ತಿದ್ದರು. ಖಲೀಫರ ನಿರ್ದೇಶನಗಳನ್ನು ಆಳವಾಗಿ ಹೋಗಿ ಅರಿಯುತ್ತಿದ್ದರು ಮತ್ತು ಅದರ ಪ್ರಕಾರ ನಡೆಯಲು ಪ್ರಯತ್ನಿಸುತ್ತಿದ್ದರು ಎಂದು ಇದರಿಂದ ಗೊತ್ತಾಗುತ್ತದೆ. ಯಾವಾಗಲೂ ಸತ್ಯ ಹೇಳಲಿಕ್ಕೆ ಆದ್ಯತೆ ನೀಡುತ್ತಿದ್ದರು. ಏನಾದರೂ ಸಲಹೆ ನೀಡಲಿಕ್ಕೆ ಇದ್ದರೆ ಅಥವಾ ತನ್ನ ಅಭಿಪ್ರಾಯವನ್ನು ವ್ಯಕ್ತಿಪಡಿಸಲಿಕ್ಕೆ ಇದ್ದರೆ ಸದಾ ಸತ್ಯವಾಗಿ ಮಾತನಾಡುತ್ತಿದ್ದರು. ಪದಗಳಲ್ಲಿ ಸುಳ್ಳಿನ ಮಿಶ್ರಿತವಿರುವುದಿಲ್ಲ. ಇತರ ಸೇವಕರೊಂದಿಗೆ ಕೆಲಸ ಮಾಡುವಾಗಲೂ ಅವರಿಗೆ ಯಾವಾಗಲೂ ಸತ್ಯವಾದ ಫೀಡ್‌ಬ್ಯಾಕ್ ನೀಡುತ್ತಿದ್ದರು.

ನಸೀಂ ಬಾಜ್‌ವ ಸಾಹಿಬ್ ಹೇಳುತ್ತಾರೆ: 2001ರಿಂದ 2009ರ ತನಕ ನಾನು ಮುಬಲ್ಲಿಗ್ ಆಗಿ ಬ್ರೇಡ್‌ಫೋರ್ಡ್‌ನಲ್ಲಿ ಇದ್ದೆ. ಆ ವೇಳೆ ಹಾರ್ಟ್‌ಲೆಪೋಲ್ ಜಮಾಅತಿಗೂ ಹೋಗುತ್ತಿದ್ದೆ. ಪ್ರೋಗ್ರಾಮುಗಳಲ್ಲಿ ಅತ್‌ಫಾಲ್ ಎಂಬ ನೆಲೆಯಲ್ಲಿ ಭಾಗವಹಿಸುವುದನ್ನು ನೋಡಿದ್ದೇನೆ. ಸಮಯನಿಷ್ಠೆ ಹೊಂದಿದ, ಗಾಂಭೀರ್ಯದ, ಬುದ್ಧಿವಂತ, ಧಾರ್ಮಿಕ ಜ್ಞಾನದ ಆಸಕ್ತಿ ಹೊಂದಿದ, ನಮಾಝ್‌ಗಳನ್ನು ಸಾವಧಾನವಾಗಿ ನಿರ್ವಹಿಸುವ, ಅನುಸರಣೆ ಮಾಡುವ, ಅತಿಥಿ ಸತ್ಕಾರಿಯಾದ, ದೇವಸ್ಮರಣೆ ಮಾಡುವ, ಹಿರಿಯರ ಗೌರವಿಸುವ, ಖಲೀಫತುಲ್ ಮಸೀಹ್‌ರನ್ನು ಪ್ರೀತಿಸುವ, ಅವರ ಮಾತುಗಳನ್ನು ಆಸಕ್ತಿಯಿಂದ ಕೇಳುವ, ಜವಾಬ್ದಾರಿಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವ ಮತ್ತು ಚಿಂತನ ಮಂಥನ ನಡೆಸುವ, ತಬ್ಲೀಗಿನ ಕೆಲಸಗಳನ್ನು ಆಸಕ್ತಿಯಿಂದ ಮಾಡುವ, ಪವಿತ್ರ ಖುರ್‌ಆನನ್ನು ಮಧುರ ಸ್ವರದಲ್ಲಿ ಓದುವ ಅತ್‌ಫಾಲ್ ಆಗಿದ್ದರು. ಅನಂತರ ಯುವಕನಾದಾಗ ಅವರ ಸ್ವಭಾವಗುಣಗಳು ಇನ್ನೂ ಉತ್ತಮವಾಗಿ ಹೊರಗೆ ಬಂತು.

ಅವರ ಒಬ್ಬ ಕಝಿನ್ ಆದ ಮುಬಾರಕ ನೂಮಾನ್ ಹೇಳುತ್ತಾರೆ: ವಖ್‌ಫೇ ಝಿಂದಗಿ ಎಂಬ ನೆಲೆಯಲ್ಲಿ ತಾಲಿಅ್‌ರಲ್ಲಿ ಸರಳತೆ ಮತ್ತು ಇದ್ದುದರಲ್ಲಿ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 14 October 2021, Issue No. 41

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 38ರ ವರದಿಯ ಉಳಿದ ಭಾಗ)**

* ಮೆಸೆಡೋನಿಯಾ ತಂಡದ ಅತಿಥಿ ಒಬ್ಬರು Dragan Georgiev ಸಾಹಿಬ್ ಹೇಳಿದರು. ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿರುತ್ತೇನೆ. ಇಲ್ಲಿ ಎಲ್ಲವೂ ತುಂಬಾ ವೈಭವಯುತವಾಗಿದ್ದವು. ಅಧಿಕ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ಮುಸಲ್ಮಾನರೊಂದಿಗೆ ಮೊದಲ ಬಾರಿಗೆ ಇಷ್ಟು ಹತ್ತಿರದಿಂದ ಪರಿಚಯಪಡಲು ಸಾಧ್ಯವಾಗಿದೆ. ಇಸ್ಲಾಮಿ ಶಿಕ್ಷಣದ ಕುರಿತು ಭಾಷಣಗಳನ್ನು ಕೇಳುವಂತಾಗಿದೆ. ಇಲ್ಲಿ ಮುಸಲ್ಮಾನರು ನಮಗೆ ಬೆರರಾಗುವಂತೆ ಸ್ವಾಗತಿಸಿದ್ದಾರೆ. ಜಲ್ಸ ಉತ್ತಮ ಗುಣಮಟ್ಟದ್ದಾಗಿತ್ತು. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಜನರಿದ್ದರು ಎಲ್ಲರಿಗೂ ಸರಿಯಾಗಿ ನೋಡಿಕೊಳ್ಳಲಾಯಿತು. ಊಟ ಉಪಚಾರ ಇತ್ಯಾದಿ, ಇನ್ನೊಮ್ಮೆ ಬರಲು ಸಾಧ್ಯವಾದರೆ ಖಂಡಿತವಾಗಿಯೂ ಮತ್ತೊಮ್ಮೆ ಬರುವೆನು.

* ಇನ್ನೋರ್ವ ಅತಿಥಿ Zaklina panoska Anotzelkovi ಹೇಳಿದರು. ಜಲ್ಸದ ಏರ್ಪಾಡು ಉನ್ನತಮಟ್ಟದ್ದಾಗಿತ್ತು. ಅತ್ಯಧಿಕ ಜನರ ಹಾಜರಿಯಿಂದ ತುಂಬಾ ಪ್ರಭಾವಿತನಾಗಿದ್ದೇನೆ. ರಕ್ಷಣಾ ವ್ಯವಸ್ಥೆಯು ತುಂಬಾ ಚೆನ್ನಾಗಿತ್ತು. ಹುಝೂರರ ಭಾಷಣ ಮತ್ತು ಇತರ ಭಾಷಣಗಳು ಸಹ ತುಂಬ ಉತ್ತಮವಾಗಿದ್ದವು. ಹುಝೂರ್‌ರೊಡನೆ ಭೇಟಿಯಾಗಿ ತುಂಬ ನೆಮ್ಮದಿ ದೊರೆಯಿತು. ಅವರು ನಮಗೆ ಭೇಟಿ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು ತುಂಬ ಅವಸ್ಮರಣಿಯ ಭೇಟಿಯಾಗಿತ್ತು. ಇದು ನನಗೆ ಅಮೋಘವಾದ ಅನುಭವವಾಗಿತ್ತು. ಭೇಟಿ ಆಗಲು ಬಂದ ಜನರೆಲ್ಲರೂ ಹುಝೂರ್‌ರ ಉತ್ತರ ಕೇಳಿ ತೃಪ್ತಿಭಾವ ಹೊಂದಿದ್ದರು. ಹುಝೂರ್‌ರ ಗೌರವಯುತ ವರ್ತನೆ ನೋಡಿ ತೃಪ್ತರಾಗಿದ್ದರು.

* ಮೆಸೆಡೋನಿಯಾದಿಂದ ಬಂದ ಅತಿಥಿ ಒಬ್ಬರು Arben Fejzulai ಸಾಹಿಬ್ ಹೇಳಿದರು. ನಾನು ಜಲ್ಸದಲ್ಲಿ ಮೊದಲ ಬಾರಿಗೆ ಭಾಗವಹಿಸಿರುತ್ತೇನೆ. ಹಾಗಾಗಿ ಎಲ್ಲವು ಹೊಸ ಅನುಭವವಾಗಿತ್ತು. ಇಸ್ಲಾಂ ಧರ್ಮದಲ್ಲಿ ಇಂತಹ ಒಂದು ಜಮಾಅತ್ ಇದೆ ಎಂದು ಸಹ ತಿಳಿದಿರಲಿಲ್ಲ. ಈ ಜಲ್ಸದಲ್ಲಿ ಭಾಗವಹಿಸಿದ ಮೇಲೆ ತಮ್ಮನ್ನು ನಾನು ಶೈಕ್ಷಣಿಕ ನೆಲೆಯಲ್ಲಿ ಉತ್ತಮರು ಎಂದು ಭಾವಿಸಿರುತ್ತೇನೆ. ನನಗೆ ಅಹ್ಮದಿಅತ್ ಬಗ್ಗೆ ಬಹಳಷ್ಟು ತಿಳಿಯಲು ಸಾಧ್ಯವಾಯಿತು. ನಾನು ಸಹ ಜಮಾಅತಿನ ಒಂದು ಅಂಶವೆಂಬಂತೆ ಭಾಸವಾಗುತಿತ್ತು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನ ಸೇರುವುದು ಮತ್ತು ಅವರೆಲ್ಲರ ಅಗತ್ಯಗಳನ್ನು ಪೂರೈಸುವುದು ಸಾಮಾನ್ಯ ಕೆಲಸವಲ್ಲ.

ಮತ್ತು ಅವರು ಹೇಳಿದರು. ನಾನು ಹುಝೂರರ ಭಾಷಣ ಕೇಳುತ್ತಿರುವಾಗ ನನಗನಿಸಿದ್ದು ಈ ಜನರು ಹೇಗೆ ಮತ್ತು ಎಷ್ಟೊಂದು ಪರಸ್ಪರ ಪ್ರೀತಿಸುವವರಾಗಿದ್ದಾರೆ, ಪರಸ್ಪರ ಗೌರವಿಸುವವರಾಗಿದ್ದಾರೆ ಮತ್ತು ಯಾರಿಗೂ ಸಹ ನಷ್ಟ ಉಂಟು ಮಾಡುತ್ತಿಲ್ಲ ಎಂದು. ಹುಝೂರರಿಂದ ಕೇಳಿದ ಮಾತಿನ ಮೇಲೆ ಯೋಚನೆ ಮಾಡುವೆನು, ನಮ್ಮ ಮತ್ತು ಅಹ್ಮದಿಯರಿಗೆ ಏನು ವ್ಯತ್ಯಾಸವಿದೆ. ಹುಝೂರರಿಂದ ಏನೆಲ್ಲ ಕೇಳಿದ್ದೇನೆ. ಅದು ಹಿತವೆನಿಸಿತು. ಜಮಾಅತಿಗೆ ನನ್ನ ಸಂದೇಶವೇನೆಂದರೆ ನನ್ನ ದೇಶದಲ್ಲಿ ಮತ್ತು ಇತರ ದೇಶಗಳಲ್ಲಿ ಎಲ್ಲೆಲ್ಲಿ ಜಮಾಅತ್ ಸ್ಥಾಪನೆಯಾಗಲಿಲ್ಲವೋ ಅಲ್ಲಿ ಅಹ್ಮದಿ ಮಿಷನ್ನರಿಗಳಿಗೆ (ಪ್ರಚಾರಕರಿಗೆ) ಕಳುಹಿಸಿರಿ. ಅವರು ಜನರಿಗೆ ತಿಳಿಸುವಂತಾಗಲಿ. ಅಹ್ಮದಿಅತ್ ಎಂದರೇನು?

* ಮೆಸೆಡೋನಿಯಾದಿಂದ ಬಂದ ಇನ್ನೋರ್ವ ಅತಿಥಿ Mone Jovanov ಸಾಹಿಬ್ ಹೇಳಿದರು. ನಾನು ಜಲ್ಸದಲ್ಲಿ ಭಾಗವಹಿಸಿ ಅದರ ನೆನಪುಗಳೊಂದಿಗೆ ಮರಳುತಿದ್ದೇನೆ. ಜಲ್ಸದ ಏರ್ಪಾಡುಗಳ ಸಮಸ್ಯೆ ಹೇಗಿದೆ ಎಂದರೆ ಯಾವ ಸಂಸ್ಥೆಯು ಇರಲಿ ತುಂಬ ಪರಿಶ್ರಮವಹಿಸಬೇಕಾಗುತ್ತದೆ. ಅಲ್ಲದೇ ನಾನು ಹೇಳುವೆನು. ಒಂದು ಸರಕಾರವು ಸಹ ಈ ಮಟ್ಟದ ಕಾರ್ಯಕ್ರಮ ಆಯೋಜಿಸಲು ಸಾಧ್ಯವಿಲ್ಲ. ಇದೊಂದು ಅದ್ಭುತ ಅನುಭವವಾಗಿತ್ತು. ಜಲ್ಸದ ವಾತಾವರಣ, ಅದರ ಆಯೋಜನೆ ಅದರ ಏರ್ಪಾಡು, ಎಲ್ಲವು ಅದ್ಭುತ ಮತ್ತು ಸುಂದರವಾಗಿತ್ತು. ಭಾಷಣಗಳು ಚಾತುರ್ಯಪೂರ್ಣವಾಗಿದ್ದವು. ಜಲ್ಸದ ಸಂದೇಶ ಜಾಗತಿಕ ಸಂದೇಶವಾಗಿತ್ತು. 'ಸರ್ವಲೋಕಗಳ ಹಿತ'.

ಹುಝೂರ್‌ರ ಭೇಟಿ ತುಂಬ ರೋಚಕವಾಗಿತ್ತು. ಎಲ್ಲರ ಮಾತುಗಳನ್ನು ತುಂಬ ಶಾಂತಿ ಮತ್ತು ತಾಳ್ಮೆಯಿಂದ ಕೇಳಿದರು. ಮತ್ತು ಅವರಿಗೆ ಉತ್ತರವು ನೀಡಿದರು. ಎಷ್ಟೆಲ್ಲ ಪ್ರಶ್ನೆಗಳನ್ನು ಕೇಳಲಾಯಿತು. ಅದಕ್ಕೆಲ್ಲ ಉತ್ತರ ನೀಡಿದರು. ಹುಝೂರ್‌ರ ಈ ಭೇಟಿ ತುಂಬ ತುಂಬ ಉನ್ನತಮಟ್ಟದಾಗಿತ್ತು.

* ಮೆಸೆಡೋನಿಯಾ ತಂಡದವರಿಂದ ಹುಝೂರ್‌ರ ಈ ಭೇಟಿ 11. 40 ಗಂಟೆಯವರಗೆ ನಡೆಯಿತು. ಕೊನೆಯಲ್ಲಿ ತಂಡದ ಎಲ್ಲ ಸದಸ್ಯರು ಹುಝೂರ್‌ರೊಡನೆ ಭೇಟಿಯಾಗುವ ಭಾಗ್ಯ ಪಡೆದರು. ಮತ್ತು ಭಾವಚಿತ್ರ ತೆಗೆಸುವ ಭಾಗ್ಯ ಪಡೆದರು.

ಹುಝೂರ್‌ರ ಅನ್ವರ್(ಅಬಿಅ) ಭೇಟಿಯ ಅಂತ್ಯದಲ್ಲಿ ತಂಡದ ಎಲ್ಲ ಸದಸ್ಯರಿಗೆ ಲೇಖನಿ (Pen) ನೀಡಿದರು. ಬಾಲಕ ಬಾಲಕಿಯರಿಗೆ ಪ್ರೀತಿಯಿಂದ ಚಾಕ್ಲೇಟ್‌ಗಳನ್ನು ನೀಡಿದರು.

**"ಹುಝೂರ್‌ರೊಡನೆ ಬೋಸ್ನಿಯನ್ ತಂಡದ ಭೇಟಿ"**

ಅನಂತರ ಈ ನಿಯೋಜಿತ ಕಾರ್ಯಕ್ರಮದನ್ವಯ (Bosnia) ದಿಂದ ಬಂದ ತಂಡವು ಹುಝೂರ್ ಅನ್ವರ್ (ಅಬಿಅ) ರೊಡನೆ ಭೇಟಿಯಾಗುವ ಭಾಗ್ಯ ಪಡೆದರು.

ಬೋಸ್ನಿಯಾದಿಂದ ಈ ವರ್ಷ 47 ಜನರ ಒಳಗೊಂಡ ಒಂದು ತಂಡ ಜರ್ಮನಿ ವಾರ್ಷಿಕ ಜಲ್ಸಕ್ಕೆ ಆಗಮಿಸಿತ್ತು. ಅದರಲ್ಲಿ ಒಂದು ದೊಡ್ಡ ಸಂಖ್ಯೆ ಜಮತಿನ ಬಗ್ಗೆ ಕಳಿಯುತ್ತಿರುವವರದ್ದಾಗಿತ್ತು. ಹುಝೂರ್ ಆ ತಂಡದವರೊಂದಿಗೆ ಕೇಳಿದರು. ಜಲ್ಸ ಹೇಗಿತ್ತು. ಆಗ ತಕ್ಷಣದಿಂದ ತಂಡದ ಎಲ್ಲ ಸದಸ್ಯರು ಒಕ್ಕೊರಲಿನಿಂದ ಹೇಳಿದರು. ಜಲ್ಸ ತುಂಬ ಒಳ್ಳೆಯದಾಗಿತ್ತು. ಎಲ್ಲಾ ಏರ್ಪಾಡುಗಳು ತುಂಬಾ ಚೆನ್ನಾಗಿದ್ದವು. ಪ್ರತಿಯೊಂದು ಸುವ್ಯವಸ್ಥಿತವಾಗಿತ್ತು.

* ಮಹಿಳೆಯೊರ್ವಳು ಹೇಳಿದರು. ನಾನು ಈ ಜಲ್ಸದಲ್ಲಿ ಭಾಗವಹಿಸಿದ್ದು ನನಗೆ ಹೆಮ್ಮೆಯ ವಿಷಯವಾಗಿದೆ. ನಾನು ಹುಝೂರ್ ಅನ್ವರ್ ಅವರ ಎಲ್ಲಾ ಭಾಷಣಗಳನ್ನು ಕೇಳಿದ್ದೇನೆ. ಆ ಬಗ್ಗೆ ಹೇಳಿಕೊಳ್ಳಲು ನನ್ನಲ್ಲಿ ಪದಗಳಿಲ್ಲ.

ನಂತರ ಅವರು ತನ್ನ ತಂಗಿಗಾಗಿ ದುಆ ಮಾಡಲು ಭಿನ್ನವಿಸಿಕೊಂಡರು ಮತ್ತು ಮನೆಯಲ್ಲಿಯ ಎಲ್ಲಾ ತೊಂದರೆಗಳು ದೂರವಾಗಲು ಪ್ರಾರ್ಥಿಸಲು ಹೇಳಿದರು. ಆಗ ಹುಝೂರ್ ಹೇಳಿದರು. "ಅಲ್ಲಾಹನು ಔದಾರ್ಯ ತೋರಲಿ."

* ಇನ್ನೊರ್ವ ಮಹಿಳಾ ಅತಿಥಿ ಹೇಳಿದಳು. ಈ ಸಮಯ ನಾನು ಹುಝೂರ್‌ರ ಮುಂದಿದ್ದೇನೆ. ಒರ್ವ ಮಹೋನ್ನತ ವ್ಯಕ್ತಿತ್ವದ ಮುಂದೆ. ನಾನು ಹುಝೂರ್‌ರಿಗೆ ಕೃತಜ್ಞತೆ ಅರ್ಪಿಸಬಯಸುತ್ತಿದ್ದೇನೆ. ನಮಗೆಲ್ಲ ಚೆನ್ನಾಗಿ ನೋಡಿಕೊಂಡಿದ್ದಾರೆ. ಹುಝೂರ್ ಅನ್ವರ್ ಅವರ ಭಾಷಣಗಳು ತುಂಬ ಚೆನ್ನಾಗಿದ್ದವು. ಅವು ನಮ್ಮ ಮೇಲೆ ಬಹಳ ಪ್ರಭಾವ ಬೀರಿವೆ.

ಆಗ ಹುಝೂರ್ ಹೇಳಿದರು. ಅಲ್ಲಾಹನು ಅನುಗ್ರಹಿಸಲಿ.

* Zeinba ಎಂಬ ಮಹಿಳೆಯೋರ್ವಳು ಹೇಳಿದರು. ಜಲ್ಸದಲ್ಲಿ ಭಾಗವಹಿಸಿದ ಕಾರಣ ನಮಗೆ ಧರ್ಮದ ಕುರಿತು ನಿಜವಾದ ಜ್ಞಾನ ಪ್ರಾಪ್ತವಾಗಿದೆ ಮತ್ತು ಬಹಳಷ್ಟು ಹೆಚ್ಚಿನ ಜ್ಞಾನ ದೊರೆತಿದೆ. ಹುಝೂರ್ ಅನ್ವರ್ ಅವರ ಪ್ರಕಾಶಮಯ ವ್ಯಕ್ತಿತ್ವ ನಮಗೆ ತುಂಬಾ ಪ್ರಭಾವಿತಗೊಳಿಸಿದೆ.

**(ಮುಂದುವರಿಯುವುದು)**

## *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮಲ್ಲಾಹ್. (ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.